6. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆ:

ಶ್ರೀ ವೀರಣ್ಣ ಚರಂತಿಮಠ (ಬಾಗಲಕೋಟೆ) :- ಮಾನ್ಯ ಸಭಾಧ್ಯಕ್ಷರೆ, 2013ರ ಫೆಬ್ರವರಿ 04ರಂದು ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕೆ ವಂದನಾ ನಿರ್ಣಯವನ್ನು ಈಗಾಗಲೇ ಮಂಡಿಸಿದ್ದೇವೆ. ನಮ್ಮ ವಿಜಯಕುಮಾರ್‌ರವರು ಅನುಮೋದನೆಯನ್ನು ಕೂಡಾ ಮಾಡಿದ್ದಾರೆ. ಈ ಸರ್ಕಾರದ ಕಾನೂನು ಸುವ್ಯವಸ್ಥೆ ಬಗ್ಗೆ, ಹಣಕಾಸಿನ ನಿರ್ವಹಣೆಯ ಬಗ್ಗೆ ಅಪಾರವಾದ ಮೆಚ್ಚುಗೆಯನ್ನು ಘನತೆವೆತ್ತ ರಾಜ್ಯಪಾಲರು ವ್ಯಕ್ತಪಡಿಸಿದ್ದಾರೆ. ಕಳೆದ ನಾಲ್ಕೂ ಮುಕ್ಕಾಲು ವರ್ಷಗಳಲ್ಲಿ ನಮ್ಮ ಸರ್ಕಾರ ಅನೇಕ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತಂದಿದೆ. ಶಿಕ್ಷಣ, ಆರೋಗ್ಯ, ನೀರಾವರಿ, ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೆಲಸವನ್ನು ಮಾಡುತ್ತಿದೆ. ಇವತ್ತು ಈ ಬಿಸಿ ಊಟದ ಕಾರ್ಯಕ್ರಮದಿಂದ, ಸೈಕಲ್ ವಿತರಣೆಯಿಂದ, ಪಠ್ಯಪುಸ್ತಕಗಳ ವಿತರಣೆಯಿಂದ, ಸ್ಕೂಲ್ ಬ್ಯಾಗೇಜುಗಳನ್ನು ಕೊಡುವುದರ ಮುಖಾಂತರ ಪ್ರಾಥಮಿಕ ಶಾಲೆಗೆ ಮಕ್ಕಳನ್ನು ಆಕರ್ಷಣೆ ಮಾಡುವುದರಲ್ಲಿ ನಾವು ತುಂಬಾ ಯಶಸ್ವಿಯಾಗಿದ್ದೇವೆ ಎಂದು ಹೇಳಬಹುದು. ಹಾಜರಾತಿ ಸಂಖ್ಯೆ ಮೊದಲಿಗಿಂತಲೂ ತುಂಬಾ ಹೆಚ್ಚಾಗಿದೆ ಎನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ. ಉನ್ನತ ಶಿಕ್ಷಣದಲ್ಲಿ ಒಂದು ಕಾನೂನು ಉನ್ನತ ಶಿಕ್ಷಣ, ತೋಟಗಾರಿಕೆ, ಕೃಷಿ, ನೈಸರ್ಗಿಕ ಸಂಪನ್ಮೂಲಗಳು, ಸಂಗೀತ, ಸಂಸ್ಕೃತ, ಜಾನಪದ ಮುಂತಾದ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿ ಜನಗಳಿಗೆ ಈ ಮುಖಾಂತರ ಅವಕಾಶವನ್ನು ಮಾಡಿಕೊಡುವಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿದೆ. ಇವತ್ತು ವಿಧಾನಮಂಡಲದ ಉಭಯಸದನಗಳ ಸರ್ವಾನುಮತದ ನಿರ್ಣಯದ ಪ್ರತಿಫಲವಾಗಿ ಹೈದರಾಬಾದ್-ಕರ್ನಾಟಕಕ್ಕೆ 371(J) ತಿದ್ದುಪಡಿ ಲಭಿಸಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇದಕ್ಕಾಗಿ ನಾನು ಕೇಂದ್ರ ಸರ್ಕಾರವನ್ನು ಕೂಡಾ ಅಭಿನಂದಿಸುತ್ತೇನೆ. ನೀರಾವರಿ ಕ್ಷೇತ್ರಗಳಲ್ಲಿ 17 ಸಾವಿರ ಕೋಟಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಇವತ್ತು ಕುಂಠಿತಗೊಂಡಂಥ ಸುಮಾರು 25 ನೀರಾವರಿ ಯೋಜನೆಗಳನ್ನು ಮುಗಿಸುವುದಲ್ಲದೆ 9 ಉಪಯೋಜನೆಗಳಲ್ಲಿ 6

ಉಪ ಯೋಜನೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಇನ್ನೂ 3 ಉಪ ಯೋಜನೆಗಳನ್ನು ಅತಿ ಬೇಗನೇ ಪ್ರಾರಂಭ ಮಾಡುತ್ತೇವೆಂಬ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದಕ್ಕಾಗಿ ಸುಮಾರು 20 ಲಕ್ಷ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎನ್ನೂವ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ಬಾಗಲಕೋಟೆ ಪಟ್ಟಣಕ್ಕೆ 519.6 ನೀರು ನಿಲ್ಲಿಸಿದಾಗ 523 ರವರೆಗೆ ನಾವು acquisition ಮಾಡಿಕೊಂಡಿದ್ದೆವು. ಇವತ್ತು 524.756 height ಗೆ ಆ ಡ್ಯಾಮನ್ನು ಎತ್ತರಿಸಿದಾಗ ಬೇಕಾಗುವಂತಹ ಮೂಲಭೂತ ಸೌಲಭ್ಯವನ್ನು ಕಲ್ಪಿಸಿಕೊಡಲು ಈಗಾಗಲೇ 3,600 ಎಕರೆ ಜಮೀನನ್ನು 4(1) ಮಾಡುವುದಕ್ಕೆ ಮೊನ್ನೆ ಪುನರ್ವಸತಿ, ಪುನರ್ ನಿರ್ಮಾಣ ಸಭೆಯಲ್ಲಿ ನಿರ್ಣಯವಾಗಿದೆ. ಅದು ಇನ್ನೇನು cabinet ಗೆ ಬಂದು ಪಾಸ್ ಆಗುತ್ತಿದೆ. ಅದರ ಜೊತೆಗೆ ಯೂನಿಟ್–2 ರಲ್ಲಿ 550 ಕೋಟಿ ರೂ.ಗಳ ಟೆಂಡರ್ ಕರೆದು ಮೂಲಭೂತ ಸೌಲಭ್ಯ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಹಿಂದೆ 521 ರವರೆಗೆ ನೀರು ನಿಲ್ಲಿಸಿದಾಗ, 519.6 ನೀರು ನಿಲ್ಲಿಸಿದಾಗ ಬಾಗಲಕೋಟೆಯ ವ್ಯವಸ್ಥೆ ಛಿದ್ರ–ಛಿದ್ರವಾಗಿತ್ತು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಬೇಕಾದರೆ 7–8 ಕಿ.ಮೀ. ಸುತ್ತಿಕೊಂಡು ಬರಬೇಕಿತ್ತು. ಮಾನ್ಯ ಸಭಾಧ್ಯಕ್ಷರೆ, ನಿಮ್ಮ ಮುಖಾಂತರ ಹೇಳಬಯಸುತ್ತೇನೆ; 105 ಕೋಟಿ ರೂ. ವೆಚ್ಚದಲ್ಲಿ 16 ಕಿ.ಮೀ. ರಸ್ತೆಯನ್ನು, 5 ಬ್ರಿಡ್ಜ್‌ಗಳನ್ನು ಮಾಡಿ ಒಡೆದು ಹೋದಂತಹ ಊರನ್ನು ಒಂದುಗೂಡಿಸುವ ಕಾರ್ಯದಲ್ಲಿ ನಮ್ಮ ಸರ್ಕಾರ ಅತ್ಯಂತ ಯಶಸ್ವಿಯಾಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಅದರ ಜೊತೆ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ 5 ಕೋಟಿ ರೂ. ಹಣವನ್ನು ಕೊಟ್ಟು ಅನೇಕ ಕೆರೆಗಳನ್ನು ನಿರ್ಮಾಣ ಮಾಡುವಂತಹ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಮಾಡಿದೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 5 ಕೋಟಿ ರೂ. ಕೊಟ್ಟು ಪ್ರತಿ ಬಾರಿ ಒಂದು ಸಾವಿರ ಹಳ್ಳಿಗಳನ್ನು ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಅಳವಡಿಸುವಂತಹ ಕೆಲಸ ನಮ್ಮ ಸರ್ಕಾರದಿಂದ ಆಗಿದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಕಳೆದ 3 ವರ್ಷಗಳಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗೆ ಕೇಂದ್ರ ಸರ್ಕಾರದಿಂದ ಒಂದು ರೂಪಾಯಿ ಹಣ ಬಂದಿಲ್ಲ. ಆದರೆ, ನಮ್ಮ ಸರ್ಕಾರ "ನಮ್ಮ ಗ್ರಾಮ–ನಮ್ಮ ರಸ್ತೆ" ಎಂಬ ಯೋಜನೆಯಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಕಿ.ಮೀ. ರಸ್ತೆ, ಮೊದಲು

20 ಕಿ.ಮೀ. ಇತ್ತು. ಈಗ 30 ಕಿ.ಮೀ.ಗೆ ವಿಸ್ತರಿಸಿ, ಟೆಂಡರ್ ಆಗಿ work order ಕೊಡುವ ಮಟ್ಟಕ್ಕೆ ಬಂದಿದೆ. 50 ಕಿ.ಮೀ. ಗ್ರಾಮೀಣ ಭಾಗದ ರಸ್ತೆಯನ್ನು ಅಭಿವೃದ್ಧಿ ಪಡಿಸುವಂತಹುದು, ರಸ್ತೆ ಅಭಿವೃದ್ಧಿಗೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ ಎಂದರೆ ತಪ್ಪಾಗಲಾರದು. ಜಿಲ್ಲಾ ರಸ್ತೆಗಳು ಇರಬಹುದು, ರಾಜ್ಯ ಹೆದ್ದಾರಿ, ಗ್ರಾಮೀಣ ರಸ್ತೆಗಳು ಇರಬಹುದು, Multi-village scheme ನಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ನದಿ ನೀರನ್ನು ಹಳ್ಳಿಗಳಿಗೆ ಮುಟ್ಟಿಸುವ ಕೆಲವು ಕಾರ್ಯ ಪೂರ್ತಿಯಾಗಿದೆ, ಕೆಲವು ಪ್ರಾರಂಭದ ಹಂತದಲ್ಲಿದೆ, ಇನ್ನು ಕೆಲವು ಕೆಲಸ ನಡೆಯುತ್ತಿದೆ. ಹೀಗೆ ಗ್ರಾಮೀಣ ಭಾಗದಲ್ಲಿಯೂ ಕೂಡಾ ಒಳ್ಳೆಯ ಕಾರ್ಯ ನಮ್ಮ ಸರ್ಕಾರದಿಂದ ಆಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಬರಗಾಲವಿದ್ದರೂ ಕೂಡಾ ಇವತ್ತು ಕೃಷಿ ಉತ್ಪಾದನೆ, ಹೋದ ವರ್ಷ 118 ಲಕ್ಷ ಟನ್ ಆಗಿದೆ. ಈ ವರ್ಷ 125 ಲಕ್ಷ ಟನ್ ಮಾಡುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ನಮ್ಮ ಸರ್ಕಾರ ಬರಗಾಲವನ್ನು ಅತ್ಯಂತ ಸಮರ್ಪಕವಾಗಿ ಎದುರಿಸಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಜಾನುವಾರುಗಳಿಗೆ ಗೋಶಾಲೆಗಳು ಕಡಿಮೆ ಆಗಿವೆ, ಬಂದ್ ಮಾಡಿದ್ದಾರೆಂದು ಹೇಳಿದರು. ಈ ಭಾಗದಲ್ಲಿ ಹೇಗಿದೆ ಎಂಬುದು ನನಗೆ ಗೊತ್ತಿಲ್ಲ, ಆದರೆ, ನಮ್ಮ ಭಾಗದಲ್ಲಿ, ನಮ್ಮ ಕ್ಷೇತ್ರದಲ್ಲಿ 3–4 ಗೋ ಶಾಲೆ ತೆಗೆದರೂ ಇವತ್ತು ಬಹಳಷ್ಟು ಕಿಮ್ಮತ್ತಿನ ಜಾನುವಾರುಗಳನ್ನು ತಂದು ಕಟ್ಟಿ ಹಾಕಲು ನಮ್ಮ ಭಾಗದ ರೈತರು ಯಾರೂ ತಯಾರು ಆಗಲಿಲ್ಲ. ಹೀಗಾಗಿ ಅನಿವಾರ್ಯವಾಗಿ ಗೋ ಶಾಲೆಗಳನ್ನು ಮುಚ್ಚುವ ಪ್ರಸಂಗ ಬಂತು. ಹೀಗಾಗಿ ನನ್ನ ಕ್ಷೇತ್ರದಲ್ಲಿ 4 ಗೋಶಾಲೆ ತೆರೆದರೂ ಕೂಡಾ ಯಾರೂ ಜಾನುವಾರುಗಳನ್ನು ತಂದು ಬಿಡಲಿಲ್ಲ ಎಂಬ ಕಾರಣಕ್ಕೆ ಅವುಗಳನ್ನು ಮುಚ್ಚುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇವತ್ತಿನ ದಿನ ಯಾವುದೇ ನಗರೋತ್ಥಾನದಲ್ಲಿ ಪ್ರತಿಯೊಂದು ಮಹಾನಗರ ಸಭೆಗೆ 200 ಕೋಟಿ, ಜಿಲ್ಲಾ ಮುಖ್ಯ ಕೇಂದ್ರದ ನಗರಸಭೆಗೆ 30 ಕೋಟಿ ರೂ. ಹಾಗೂ ನಗರಸಭೆಗಳಿಗೆ 15 ಕೋಟಿ ರೂ, ಪುರಸಭೆಗಳಿಗೆ 5 ಕೋಟಿ ರೂ. ಈ ರೀತಿ ನಗರದ ಸರ್ವಾಂಗೀಣ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಲ್ಲಿ ಹಣ ಬಿಡುಗಡೆ ಮಾಡಿ, ನಗರದಲ್ಲಿಯೂ ಕೂಡಾ ಅಭಿವೃದ್ಧಿಯ ಕೆಲಸಕ್ಕೆ ಹೆಚ್ಚು ಒತ್ತನ್ನು ನಮ್ಮ ಸರ್ಕಾರ

ಕೊಟ್ಟಿದೆ. ಅದರ ಜೊತೆಗೆ ರೈಲ್ವೆ ಯೋಜನೆ, ಇಡೀ ದೇಶದಲ್ಲಿಯೇ 50:50 ರ ಅನುಪಾತದಲ್ಲಿ ಶೇಕಡ 50 ರಷ್ಟು ಹಣವನ್ನು ರೈಲ್ವೆ ಇಲಾಖೆಗೆ ಕೊಡುತ್ತಿದ್ದೇವೆ. ಆದರೂ ಕೂಡಾ ನಮ್ಮ ರೈಲ್ವೆ ಯೋಜನೆಗಳು ಸಕಾಲಕ್ಕೆ ಪೂರ್ತಿಯಾಗುತ್ತಿಲ್ಲ. ಯಾವುದೇ ರಾಜ್ಯವೂ ಕೂಡಾ 50:50 ರ ಅನುಪಾತದಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ನಾವು ಶೋಲಾಪುರ-ಬಿಜಾಪುರ, ಬಿಜಾಪುರದಿಂದ ಗದಗ್ ನಮ್ಮ ಶೇಕಡ 50ರಲ್ಲಿ ಇವತ್ತು ಮುಗಿಯುವಂತಹ ಒಂದು ಪ್ರಸಂಗ ಬಂತು. ಕುಡಚಿ-ಬಾಗಲಕೋಟೆಗೂ 50%. ಏನು ರೈಲ್ವೆ ಯೋಜನೆಗಳು ಕರ್ನಾಟಕದಲ್ಲಿ ನಾವು ತೆಗೆದುಕೊಂಡಿದ್ದೇವೆ? ಎಲ್ಲದಕ್ಕೂ ಕೂಡಾ ನಮ್ಮ ಪಾಲಿನ ಶೇಕಡಾ 50ರಷ್ಟು ಹಣವನ್ನು ಒದಗಿಸಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಚಿಸುತ್ತೇನೆ. ಪ್ರತಿಯೊಂದು ಜಿಲ್ಲೆಗೆ ವಿಮಾನ ಸಂಪರ್ಕ ಕಲ್ಪಿಸಬೇಕೆಂದು ಗುಲ್ಬರ್ಗಾ ಮತ್ತು ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಕಾರ್ಯ ನಡೆಯುತ್ತಿದೆ. ಬೆಳಗಾವಿ-ಹುಬ್ಬಳ್ಳಿ ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವಂತಹ ಕೆಲಸ ನಡೆಯುತ್ತಿದೆ. ಆ ಒಂದು ದೃಷ್ಟಿಯಲ್ಲಿ ಅಲ್ಲ, ಪ್ರತಿಯೊಂದು ವಿಚಾರದಲ್ಲಿಯೂ ಕೂಡಾ, ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡಾ ಒಳ್ಳೆಯ ಅಭಿವೃದ್ಧಿ ಪರ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಎಂಬ ಮಾತನ್ನು ಹೇಳಬಯಸುತ್ತೇನೆ ಜೊತೆಗೆ ಕೃಷಿ, ಇವತ್ತು ನಾಲ್ಕು ಮುಕ್ಕಾಲು ವರ್ಷದ ಅವಧಿಯಲ್ಲಿ ಬೀಜ ಮತ್ತು ಗೊಬ್ಬರವನ್ನು ವಿತರಣೆ ಮಾಡುವಲ್ಲಿ ಯಾವುದೇ ತೊಂದರೆ ಆಗದಂತೆ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ಬರಗಾಲ ಇದೆ ಎಂದು ಸುಮಾರು 15 ಲಕ್ಷ ಜನ ರೈತರಿಗೆ 25 ಸಾವಿರ ಸಾಲ, ಒಟ್ಟಾರೆ 3600 ಕೋಟಿ ರೂ.ಸಾಲ ಮನ್ನಾ ಮಾಡಿದ ಮೊದಲ ಸರ್ಕಾರ ನಮ್ಮದು. ಜೊತೆಗೆ 16 ಲಕ್ಷ 49 ಸಾವಿರ ಭಾಗ್ಯಲಕ್ಷ್ಮಿ ಬಾಂಡ್‌ಗಳ ವಿತರಣೆಯಾಗಿದೆ. ಉಳಿದ 5,192 ಬಾಂಡ್‌ಗಳನ್ನು ಅತಿ ಬೇಗನೇ ಹಂಚಿಕೆ ಮಾಡುತ್ತೇವೆಂಬ ಮಾತನ್ನು ಹೇಳಬಯಸುತ್ತೇನೆ. ಸಕಾಲ ಎನ್ನುವ ಒಂದು ಯೋಜನೆಯನ್ನು ಜಾರಿಗೆ ತಂದು 265 ಸೇವೆಗಳನ್ನು ಅದರಲ್ಲಿ ಸೇರಿಸಿ ಇವತ್ತು 1 ಕೋಟಿ 65 ಲಕ್ಷ ನಾಗರಿಕರಿಗೆ ಅನಕೂಲ ಮಾಡಿಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂಬ ಮಾತನ್ನು ನಿಮ್ಮ ಮುಖಾಂತರ ಹೇಳಬಯಸುತ್ತೇನೆ. ಅದೇ ರೀತಿ ಇವತ್ತು 2011 ರಿಂದ 2021 ರ ವರೆಗೆ ನೀರಾವರಿ ದಶಕ ಎಂದು ಘೋಷಣೆ ಮಾಡಿದ್ದೇವೆ. ಮೊನ್ನೆ ಕಾಂಗ್ರೆಸ್ ಪಕ್ಷದವರು"ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ" ಎಂದು ಪಾದ ಯಾತ್ರೆ

ಮಾಡಿದರು. ಆ ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ ಹೋಗುವ ಬದಲು "ಕಾವೇರಿ ಕಡೆಗೆ" ಬಂದಿದ್ದರೆ ನಿನ್ನೆ ಹಾಗೂ ಇವತ್ತಿನ ಚರ್ಚೆಗೆ ಸ್ವಲ್ಪಮಟ್ಟಿನ ಪರಿಹಾರವಾದರೂ ಸಿಗುತ್ತಿತ್ತು ಎಂಬ ನನ್ನ ಭಾವನೆಯನ್ನು ವ್ಯಕ್ತಪಡಿಸುವುದನ್ನು ನಾನು ಮರೆಯುವುದಿಲ್ಲ. ಆ ನಿಟ್ಟಿನಲ್ಲಿ ಇವತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮೊಟ್ಟ ಮೊದಲನೆಯದಾಗಿ, ಪ್ರತ್ಯೇಕ ಇಲಾಖೆಯನ್ನು ಸ್ಥಾಪನೆ ಮಾಡಿದ್ದೇವೆ. ರಾಜ್ಯದಲ್ಲಿ ಮೊದಲ ಬಾರಿಗೆ ತಾಂಡಾ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿದ್ದೇವೆ. ಅಲ್ಪಸಂಖ್ಯಾತರಿಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಜೊತೆಗೆ, ಮೊದಲ ಬಾರಿಗೆ ಹಜ್ ಭವನ ನಿರ್ಮಾಣ ಮಾಡಿಕೊಟ್ಟ ಶ್ರೇಯಸ್ಸು ಇವತ್ತು ನಮ್ಮ ಸರ್ಕಾರಕ್ಕೆ ಹೋಗುತ್ತದೆಂಬ ಮಾತನ್ನು ಹೇಳುತ್ತೇನೆ. ಆರೋಗ್ಯ ಯೋಜನೆಯಲ್ಲಿ ಸಾಕಷ್ಟು ಸೌಲಭ್ಯಗಳನ್ನು ನಮ್ಮ ಸರ್ಕಾರ ಕೊಡುತ್ತಿದೆ. ಪ್ರಸೂತಿ ಆರೈಕೆ, ಮಡಿಲು, ತಾಯಿಭಾಗ್ಯ, ಆರೋಗ್ಯ ಕವಚ ವಾಜಪೇಯಿ ಆರೋಗ್ಯ ಶ್ರೀ ಸುವರ್ಣ ಆರೋಗ್ಯ ಚೈತನ್ಯ, ಸಂಚಾರಿ ವೈದ್ಯಕೀಯ ಘಟಕ, ಆರೋಗ್ಯ ಬಂಧು ಮುಂತಾದ ಯೋಜನೆಗಳನ್ನು ಜಾರಿಗೆ ತಂದು ಬಡವರಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥೆಯನ್ನು ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡಿದೆ ಎಂದು ಹೇಳಬಯಸುತ್ತೇನೆ. ಯಶಸ್ವಿನಿ ಯೋಜನೆಯಡಿಯಲ್ಲಿ 75 ಸಾವಿರ ಸಹಕಾರಿ ರೈತ ಕುಟುಂಬಗಳಿಗೆ 805 ವಿವಿಧ ಶಸ್ತ್ರ ಚಿಕಿತ್ಸೆ ಪಡೆಯಲು ಪ್ರತಿ ವರ್ಷ ನೆರವನ್ನು ಕೊಡುವಂತಹದು 17.5 ಲಕ್ಷ ಕುಟುಂಬಗಳಿಗೆ ಬಿ.ಪಿ.ಎಲ್. ಕೆಳಗಿರುವವರಿಗೆ ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಹಿಂದೆ 2004–2006ರವರೆಗೆ ಇದ್ದಂತಹ ಸರ್ಕಾರದ ಅವಧಿಯಲ್ಲೂ ಒಮ್ಮೆ ನೆರೆ ಬಂದಿತ್ತು. ಆಗ ಪರಿಹಾರ ಧನವಾಗಿ 800 ರೂ., 1500ರೂ.ಗಳನ್ನು ಕೊಟ್ಟಿದ್ದರು. ಆದರೆ ನಂತರ ಬಂದಂತಹ ನಮ್ಮ ಸರ್ಕಾರದ ಅವಧಿಯಲ್ಲಿ ನೆರೆ ಬಂದಂತಹ ಸಂದರ್ಭದಲ್ಲಿ ಅನೇಕ ಹಳ್ಳಿಗಳನ್ನು ಸ್ಥಳಾಂತರ ಮಾಡಿದ್ದಲ್ಲದೆ, flood ಬಂದು ನಿರಾಶ್ರಿತರಾದವರಿಗೆ ಸುಮಾರು 52 ಸಾವಿರ ಮನೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆ. ಅದಲ್ಲದೇ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 5 ವರ್ಷಗಳಲ್ಲಿ 9 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವಂತಹ ಕೆಲಸ ಈ ಸರ್ಕಾರದಿಂದ ಆಗಿದೆ ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಇವತ್ತು ಅನೇಕ ಕೌಶಲ್ಯ ತರಬೇತಿ ನೀಡಿ, 6 ಲಕ್ಷ ಯುವಕರಿಗೆ ಉದ್ಯೋಗಾವಕಾಶ

ಒದಗಿಸಿಕೊಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಜರ್ಮನ್ ನೆರವಿನೊಂದಿಗೆ ಸುಮಾರು 70 ITIಗಳನ್ನು ಉನ್ನತ ದರ್ಜೆಗೆ ಏರಿಸುವಂತಹ ಕೆಲಸವನ್ನು ನಾವು ಮಾಡಿದ್ದೇವೆ ಎನ್ನುವಂತಹ ಮಾತನ್ನು ಇವತ್ತು ಹೇಳುತ್ತೇನೆ. ಆಡಳಿತವನ್ನು ಸರಳಗೊಳಿಸುವ ಸಲುವಾಗಿ ಇವತ್ತು ಜನಸ್ನೇಹಿ 900 ಅಟಲ್‌ಜೀ ಜನಶ್ರೀ ಕೇಂದ್ರಗಳ ಮುಖಾಂತರ ಅವರ ದಾಖಲೆಗಳ ನಿರ್ವಹಣೆಯಲ್ಲಿ ಸುಧಾರಣೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ಇವತ್ತು ನಮ್ಮ ಸರ್ಕಾರ ಮಾಡಿದೆ. ಮೆಟ್ರೋ ಯೋಜನೆ ಕೂಡ ಈಗಾಗಲೇ ಮೊದಲನೇ ಹಂತದಲ್ಲಿ ಅರ್ಧ ಮುಗಿದು, ಈಗ ಪ್ರಾರಂಭ ಆಗಿದೆ, ಇನ್ನರ್ಧ ಮುಗಿಯುವುದಿದೆ. ಇನ್ನು ಎರಡನೇ ಹಂತಕ್ಕೂ ಕೂಡ ಈಗಾಗಲೇ ನಾವು ಚಾಲನೆಯನ್ನು ಕೊಟ್ಟಿದ್ದೇವೆ. ವಿದ್ಯುತ್ ಉತ್ಪಾದನೆ ಬಗ್ಗೆ ಬಹಳಷ್ಟು ತೊಂದರೆಯಿದೆ. ಬಹಳಷ್ಟು ಗೌರವಾನ್ವಿತ ಸದಸ್ಯರೂ ಕೂಡ ಅದರ ಬಗ್ಗೆ ಮಾತನಾಡಿದ್ದಾರೆ. ಕಳೆದ 20 ವರ್ಷಗಳಿಂದ ವಿದ್ಯುತ್ತಿನ ಉತ್ಪಾದನೆಗೆ ಯಾರೂ ಕೂಡ ಲಕ್ಷ್ಯ ಕೊಟ್ಟಿರಲಿಲ್ಲ. ಇವತ್ತು ಕೂಡಿಗಿಯಲ್ಲಿ 4 ಸಾವಿರ ಮೆಗಾವ್ಯಾಟ್, ಛತ್ತೀಸ್‌ಘಡದಲ್ಲಿ 2 ಸಾವಿರ ಮೆಗಾವ್ಯಾಟ್, ಬಳ್ಳಾರಿಯಲ್ಲಿ & ಉಡುಪಿಯಲ್ಲಿ ವಿದ್ಯುತ್ ಉತ್ಪಾದನೆಯ ಕಾರ್ಯ ಇವತ್ತು ಪ್ರಾರಂಭವಾಗಿದೆ. ಆ ಎಲ್ಲಾ ಯೋಜನೆಗಳು ಪೂರ್ಣಗೊಂಡರೆ, ನಮ್ಮ ರಾಜ್ಯ ಇವತ್ತು ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪ್ರವಾಸೋದ್ಯಮ ಇಲಾಖೆಯಲ್ಲಿ ಸಾಕಷ್ಟು ಅನುಕೂಲ ಮಾಡಿ, ಪ್ರವಾಸೋದ್ಯಮ ಇಲಾಖೆಯನ್ನು ಸದೃಢಗೊಳಿಸುವಂತಹ ಕಾರ್ಯ ನಮ್ಮ ಸರ್ಕಾರದಿಂದ ನಡೆದಿದೆ. ಸುಮಾರು ಎಂಟೂವರೆ ಕೋಟಿ ಪ್ರವಾಸಿಗರು ಇವತ್ತು ಕರ್ನಾಟಕಕ್ಕೆ ಭೇಟಿ ಕೊಟ್ಟಿರುವುದನ್ನು ನಾವು ಗಮನಿಸಬೇಕಾಗುತ್ತದೆ. ಪ್ರವಾಸೋದ್ಯಮಕ್ಕೆ ಬೇಕಾಗಿರುವಂತಹ ಮೂಲಭೂತ ಸೌಲಭ್ಯಗಳನ್ನು ಇವತ್ತು ನಮ್ಮ ಸರ್ಕಾರ ಒದಗಿಸಿಕೊಟ್ಟು, ಆ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವಂತೆ ಮಾಡಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಒಂದೇ ರಂಗದಲ್ಲಿ ಅಲ್ಲ, ಪ್ರತಿಯೊಂದು ರಂಗದಲ್ಲಿ ನಮ್ಮ ಸರ್ಕಾರ ಸಾಧನೆ ಮಾಡಿದೆ. ಮೊನ್ನೆ ಸೂರಜ್‌ಕುಂಡ್‌ನಲ್ಲಿ ನಡೆದಂತಹ ಕಾರ್ಯಕ್ರಮವೊಂದರಲ್ಲಿ ನಮ್ಮ ಘನತೆವೆತ್ತ ರಾಷ್ಟ್ರಪತಿಗಳೂ ಕೂಡ ಕರ್ನಾಟಕದ ಕಲೆ ಮತ್ತು ಸಂಸ್ಕೃತಿಯನ್ನು ಕೊಂಡಾಡಿರುವಂತಹ ವಿಷಯ ಇವತ್ತು

ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನಾವು ನೋಡಿದ್ದೇವೆ. ನಮ್ಮ ಸಂಸ್ಕೃತಿಯನ್ನು ಗೌರವಾನ್ವಿತ ರಾಷ್ಟ್ರಪತಿಗಳೂ ಕೂಡ ಮೆಚ್ಚಿಕೊಂಡಿದ್ದಾರೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. 45 APMCಗಳಲ್ಲಿ ಇ-ವಾಣಿಜ್ಯ ಎನ್ನುವುದನ್ನು ರೈತರ ಅನುಕೂಲಕ್ಕಾಗಿ ಜಾರಿಗೆ ತರಲಾಗಿದೆ. ಪಾರದರ್ಶಕವಾದ ವ್ಯಾಪಾರವನ್ನು ಖಾತ್ರಿಪಡಿಸಲು ಈ ಯೋಜನೆಯಿಂದ ತುಂಬಾ ಸಾಧ್ಯವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಪ್ರಥಮ ಬಾರಿಗೆ ಇವತ್ತು ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಪುರಸ್ಕರಿಸಲು "ಸರ್ವೋತ್ತಮ ಸೇವಾ ಪ್ರಶಸ್ತಿ" ಎಂಬ ಯೋಜನೆಯನ್ನೂ ಕೂಡ ಇವತ್ತು ನಮ್ಮ ಸರ್ಕಾರ ಜಾರಿಗೆ ತಂದಿದೆ. ರಾಜ್ಯದಲ್ಲಿ ಇ-ಆಡಳಿತ, ಸಾರಿಗೆ, ಗ್ರಾಮೀಣ, ನಗರಾಭಿವೃದ್ಧಿ, ನೀರು ಸರಬರಾಜು ಮೊದಲಾದ ವಲಯಗಳ ಕ್ರಮಗಳು ಮತ್ತು ಉಪ ಕ್ರಮಗಳು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಗೌರವಾನ್ವಿತ ರಾಜ್ಯಪಾಲರು ಈ ಸದನಕ್ಕೆ ಆಗಮಿಸಿ ವಿಧಾನ ಮಂಡಲದ ಉಭಯ ಸದಸ್ಯರನ್ನು ಉದ್ದೇಶಿಸಿ, ಸರ್ಕಾರದ ಸಾಧನೆಯನ್ನು ಹೇಳಿದ್ದಾರೆ. ನಮ್ಮ ಮಾನ್ಯ ರಾಜ್ಯಪಾಲರೂ ಕೂಡ ಕಾನೂನಿನ ತಜ್ಞರಾಗಿದ್ದಾರೆ. ಅವರೂ ಕೂಡ ಕೇಂದ್ರದಲ್ಲಿ ಅನೇಕ ವರ್ಷಗಳ ಕಾಲ ಕಾನೂನು ಸಚಿವರಾಗಿ ಕೆಲಸ ಮಾಡಿದವರು. ಅವರಿಗೆ ಅಪಾರವಾದ ಕಾನೂನಿನ ಜ್ಞಾನವಿರುವುದರಿಂದ, ಕಾನೂನು ಸುವ್ಯವಸ್ಥೆ ಬಗ್ಗೆ, ಹಣಕಾಸಿನ ನಿರ್ವಹಣೆ ಬಗ್ಗೆ, ರಾಜ್ಯದಲ್ಲಿ ನಡೆದಿರುವಂತಹ ಈ ಆಡಳಿತದ ಬಗ್ಗೆ ಮುಕ್ತಕಂಠದಿಂದ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿ ಹೋಗಿದ್ದಾರೆ. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯವನ್ನು ಸ್ವಾಗತಿಸಿ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಎರಡು ಮಾತುಗಳಿಗೆ ವಿರಾಮ ಕೊಡುತ್ತೇನೆ.

(ಶ್ರೀ ಎನ್. ಯೋಗೀಶ್ ಭಟ, ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎನ್.ವಿಜಯಕುಮಾರ್ [ಜಯನಗರ]:- ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ನಮ್ಮ ಸರ್ಕಾರದ ಸಾಧನೆಯನ್ನು ಎಳೆ ಎಳೆಯಾಗಿ ಬಿಡಿಸಿ

ಹೇಳಿ, ಬಹಳ ಉತ್ತಮವಾದ ಕೆಲಸ ಮಾಡಿದೆ ಎಂದು ಮಾನ್ಯ ರಾಜ್ಯಪಾಲರು ಶ್ಲಾಘನೆಯನ್ನು ಮಾಡಿದ್ದಾರೆ. 2–3 ಅಂಶಗಳ ಬಗ್ಗೆ ಈ ಸದನದಲ್ಲಿ ಹೇಳಬೇಕೆಂದು ನನಗನಿಸುತ್ತದೆ. 'ಸಕಾಲ' ಯೋಜನೆ ಅಡಿಯಲ್ಲಿ ಕೇವಲ 9–ತಿಂಗಳಿನಲ್ಲಿ 1.65 ಕೋಟಿಗಳಿಗೂ ಮೀರಿ ಹೆಚ್ಚು ನಾಗರೀಕರ 265 ಸೇವೆಗಳನ್ನು ಕಾಲದ ಮಿತಿಯಲ್ಲಿ ಸರಿಯಾಗಿ ಮಾಡಿಕೊಟ್ಟಿರುವುದು ನಿಜಕ್ಕೂ ಸರ್ಕಾರದ ಒಂದು ದೊಡ್ಡ ಸಾಧನೆಯಾಗಿದೆ. ಸರ್ಕಾರದ ಅಧಿಕಾರಿಗಳಿಗೆ ಅವರ ಸೇವಾ ಅವಧಿಯಲ್ಲಿ ಮಾಡಿದ ಸಾಧನೆಗಾಗಿ 'ಸರ್ವೋತ್ತಮ ಸೇವಾ ಪ್ರಶಸ್ತಿ'ಯನ್ನು ಈ ಸಲ ಸರ್ಕಾರ introduce ಮಾಡಿದೆ. ಅದನ್ನು ಪ್ರಾರಂಭ ಮಾಡಿರುವುದೂ ಕೂಡ ನಮ್ಮ ಸರ್ಕಾರದ ಒಂದು ದೊಡ್ಡ ಸಾಧನೆ ಎಂದು ನನಗನಿಸುತ್ತದೆ. ಬೆಂಗಳೂರಿನಲ್ಲಿ 2–3ದೊಡ್ಡ ಸಮಸ್ಯೆಗಳಿವೆ. ಅದನ್ನು ಬಹಳ ಯಶಸ್ವಿಯಾಗಿ ನಿಭಾಯಿಸಿದ್ದೇವೆ. ಮೊದಲನೆಯದಾಗಿ, ನಮ್ಮ ಸಾರಿಗೆ ಇಲಾಖೆ ಸಮಸ್ಯೆ. Public Transport ನಲ್ಲಿ ನಮಗೆ ಬಹಳ ತೊಂದರೆ ಆಗುತ್ತಿದ್ದಂತಹ ಸಂದರ್ಭದಲ್ಲಿ ಕಳೆದ ಐದು ವರ್ಷಗಳಲ್ಲಿ 7 ಸಾವಿರಕ್ಕೂ ಹೆಚ್ಚು ಎಲ್ಲಾ ರೀತಿಯ ಬಸ್ಸುಗಳನ್ನು introduce ಮಾಡಿ, ಬೆಂಗಳೂರಿನ ಮೂಲೆ ಮೂಲೆಗಳಲ್ಲಿ ಇವತ್ತು ಯಾವುದೇ ರೀತಿಯಲ್ಲಿ ಜನ ಸಂಚಾರದ ವ್ಯವಸ್ಥೆಗೆ ತೊಂದರೆಯಾಗದ ರೀತಿಯಲ್ಲಿ ಮಾಡಿದ್ದೇವೆ. ಜನ Public Transport ಅನ್ನು use ಮಾಡುವುದಕ್ಕಿಂತ ಹೆಚ್ಚಾಗಿ, ನಿಜಕ್ಕೂ ಜನಕ್ಕೆ ಎಲ್ಲಾ ರೀತಿಯ ಅನುಕೂಲಗಳಾಗಿವೆ. ಬೆಂಗಳೂರು ಸೇರಿದಂತೆ ಇಡೀ ರಾಜ್ಯದಲ್ಲಿ 200 Bus standಗಳನ್ನು ಹೊಸ ಮಾದರಿಯಲ್ಲಿ ಕಟ್ಟಲಾಗಿದೆ. ಹಾಗೆಯೇ ಬೆಂಗಳೂರಿನಲ್ಲಿ 10 TTMC ಗಳನ್ನು ಮಾಡಿದ್ದೇವೆ. ಆದಾಯವೂ ಬರಬೇಕು. ಬಸ್ಸು ನಿಲ್ದಾಣಗಳು ಅಂತರರಾಷ್ಟ್ರೀಯ ಮಟ್ಟದಲ್ಲೂ ಇರಬೇಕು ಎನ್ನುವ ರೀತಿಯಲ್ಲಿ ಬಹಳ ಉತ್ತಮವಾದಂತಹ ಕೆಲಸವನ್ನು ಮಾಡಲಾಗಿದೆ. ಹಾಗೆಯೇ ಇನ್ನೊಂದು ಬಹಳ ದೊಡ್ಡ ಸಮಸ್ಯೆ ಬೆಂಗಳೂರಿನಲ್ಲಿ ಇದ್ದದ್ದು ಎಂದರೆ ವಸತಿಯದು. ನಗರದಲ್ಲಿ 546 ಸ್ಲಂಗಳಿದ್ದವು. ಬೆಂಗಳೂರನ್ನು ಸ್ಲಂ ಮುಕ್ತವಾದ ಮಹಾನಗರ ಮಾಡುವುದಕ್ಕೆ ನಮ್ಮ ವಸತಿ ಇಲಾಖೆ ದೊಡ್ಡ ಕೆಲಸವನ್ನು ಮಾಡಿದೆ. ಈ ಐದು ವರ್ಷಗಳಲ್ಲಿ ಸಾಧಾರಣ 9 ಲಕ್ಷಕ್ಕೂ ಜಾಸ್ತಿ ಮನೆಗಳನ್ನು ನಿರ್ಮಿಸಿದೆ.

ಈಗಾಗಲೇ ಬೆಂಗಳೂರಿನಲ್ಲಿ ಸಾವಿರಾರು ಮನೆಗಳನ್ನು ಕಟ್ಟಿದ್ದೇವೆ. ಬಹಳ ಉತ್ತಮವಾದಂತಹ ಕಟ್ಟಡಗಳನ್ನು ಕಟ್ಟಿ, ಅದಕ್ಕೆ ಬೇಕಾಗಿರುವಂತಹ ಎಲ್ಲಾ ಸೌಕರ್ಯಗಳನ್ನು ಮತ್ತು ಸವಲತ್ತುಗಳನ್ನು ಕೊಟ್ಟಿರುವುದು ನಿಜಕ್ಕೂ ಸ್ವಾಗತಾರ್ಹ. ಇದಕ್ಕಾಗಿ ನಮ್ಮ ವಸತಿ ಮಂತ್ರಿಗಳಿಗೆ ಮತ್ತು ವಸತಿ ಇಲಾಖೆಯನ್ನು ಶ್ಲಾಘಿಸಬೇಕೆಂದು ಅನಿಸುತ್ತದೆ. ಹಾಗೆಯೇ ಮೆಟ್ರೋ ಬಗ್ಗೆ ಹೇಳುವುದಾದರೆ, ಈಗಾಗಲೇ 14 ಕಿ.ಮೀ. ಕೆಲಸವಾಗಿದೆ. ಎರಡನೇ ಫೇಸ್‌ನಲ್ಲಿ 10.5 ಕಿ.ಮೀ. ಕೆಲಸವಾಗಿ, ಅದು ಜೂನ್‌ನಲ್ಲಿ ಶುರುವಾಗುತ್ತದೆಂದು ಹೇಳಿದ್ದಾರೆ. ಈ ಕೆಲಸ ಪ್ರಾರಂಭವಾದರೆ, ಹೇಗೆ ಬಸ್ಸಿನ ವ್ಯವಸ್ಥೆಯಲ್ಲಿ ಬೆಂಗಳೂರಿನ ನಾಗರಿಕರಿಗೆ ಒಳ್ಳೆಯದಾಗಿದೆಯೋ, ಆ ರೀತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಈ ಮೆಟ್ರೋ ಬಳಕೆಯಿಂದ ಈ traffic problem ಕೂಡ ಕಡಿಮೆಯಾಗುವಂಥದ್ದು ಆಗುತ್ತದೆ. ಇನ್ನೊಂದು ಬಹಳ ಮುಖ್ಯವಾದುದು ಎಂದರೆ, ನಮ್ಮ ಸರ್ಕಾರ ಯಾವ್ಯಾವ ಕೆಲಸಗಳ ಗುದ್ದಲಿ ಪೂಜೆಯನ್ನು ನೆರವೇರಿಸಿತ್ತೋ, ಆ ಕೆಲಸಗಳನ್ನು ಪೂರ್ಣಗೊಳಿಸಿ, ಅದರ ಪ್ರಾರಂಭೋತ್ಸವವನ್ನೂ ಕೂಡ ನಮ್ಮ ಸರ್ಕಾರವೇ ಮಾಡಿದೆ. ಸಾಮಾನ್ಯವಾಗಿ ಒಂದು ಸರ್ಕಾರ ಗುದ್ದಲಿ ಪೂಜೆ ಮಾಡಿದರೆ, ಇನ್ಯಾವುದೋ ಸರ್ಕಾರ ಅದನ್ನು ಪ್ರಾರಂಭ ಮಾಡುವುದು ವಾಡಿಕೆಯಾಗಿತ್ತು. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿಗೆ 500 mld ನೀರನ್ನು ತರುವಂತಹ ಕಾವೇರಿ ನಾಲ್ಕನೇ ಹಂತದ ಎರಡನೇ ಘಟ್ಟದ ಯೋಜನೆ. ಇದು ಬಹಳ ಯಶಸ್ವಿಯಾಗಿ ಬೆಂಗಳೂರು ನಗರಕ್ಕೆ ಬಂದಿದೆ. ಹಾಗಾಗಿ ಬೆಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ಸಮಾದಾನಕರವಾಗಿದೆ ಎಂದು ನನಗನಿಸುತ್ತದೆ. ನಮ್ಮ ಸರ್ಕಾರ ಎಲ್ಲದಕ್ಕೂ ಸಮಾಧಾನಕರವಾದ ರೀತಿಯಲ್ಲಿ ಸ್ಪಂದಿಸಿದೆ. ಇನ್ನು ಬೆಂಗಳೂರಿನಲ್ಲಿ under-passes, surface passes ಎಲ್ಲವನ್ನೂ ಕಾಲಮಿತಿಯಲ್ಲಿ, ವ್ಯವಸ್ಥಿತವಾಗಿ ಬಹಳ planned ರೀತಿಯಲ್ಲಿ ನಮ್ಮ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಮಾಡಿಕೊಟ್ಟಿದೆ. ಇಡೀ ಬೆಂಗಳೂರಿನ ಒಟ್ಟು 28 ಕ್ಷೇತ್ರಗಳಲ್ಲೂ ಅತ್ಯಂತ ಯಶಸ್ವಿಯಾಗಿ ನಮ್ಮ ಸರ್ಕಾರ ಎಲ್ಲಾ ಇಲಾಖೆಗಳು ಕೆಲಸ ಮಾಡಿದೆ. ಅದು ಆರೋಗ್ಯ ಇಲಾಖೆ ಇರಲಿ, ಸಾರಿಗೆ ಇಲಾಖೆ ಇರಲಿ, ನಗರಾಭಿವೃದ್ಧಿ ಇಲಾಖೆ ಇರಲಿ ಅಥವಾ ಮತ್ಯಾವುದೇ

ಇರಲಿ, ಇನ್ನು ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಹೇಳುವುದಾದರೆ, ಅದೊಂದು ಬಹಳ ಮುಖ್ಯವಾದುದು. 5 ವರ್ಷದಲ್ಲಿ ಯಾವುದೇ ರೀತಿಯಲ್ಲಿ ಕೋಮುಗಲಭೆ ಬೆಂಗಳೂರು ನಗರ ಸೇರಿದಂತೆ ಇಡೀ ರಾಜ್ಯದಲ್ಲಿ ನಡಯದೇ ಇರುವ ಒಂದು ಒಳ್ಳೆಯ ವ್ಯವಸ್ಥೆಯನ್ನು ಕಾನೂನು ಮತ್ತು ಸುವ್ಯವಸ್ಥೆ ಇಲಾಖೆ ಮಾಡಿದೆ. ಅದರಲ್ಲೂ ಮುಖ್ಯವಾಗಿ 3-4 ತಿಂಗಳ ಕೆಳಗೆ ಅಸ್ಸಾಂ ಅಂದರೆ North-Eastern States ನಲ್ಲಿ ಆದಂಥ ಸಮಸ್ಯೆಯಿಂದ ಬೆಂಗಳೂರಿನಿಂದ ಸಾವಿರಾರು ಜನರು ವಲಸೆ ರೀತಿಯಲ್ಲಿ ಹೋಗುವಂಥ ಸಂದರ್ಭದಲ್ಲೂ ಕೂಡ ಯಾವುದೇ ರೀತಿಯಲ್ಲಿ ಕಾನೂನಿಗೆ ಅಡಚಣೆಯಾಗದಿರುವಂತೆ, ಜನರಿಗೆ ತೊಂದರೆಯಾಗದಂಥ ಆ ವ್ಯವಸ್ಥೆಯನ್ನು ಮಾಡಿ ಮತ್ತೆ ಅವರು ವಾಪಸ್ ಬರುವುದಕ್ಕೆ ಒಂದು ಕರೆಯನ್ನು ಕೊಟ್ಟು ತುಂಬಾ ಜನರು ವಾಪಸ್ ಬಂದಿರುವಂಥ ಬಹಳ ಉತ್ತಮವಾದ ಕೆಲಸವನ್ನು ಮಾಡಿದೆ. ಹಾಗೇ ಬೆಂಗಳೂರಿನ ಸುತ್ತಮುತ್ತ 260ಕ್ಕೂ ಜಾಸ್ತಿ ಕೆರೆಗಳು ಇತ್ತು, ಅದೆಲ್ಲಾ ಹೋಗಿ ಸಾಧಾರಣ 100-140 ಕೆರೆಗಳಿಗೆ ಅವುಗಳ ಅಭಿವೃದ್ಧಿ ಕೆಲಸದಲ್ಲೂ ಕೂಡ, ನಾವು ಬೆಂಗಳೂರಿನ ಸುತ್ತ ಸುಮಾರು ಕೆರೆಗಳನ್ನು ಈ ಸಂದರ್ಭದಲ್ಲಿ ಅಭಿವೃದ್ಧಿ ಮಾಡಿ, wate table ಜಾಸ್ತಿಯಾಗುವಂತಹ ಕೆಲಸವನ್ನು ಕೂಡ ನಮ್ಮ ಸರ್ಕಾರ ಬಹಳ ಯಶಸ್ವಿಯಾಗಿ ಮಾಡಿದೆ. ಕಳೆದ 5 ವರ್ಷದಲ್ಲಿ ನಮ್ಮ ಈ ಸರ್ಕಾರ ಕರ್ನಾಟಕದ ಜನತೆಗೆ ಅದರಲ್ಲೂ ಮುಖ್ಯವಾಗಿ ಬೆಂಗಳೂರಿನ ಜನತೆಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸುವಂಥ ಕೆಲಸದಲ್ಲಿ ಬಹಳ ಯಶಸ್ಸನ್ನು ಕಂಡಿದೆ. ಅದನ್ನು ಮೊನ್ನೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅತ್ಯುತ್ತಮವಾಗಿ ಶ್ಲಾಘನೆಯನ್ನು ಮಾಡಿದ್ದಾರೆ, ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ):- ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ನಿಂತಿದ್ದೇವೆ. ಈಗಾಗಲೇ ವಂದನಾ ನಿರ್ಣಯದ ಬಗ್ಗೆ ಆಡಳಿತ ಪಕ್ಷದ ಇಬ್ಬರು ಶಾಸಕರು ಮಾತನಾಡಿ, ರಾಜ್ಯಪಾಲರ ಭಾಷಣವನ್ನು ಅತ್ಯಂತ ಚೆನ್ನಾಗಿ ಸಮರ್ಥನೆಯನ್ನು ಮಾಡಿದ್ದಾರೆ. ನನಗೆ ಇದೊಂದು ಅರ್ಥವಾಗಲಿಲ್ಲ. ಸಂವಿಧಾನಕ್ಕೆ ಇನ್ನು 65 ವರ್ಷಗಳು ಮಾತ್ರ. ನಮ್ಮ ಸಂವಿಧಾನದಲ್ಲಿ ಜನತಂತ್ರ ವ್ಯವಸ್ಥೆಯನ್ನು

ರೂಪಿಸಬೇಕಾದಾಗ ಸಂವಿಧಾನದಲ್ಲಿ ನಾನಾ ರೀತಿಯ ಪ್ರಯೋಗಗಳನ್ನು ಮಾಡಿದ್ದಾರೆ. ರಾಜ್ಯಪಾಲರ ವಂದನಾ ನಿರ್ಣಯವೆನ್ನುವುದನ್ನು ಪ್ರತಿವರ್ಷ ಪ್ರಾರಂಭವಾಗುವ ಅಧಿವೇಶನದಲ್ಲಿ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವುದು ಸಂವಿಧಾನಿಕ ರೀತಿಯಲ್ಲಿ, ಸಾಂಪ್ರದಾಯಿಕವಾದ ಮಾತು. ಇದರ ಭಾಷಣವನ್ನು ಯಾರು ತಯಾರು ಮಾಡುವವರು? ಭಾಷಣ ತಯಾರು ಮಾಡುವವರು ರಾಜ್ಯಪಾಲರಲ್ಲ. ಸರ್ಕಾರ. ಸರ್ಕಾರ ಕುಳಿತು ಮಾಡಿದಂಥ ಭಾಷಣವನ್ನು ರಾಜ್ಯಪಾಲರನ್ನು ಕರೆದುಕೊಂಡು ಬಂದು ಔಪಚಾರಿಕವಾಗಿ ಮಾತನಾಡಿಸುತ್ತಾರೆ, ಅದು ಯಾವುದೇ ಸರ್ಕಾರವಿದ್ದಾಗಲೂ ಕೂಡ ಆಗುತ್ತದೆ. ಈ ರಾಜ್ಯಪಾಲರ ಭಾಷಣವನ್ನು ಮಾಡಿಸುವ ಸಂದರ್ಭದಲ್ಲಿ, ನನಗೆ ವೈಯಕ್ತಿಕವಾಗಿರುವ ಚಿಂತನೆ, ನಾನು ಒಂದು ಪಕ್ಷದ ಪರವಾಗಿ ಇಲ್ಲ. ಈ ರೀತಿಯಾಗಿರತಕ್ಕ ಔಪಚಾರಿಕವಾಗಿ ರಾಜ್ಯಪಾಲರ ಬಾಯಿನಿಲ್ಲಿ ಸರ್ಕಾರವನ್ನು ಮಾತನಾಡಿಸುವಂಥ ರೀತಿ ನೀತಿಗಳು ಇರಬೇಕಾ ಎನ್ನುವುದು. ಎಷ್ಟೋ ಸಂದರ್ಭದಲ್ಲಿ ನಾನು ಹೇಳುತ್ತೇನೆ, ನನಗೆ ಜ್ಞಾಪಕವಿರುವ ಪ್ರಕಾರ ವೆಸ್ಟ್ ಬೆಂಗಾಲ್‌ನಲ್ಲಿ, ರಾಜ್ಯಪಾಲರಿಗೂ ಮತ್ತು ಸರ್ಕಾರಕ್ಕೂ ಅನೇಕ ರೀತಿಯಾದ ವ್ಯತ್ಯಾಸಗಳು ಬಂದಂಥದ್ದು ಮತ್ತು ವಿರೋಧ ಹೇಳಿಕೆಗಳು ಬಂದಂಥ ಸಂದರ್ಭದಲ್ಲಿ ರಾಜ್ಯಪಾಲರು ಬಂದು ಅವರು ಹೇಳಿದಂತೆ ಕೆಲವು ಪ್ಯಾರಾಗಳನ್ನು ಮಾತ್ರ ಓದಿ, ಕೆಲವು ಪ್ಯಾರಾಗಳನ್ನು ಬಿಟ್ಟುಹೋದಂಥ ಸಂದರ್ಭವೂ ಕೂಡ ಇದೆ. ಆದರೆ ನಮ್ಮ ರಾಜ್ಯಪಾಲರು, ಸರ್ಕಾರ ಬರೆದುಕೊಟ್ಟಂಥ ಭಾಷಣವನ್ನು ಕಾಮಾ, ಫುಲ್ ಸ್ಟಾಪ್ ಸಹ ಬಿಡದ ರೀತಿಯಲ್ಲಿ ಓದಿ ಎಲ್ಲರ ಮೆಚ್ಚುಗೆಯನ್ನು ಗಳಿಸಿಬಿಟ್ಟರು. ಅದರ ಜೊತೆಗೆ, ತಾವು ಸ್ವಾಗತ ಮಾಡಬೇಕು ಮಾಡಿದಿರಿ, ನನಗೆ ಇದರಲ್ಲಿ ಒಕ್ಕಣೆ ಒಂದು ರಾಜ್ಯಪಾಲರ ಭಾಷಣದಲ್ಲಿ ಬರುವುದು. ನನ್ನ ಸರ್ಕಾರವು ಕಳೆದ 5 ವರ್ಷಗಳಿಂದ ಅಭಿವೃದ್ಧಿಯ ಕಾರ್ಯಸೂಚಿಯನ್ನು ಮುಂದುವರೆಸುತ್ತದೆ ಮತ್ತು ರಾಜ್ಯದ ಎಲ್ಲಾ ಬಗೆಯ ಅಭಿವೃದ್ಧಿಯನ್ನು ಖಾತರಿಪಡಿಸಿದ್ದಕ್ಕೆ ನಾನು, ಮುಖ್ಯಮಂತ್ರಿಗಳು ಮತ್ತು ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಅಭಿನಂದಿಸುತ್ತೇನೆ. ಅಂದರೆ 5 ವರ್ಷದಲ್ಲಿ ಮಾಡಿದ್ದಕ್ಕೆ ಸೀಲ್ ಹೊಡೆದರು, ಏನು ಮಾಧ್ಯಮದಲ್ಲೆಲ್ಲಾ ಬಂದಿತು. ಜನಗಳಲ್ಲಿ ಕುತೂಹಲ ಒಂದು ಕಡೆ, ಅನುಮಾನ ಇನ್ನೊಂದು ಕಡೆ. ಏನು ಈ ಸರ್ಕಾರ ನಡೆಯುತ್ತಿರುವ ರೀತಿನೀತಿ ನೋಡಿದರೆ ನಮಗೆ ಒಂದು ರೀತಿ

ಬೇಜಾರು ಆಗುತ್ತದೆ, ಹೇಸಿಗೆಯಾಗುತ್ತದೆ, ಸರ್ಕಾರ ಯಾವಾಗ ಹೋಗುತ್ತದಪ್ಪ ಎಂದು ಕಾಯ್ದುಕೊಂಡಿರಬೇಕಾದರೆ ರಾಜ್ಯಪಾಲರು ಈ ರೀತಿ ಭಾಷಣ ಮಾಡಿದರು ಎನ್ನುವುದು ಮಾಧ್ಯಮದಲ್ಲಿ ಬಂದಿತು. ರಾಜ್ಯಪಾಲರು ಒಪ್ಪಿಗೆ ಕೊಟ್ಟುಬಿಟ್ಟಿದ್ದಾರೆ, ರಾಜ್ಯಪಾಲರು ಒಪ್ಪಿಗೆ ಕೊಟ್ಟಿರುವುದರ ಜೊತೆಗೆ ಅವರ ಭಾಷಣವನ್ನು ಬಲವಾಗಿ ಸಮರ್ಥನೆ ಮಾಡಿರುವ ಹಿನ್ನೆಲೆಯಲ್ಲಿ, ಈ ಸರ್ಕಾರದ ಅವಧಿ 5 ವರ್ಷ ಮುಗಿಸುತ್ತದೆಂದು ಯಾರೂ ಊಹೆ ಮಾಡಿರಲಿಲ್ಲ. ಈ ಸರ್ಕಾರ ಯಾವಾಗ ಅಸ್ತಿತ್ವಕ್ಕೆ ಬಂದಿತೋ ಅಂದಿನ ಕ್ಷಣದಿಂದಲೂ, ದಿನದಿಂದಲೂ ಕೂಡ ಜ್ಯೋತಿಷಿಗಳು, ಸ್ವಾಮಿಗಳು ಈ ಸರ್ಕಾರ ಬಿದ್ದು ಹೋಗುತ್ತದೆ, ಪ್ರಳಯವಾಗುತ್ತದೆ, ಯಾವುದಾಗದಿದ್ದರೂ ರಾಜಕೀಯ ಪ್ರಳಯವಾಗುತ್ತದೆಂದು ಮಾತನಾಡಿದ್ದೇ ಮಾತನಾಡಿದ್ದು. ಜಿಲ್ಲಾ ಇರಲಿ, ಮೊನ್ನೆ ಮೊನ್ನೆ ಜಗದೀಶ್ ಶೆಟ್ಟರ್ ಅವರ ಸರ್ಕಾರ ಇನ್ನೇನು ಮುಗಿದೇ ಹೋಯಿತು, ಬಜೆಟ್ ಮಂಡನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಇನ್ನು ಎಷ್ಟು ದಿವಸ ನಿಮ್ಮ ಹಣೆಬರಹ ಎನ್ನುವ ರೀತಿಯಲ್ಲಿ ಮಾತನಾಡುವ ಪರಿಸ್ಥಿತಿ ಇತ್ತು. ಇದು ನೋಡಿದರೆ, ಏನೂ ಇಲ್ಲ, ಅಲ್ಲಾಡುತ್ತದೆ, ಬಿದ್ದಂತೆ ಕಾಣುತ್ತದೆ, ಬೀಳಲಿಲ್ಲ. ಒಟ್ಟಿನಲ್ಲಿ ಜನರ ಆಶೋತ್ತರ ಏನಿತ್ತಪ್ಪಎಂದರೆ, 5 ವರ್ಷಗಳ ಕಾಲ ಜನಾದೇಶವನ್ನು ಪಾಲಿಸಬೇಕು ಎನ್ನುವುದು ಒಂದನ್ನು ಆಗೋ ಈಗೋ ಮುಗಿಸುವಂಥ ಕೆಲಸವನ್ನು ಮಾಡಿದ್ದಾರೆ. ಮುಂಚಿತವಾಗಿ ಚುನಾವಣೆ ಬರುವುದು ಇವತ್ತು ನಮಗೆ ಅರ್ಥವಾಗುತ್ತದೆ, ಕಾಲ ನಿಗದಿಗಿಂತ ಮುಂಚೆ ಚುನಾವಣೆಗಳು ಬಂದಾಗ ರಾಜ್ಯದ ಮೇಲಾಗತಕ್ಕ ಹೊರೆ ಏನು ಎನ್ನುವುದನ್ನೆಲ್ಲಾ ಪರಿಗಣಿಸಿದಾಗ ಅಂತೂ ನೀವು 5 ವರ್ಷ ಮುಟ್ಟಿದ್ದು ಒಂದು ದೊಡ್ಡ ಸಾಧನೆ. 5 ವರ್ಷದಲ್ಲಿ ಏನಾಗಿದೆ ಅದು ಬೇರೆ ಪ್ರಶ್ನೆ, ಅದನ್ನು ನಾವು ವಿಚಾರ ಮಾಡೋಣ. 5 ವರ್ಷದಲ್ಲಿ ಇವರು ಅಭಿವೃದ್ಧಿಯನ್ನು ಎಷ್ಟರಮಟ್ಟಿಗೆ ತೆಗೆದುಕೊಂಡು ಹೋಗಿದ್ದಾರೆ ಎನ್ನುವುದು ಬಹಳ ಮುಖ್ಯವಾದ ವಿಚಾರ. ರಾಜ್ಯಪಾಲರು ಆಡಿದಂಥ ಕೆಲವು ಮಾತುಗಳನ್ನು ಈಗಾಗಲೇ ಅವರು ಹೇಳಿದ್ದಾರೆ. ಅದನ್ನು ಮತ್ತೆ ಮತ್ತೆ ನಾನು ಹೇಳುವಂಥ ಅವಶ್ಯಕತೆ ಇಲ್ಲ. ಬಹುಶ: ಇದನ್ನು ರಾಜ್ಯಪಾಲರ ಭಾಷಣಕ್ಕಿಂತ ಮುಂಚೆ 5 ವರ್ಷ ಪೂರ್ಣ ಮಾಡಿರಬೇಕಾದಾಗ, ರಾಜ್ಯಪಾಲರ ಭಾಷಣದಲ್ಲಿ, 5 ವರ್ಷದಲ್ಲಿ ಮಾಡಿದಂಥ ಎಲ್ಲಾ ಕೆಲಸಗಳಿಗೂ ಕೂಡ ಸೀಲು ಒತ್ತಿಬಿಟ್ಟರೆಂದು ಮಾತನಾಡುತ್ತಾರೆ. 5

ವರ್ಷಕ್ಕಿಂತ ಮುಂಚೆ ಒಂದು ದೊಡ್ಡ ಭಾಷಣ ಮಾಡಿದರು. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷಗಳ ರಾಜಕಾರಣವೆನ್ನುವುದು ಇದ್ದದ್ದೇ ಸಂವಿಧಾನದ ಚೌಕಟ್ಟಿನಲ್ಲಿರುವುದು. ಚುನಾವಣೆಗೆ ಹೋಗುವುದಕ್ಕಿಂತ ಮುಂಚೆ ಎಲ್ಲಾ ರಾಜಕೀಯಪಕ್ಷಗಳು ಕೂಡ ಪ್ರಣಾಳಿಕೆಯನ್ನು ಮಾಡುತ್ತಾರೆ. ಬಹುಶ: ಎಲ್ಲೋ ಒಂದು ಕಡೆ ಆ ಪ್ರಣಾಳಿಕೆ ಎಂದರೆ ಹೇಗೆ ಎಂದರೆ, ಒಂದು ರಾಜಕೀಯ ಪಕ್ಷದವರು ಅವರ ಪಕ್ಷದ ತತ್ವ ಸಿದ್ಧಾಂತದ ಆಧಾರದ ಮೇಲೆ ಜನಗಳಿಗೆ ಕೊಡುವಂಥ ಒಂದು ಮಾತು, ಒಂದು ವಚನ. ಆ ವಚನವನ್ನು ಹೇಗೆ ಪರಿಪಾಲನೆ ಮಾಡುತ್ತೇವೆ? ಐದು ವರ್ಷ ಅಧಿಕಾರ ಕೊಟ್ಟಂತಹ ಸಂದರ್ಭದಲ್ಲಿ ನಾವು ಹೇಳಿದಂತಹ ಮಾತುಗಳನ್ನು ಯಾವ ರೀತಿಯಾಗಿ ಮಾಡುತ್ತೇವೆಂದು ಹೇಳತಕ್ಕಂಥದ್ದೇ ಪ್ರಣಾಳಿಕೆ. ಆ ಪ್ರಣಾಳಿಕೆ ಈ BJP ಯವರು ಎಂದೂ ಅಧಿಕಾರಕ್ಕೆ ಬಂದಿರಲಿಲ್ಲ. ದಕ್ಷಿಣ ಭಾರತದಲ್ಲಿ BJPಗೆ ಅಧಿಕಾರದ ರುಚಿಯೇ ಗೊತ್ತಿರಲಿಲ್ಲ. ಅದು ಹೇಗೆ ಸೃಷ್ಟಿ ಆಯಿತು ಎಂದರೆ ನೋಡಿ, ಅವರದೇ ಮಾತಿನಲ್ಲಿ ನಾವು ಹೇಳಬೇಕು. ನಾವು ಹೇಳುವುದು ಸರಿಯಾಗುವುದಿಲ್ಲ. ಸಮೃದ್ಧ ಕರ್ನಾಟಕಕ್ಕಾಗಿ ಸಂಕಲ್ಪ. ಈ ಕರ್ನಾಟಕ ಅವಧಿ ಪೂರ್ವ ವಿಧಾನಸಭೆ ಚುನಾವಣೆ ಎದುರಿಸುತ್ತಿದೆ, ಏನೆಲ್ಲಾ ಹೇಳಿಕೊಂಡು ಬರುತ್ತಾರೆ, ಸಂಕಲ್ಪದ ಬಗ್ಗೆ ಎಲ್ಲರಿಗೂ ಗೊತ್ತಿದೆ. ಇದು ಎಲ್ಲವನ್ನೂ ಓದಿದರೆ ಲೇಟಾಗುತ್ತದೆ. ರಾಜಕಾರಣದ ಕುತಂತ್ರವನ್ನು ಹೆಣೆಯಲು JDS ಸದಾ ಹೊಂಚು ಹಾಕುತ್ತಿದೆ. ಈ ಕುರಿತು ಇತ್ತೀಚೆಗೆ ಈ ಪಾರ್ಟಿ ವರಿಷ್ಠರ ಹೇಳಿಕೆ ಕರ್ನಾಟಕದ ಹಿತಕ್ಕೆ ಮಾರಕ ಆಗುವ ಚಿಂತನೆ ಆಗಿದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಏಕೆ ಇವರು ಜೆಡಿಎಸ್‌ನವರು ಈ ಮಾತು ಹೇಳುತ್ತಾರೆಂದರೆ, ಸ್ವಲ್ಪ ಇತಿಹಾಸವನ್ನು ನಾವು ನೆನೆಸಿಕೊಳ್ಳಬೇಕಾಗುತ್ತದೆ. 2004ರಲ್ಲಿ ಯಾವ ಪಕ್ಷಕ್ಕೂ ಕೂಡ ಬಹುಮತ ಬರಲಿಲ್ಲ. ಆಗ 20–20 ರಾಜಕಾರಣ ಪ್ರಾರಂಭವಾಯಿತು. ಕ್ರಿಕೆಟ್ ಮ್ಯಾಚ್ ನೋಡಬೇಕಾದಾಗ ಟೆಸ್ಟ್ ಸೀರೀಸ್ ನೋಡಿ ನೋಡಿ ದಿನವೆಲ್ಲಾ ಕುಳಿತು ಬೇಜಾರು ಆಗಿರುವವರು ಸ್ವಲ್ಪ excitementಗೋಸ್ಕರ 20–20 ಎಂದು ತಂದರಲ್ಲ. ಅದು ಇವರನ್ನು ನೋಡಿ ಅವರು ತಂದರೋ? ಅಥವಾ ಅವರನ್ನು ನೋಡಿ ಇವರು ತಂದರೋ ಗೊತ್ತಿಲ್ಲ. 2004ರಲ್ಲಿ ರಾಜಕಾರಣ ಪ್ರಾರಂಭವಾಯಿತು. 2004ರಲ್ಲಿ ಬಹುಶ: ಸರ್ಕಾರ ರಚನೆ ಮಾಡಬೇಕು ಎನ್ನುವುದಾಗಿದ್ದರೆ, ಅವತ್ತು ಕಾಂಗ್ರೆಸ್‌ಗೆ ಬಹುಮತ ಇತ್ತು. ಅವತ್ತು ಒಂದು

ತೀರ್ಮಾನ ಮಾಡಿದರು. ಈ ದೇಶದಲ್ಲಿ ನಡೆಯುತ್ತಿರತಕ್ಕಂಥದ್ದು ಜಾತ್ಯಾತೀತ ಶಕ್ತಿಗಳು ಒಂದು ಕಡೆ ಆಗಬೇಕೆಂದು ಕಾಂಗ್ರೆಸ್ ಪಕ್ಷದ ಒಂದು ಗುರಿ ಆಗಿತ್ತು. ಹಾಗಾಗಿ ಜಾತ್ಯಾತೀತವಾಗಿರತಕ್ಕಂತಹ ಶಕ್ತಿಗಳು ಎಂದರೆ, ಕರ್ನಾಟಕದಲ್ಲಿ ಎರಡು ಇವೆ. ಒಂದು ಕಾಂಗ್ರೆಸ್ ಪಕ್ಷ ಇನ್ನೊಂದು ಜೆಡಿಎಸ್ ಪಕ್ಷ. ಜೆಡಿಎಸ್ ಎಷ್ಟರ ಮಟ್ಟಿಗೆ ಜಾತ್ಯಾತೀತವಾಗಿರತಕ್ಕಂತಹ ಪಕ್ಷ ಎನ್ನುವುದರ ಬಗ್ಗೆ ನಾವು ಹೋಗುವುದು ಬೇಡ. ನಾವು ಏನು ತಿಳಿದುಕೊಂಡೆವು ಜಾತ್ಯಾತೀತವಾಗಿ ಇವರಿಬ್ಬರೂ ಸೇರಿಕೊಂಡಾಗ ಒಳ್ಳೆಯ ಆಡಳಿತವನ್ನು ಕೊಡಬಹುದು ಎಂದು ಪ್ರಾರಂಭವಾಯಿತು, ಮಾನ್ಯ ಧರ್ಮ್‌ಸಿಂಗ್‌ರವರು ಮುಖ್ಯಮಂತ್ರಿಗಳಾದರು. ಮುಖ್ಯಮಂತ್ರಿಗಳಾದ ಮೇಲೆ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಪಕ್ಷ ಏನು ಇವತ್ತು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವಾಗಿತ್ತು ಅವರು ರಾತ್ರೋ ರಾತ್ರಿ BJP ಯವರ ಜೊತೆ ಲಗ್ನ ಆಗಿ ಹೋಯಿತು. BJP ಜೊತೆಯಲ್ಲಿ ಲಗ್ನ ಆಗಿ ಇನ್ನು 20 ತಿಂಗಳ ಕಾಲ ಜೆಡಿಎಸ್‌ನವರು ಇನ್ನು ನಂತರ 20 ತಿಂಗಳ ಕಾಲ BJP ಯವರು ಎಂದು ಹೊಂದಾಣಿಕೆ ಮಾಡಿ ಸರ್ಕಾರವನ್ನು ರಚನೆ ಮಾಡಿದರು. ಜೆಡಿಎಸ್‌ನವರು ಬಹಳ ಜಾತ್ಯಾತೀತವಾಗಿರತಕ್ಕಂತಹವರ ರೀತಿಯಲ್ಲಿ ಮಾತನಾಡುತ್ತಿದ್ದರು. ಮಾನ್ಯ ಕುಮಾರಸ್ವಾಮಿಯವರ ಮಾತು ನಾನು ಎಲ್ಲೆಲ್ಲೋ ಕೇಳಿದೆ, ಅವರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕೇಳಿಯೇ ಬಿಟ್ಟರು. ಜಾತ್ಯಾತೀತ ಎಂದರೆ ಏನು ಎಂದು ಕೇಳಿದರು. ಅವರು BJP ಜೊತೆ ಹೊಂದಾಣಿಕೆ ಮಾಡಿಕೊಂಡು ಸರ್ಕಾರವನ್ನು ರಚನೆ ಮಾಡಿದರು. 20 ತಿಂಗಳು ಆದ ಮೇಲೆ ಅಧಿಕಾರವನ್ನು ಬಿಟ್ಟು ಕೊಡಬೇಕಾದಾಗ ಅದು ಏನು ಆಯಿತೋ ಗೊತ್ತಾಗಲಿಲ್ಲ. ಅಧಿಕಾರವಂತೂ ಕೊಡಲಿಲ್ಲ. ಅಧಿಕಾರ ಕೊಡಲಿಲ್ಲವೆನ್ನುವ ಒಂದೇ ಕಾರಣಕ್ಕಾಗಿ ಅವತ್ತು ಮಾನ್ಯ ಯಡಿಯೂರಪ್ಪನವರು ಒಂದು ಪಕ್ಷದ ಮುಖಂಡರಾಗಿ ಅವತ್ತು ನಮಗೆ ಅಧಿಕಾರ ಕೊಡಲಿಲ್ಲ, ನಾನು ಉಪ ಮುಖ್ಯಮಂತ್ರಿಯಾಗಿದ್ದೆ, ನಾನು ಒಳ್ಳೆಯ ಕೆಲಸ ಮಾಡಿದ್ದೆ ಎಂದು ಹೇಳಿ, ವಿಧಾನಸಭೆ ಮೂರೂವರೆ ವರ್ಷಕ್ಕೆ ಅದರ ಅವಧಿ ಮುಗಿದು ಹೋಯಿತು. ತದ ನಂತರ ಮಾರ್ಚ್‌ಗೆ ಇವರು ಕದ್ದರು ಎನ್ನತಕ್ಕಂತಹ ರೀತಿಯಲ್ಲಿ ರಾಜ್ಯದ ಉದ್ದಗಲಕ್ಕೂ ಓಡಾಡುವಂತಹ ಕೆಲಸ ಮಾಡಿದಾಗ ಎಲ್ಲೋ ಒಂದು ಕಡೆ ಜನಗಳ ಭಾವನೆ ಇತ್ತು. ಎಲ್ಲಾ ರಾಜಕೀಯ ಪಕ್ಷಗಳಿಗೂ ಅಧಿಕಾರವನ್ನು ಕೊಟ್ಟಿದ್ದೇವೆ. BJP ಪಕ್ಷಕ್ಕೆ ಅಧಿಕಾರವನ್ನು ಕೊಟ್ಟಿಲ್ಲ. ಅಂತಹ ಅವಕಾಶವನ್ನು

ಇವತ್ತು ಜೆಡಿಎಸ್‌ನವರು ಕಸಿದುಕೊಂಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಮಾತನಾಡತಕ್ಕಂತಹ ಮಾತಿನಲ್ಲಿ ಒಂದು ಅರ್ಥ ಇದೆ, ಅವರಿಗೆ ಅಧಿಕಾರ ಕೊಡಬೇಕೆಂದು ತೀರ್ಮಾನ ಮಾಡಿದವರು ಜನ. ಜನ ತೀರ್ಮಾನ ಮಾಡಿ BJPಯನ್ನು 108 ರಿಂದ 109 ಸೀಟುಗಳನ್ನು ಗೆಲ್ಲತಕ್ಕಂತಹ ದೊಡ್ಡ ಪಕ್ಷವಾಗಿ ಇವರನ್ನು ಅಧಿಕಾರಕ್ಕೆ ತಂದರು. ಆಗ ಯಾವುದೇ ಆದರೂ ಕೂಡ, ಬಹುಶ: ಅವತ್ತು ಏನಾದರೂ ಕಾಂಗ್ರೆಸ್ ಪಕ್ಷ ಮತ್ತು ಜೆಡಿಎಸ್ ಮತ್ತೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದ್ದಿದ್ದರೆ ಬಹುಶ: ಜಾತ್ಯಾತೀತವಾಗಿರತಕ್ಕಂತಹ ಶಕ್ತಿಗಳು ಅವತ್ತು ಸರ್ಕಾರವನ್ನು ಮಾಡಬಹುದಾಗಿತ್ತು. ಆದರೆ ಕಾಂಗ್ರೆಸ್ ಪಕ್ಷ ಆ ಕೆಲಸವನ್ನು ಮಾಡುವುದಕ್ಕೆ ಹೋಗಲಿಲ್ಲ. ಕಾರಣವೇನೆಂದರೆ, ಜೆಡಿಎಸ್‌ನವರನ್ನು ಹೇಗೆ ನಂಬುವುದು? ಯಾವಾಗ ಯಾರ ಜೊತೆ ಇರುತ್ತಾರೆ ಎನ್ನುವಂಥದ್ದು ಅರ್ಥವಾಗದೇ ಇರತಕ್ಕಂತಹ ಪರಿಸ್ಥಿತಿಯಲ್ಲಿ ಆ ಸಹವಾಸವೇ ಬೇಡ ಅವರ ಗೋಜಿಗೇ ಹೋಗುವುದು ಬೇಡ ಎಂದು ಕೈ ಬಿಟ್ಟಂತಹ ಹಿನ್ನೆಲೆಯಲ್ಲಿ ಇವತ್ತು ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಅಧಿಕಾರವನ್ನು ಸ್ವೀಕಾರ ಮಾಡಿ ಹಾಗೂ ಹೀಗೂ ಮೂರು ಜನ ಮುಖ್ಯಮಂತ್ರಿಗಳಾದ ಮೇಲೆ ಮಾನ್ಯ ಯಡಿಯೂರಪ್ಪನವರದಾಯಿತು, ಮಾನ್ಯ ಸದಾನಂದಗೌಡರದು ಆಯಿತು, ಮಾನ್ಯ ಜಗದೀಶ್ ಶೆಟ್ಟರ್ ಒಬ್ಬರು. ಇವರು ಮೂರನೇ ಮುಖ್ಯಮಂತ್ರಿಯಾಗಿ ಇವತ್ತು ಅಧಿಕಾರವನ್ನು ನಡೆಸುತ್ತಿದ್ದಾರೆ, ಮತ್ತು ಪೂರೈಸುವಂತಹ ಹಂತದಲ್ಲಿದ್ದಾರೆ. ಅವರ ಸಂಕಲ್ಪದಲ್ಲಿ ಅವರು ಹೇಳಿರತಕ್ಕಂತಹ ಮಾತುಗಳು ಏನೆಂದರೆ, ಯಾವತ್ತೂ BJPಗೆ ಅಧಿಕಾರವನ್ನು ಕೊಟ್ಟಿಲ್ಲ. ನಮಗೆ ಅಧಿಕಾರವನ್ನು ಕೊಡಿ. ಕಾಂಗ್ರೆಸ್‌ನವರು 50 ವರ್ಷಗಳಲ್ಲಿ ಮಾಡದೇ ಇರತಕ್ಕಂತಹ ಸಾಧನೆಯನ್ನು ನಾವು ಐದೇ ವರ್ಷದಲ್ಲಿ ಮಾಡುತ್ತೇವೆ ಎನ್ನತಕ್ಕಂತಹ ಘೋಷಣೆಯನ್ನು ಜನಗಳ ಮುಂದೆ ಇಟ್ಟರು. ಜನ ಕೂಡ ಒಂದು ತರಹ ಭ್ರಮೆಗೆ ಒಳಗಾದರು. 50 ವರ್ಷಗಳಲ್ಲಿ ಮಾಡದೇ ಇರುವುದನ್ನು ಇವರು ಐದೇ ವರ್ಷದಲ್ಲಿ ಮಾಡುತ್ತಾರೆಂದರೆ, ಮಾನ್ಯ ಯಡಿಯೂರಪ್ಪನವರು ಯಾವ ಮಾನದಂಡ ಹಾಗೂ ಮಂತ್ರದಂಡ ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ನೋಡೋಣ ಇವರು ದೇವರನ್ನು ನಂಬುವವರು. ಇವರ ಹತ್ತಿರ ಮಂತ್ರ ದಂಡ ಇದ್ದರೂ ಇರಬಹುದು ಎಂದು ಜನ ಒಂದು ಸಾರಿ ಅವಕಾಶವನ್ನು ಕೊಟ್ಟರು. ಅವರ ಪ್ರಣಾಳಿಕೆಯಲ್ಲಿ ಹೇಳಿದಂತಹ ಮಾತುಗಳನ್ನು ಒಂದೊಂದನ್ನೂ ಓದಿ

ಹೇಳಬೇಕೆಂದು ನನಗೆ ಆಸೆ. ಅದರ ಅವಶ್ಯಕತೆ ಇದೆಯೇ? ಆ ಮಾತುಗಳೆಲ್ಲವೂ ಕಡತದಲ್ಲಿ ಹೋಗಬೇಕಾ? ನನಗೆ ಅನಗತ್ಯವಾಗಿ ಕಡತದಲ್ಲಿ ಹೋಗುವುದಕ್ಕೆ ಏಕೆ ಅವಕಾಶ ಮಾಡಿಕೊಡಬೇಕೆಂದು ಅನ್ನಿಸುತ್ತಿದೆ. ಅದಕ್ಕೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹೇಳಿದಂತಹ ಮಾತುಗಳು ನಿಜ, ಪ್ರಣಾಳಿಕೆ ಓದಿದರೆ ಯಾರಿಗಾದರೂ ಹೌದಪ್ಪಾ ಯಾರೂ ಮಾಡದೇ ಇರುವ ಸಾಧನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ನೋಡಿ ಬಿಡೋಣ ಎಂದು ಮನಸ್ಸು ಬರತಕ್ಕಂತಹ ರೀತಿಯಲ್ಲಿ ಸಂಕಲ್ಪವನ್ನು ಮಾಡಿದರು. ಸಂಕಲ್ಪವನ್ನು ಮಾಡಿ ಅವರು ಕೊಟ್ಟಂತಹ ವಚನವನ್ನು ಈಡೇರಿಸಬೇಕಾಗಿದ್ದ ರೀತಿಯಲ್ಲಿ ಏನೆಲ್ಲ ಮಾಡಿದರು ಎನ್ನತಕ್ಕಂಥದ್ದನ್ನು ನಾನು ಈಗ ಒಂದೊಂದಾಗಿ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ. ನಮ್ಮಲ್ಲಿ ಎಲ್ಲಾ ಫೋನ್ ಮಾಡುತ್ತಿದ್ದಾರೆ. ಎಲ್ಲಿ ನೋಡಿದರೂ ಕೂಡ ವಿದ್ಯುಚ್ಛಕ್ತಿ ಬಗ್ಗೆ ಚರ್ಚೆ ಮಾಡಿ, ಅವರಿಗೆ ನೀವು ರಾಜ್ಯಪಾಲರ ಭಾಷಣ ಎಂದು ಹೇಳಿದರೆ ಅರ್ಥವಾಗುವುದಿಲ್ಲ. ವಿದ್ಯುಚ್ಛಕ್ತಿ ಬಗ್ಗೆ ಚರ್ಚೆ ಮಾಡಿ ಸರ್ಕಾರಕ್ಕೆ ಕೇಳಿ, ಏನಾದರೂ ಮಾಡಿ ವಿದ್ಯುಚ್ಛಕ್ತಿ ಕೊಡಿಸುವ ಕೆಲಸ ಮಾಡಿ ಎಂದು ಹೇಳುತ್ತಾರೆ. ಹಾಗಾಗಿ ನಾವು ಅದನ್ನು ಅರ್ಧ ಗಂಟೆ ಕಾಲ ಚರ್ಚೆ ಮಾಡಬೇಕೆಂದು ಪ್ರಯತ್ನ ಪಟ್ಟೆವು, ಮಾನ್ಯ ಮುಖ್ಯಮಂತ್ರಿಗಳು ಇಲ್ಲವೆನ್ನುವ ಕಾರಣಕ್ಕೋಸ್ಕರ ಸೋಮವಾರ ಚರ್ಚೆ ಮಾಡುವಂತೆ ತೀರ್ಮಾನವಾಯಿತು. ನಿಮ್ಮ ಸಂಕಲ್ಪದಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಏನು ಮಾತನಾಡಿದಿರಿ, ಪ್ರಣಾಳಿಕೆಯಲ್ಲಿ ಎನ್ನತಕ್ಕಂಥದ್ದರ ಬಗ್ಗೆ. ಒಂದು ಮಾತು ಹೇಳುತ್ತೇನೆ. ಮುಂದಿನ ಐದು ವರ್ಷಗಳಲ್ಲಿ ವಿದ್ಯುತ್ ಸಾಮರ್ಥ್ಯವನ್ನು ಕನಿಷ್ಠ 10 ಸಾವಿರ M.W. ಗೆ ಹೆಚ್ಚಿಸುವುದೇ ನಮ್ಮ ಗುರಿ ಎಂದು ಹೇಳಿ ಈ ಕ್ಷೇತ್ರದಲ್ಲಿ ನಮ್ಮ ಮುನ್ನೋಟ ಹೀಗಿದೆ ಎಂದು ಹೇಳುತ್ತಾ ರಾಜ್ಯದಲ್ಲಿ ಖಾಸಗಿಯವರು ವಿದ್ಯುತ್ ಉತ್ಪಾದಿಸಲು ಪ್ರೋತ್ಸಾಹ ನೀಡುವುದು, ವಿದ್ಯುತ್ ಸೋರಿಕೆ ತಡೆಗಟ್ಟುವುದು, ಕಳ್ಳತನ ತಡೆಗೆ ತೀವ್ರ ಕ್ರಮಗಳು, ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರ ಬಂಡವಾಳ ಹೂಡುವಂತೆ ಒತ್ತಾಯ, ಹೀಗೆ ಎಲ್ಲವನ್ನೂ ಹೇಳಿಕೊಂಡು ಬಂದು 10 ಸಾವಿರ M.W. ನಷ್ಟು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು ರಾಜ್ಯಪಾಲರ ಭಾಷಣದಲ್ಲಿ 10 ಸಾವಿರ M.W. ವಿಷಯ ಎಲ್ಲಿ ಹೋಯಿತೋ ಗೊತ್ತಾಗಲಿಲ್ಲ. ಅದನ್ನು ಅರ್ಧಕ್ಕೇ ನಿಲ್ಲಿಸಿರುವಂತೆ ಇದರಲ್ಲಿ ಕಾಣುತ್ತಿದೆ. 4593

ಕ್ಕೆ ಏನ್ನೋ ಇಳಿಸಿದಂತೆ ಕಾಣಿಸುತ್ತಿದೆ. ನಾವು ಒಂದು ವಿಚಾರವನ್ನು ಯೋಚನೆ ಮಾಡೋಣ. ಇವರು ಕೊಟ್ಟಂಥ ಮಾತನ್ನು ಎಷ್ಟರಮಟ್ಟಿಗೆ ಉಳಿಸಿಕೊಳ್ಳತಕ್ಕಂಥ ಪ್ರಾಮಾಣಿಕತೆಯನ್ನು ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನೋಡಬೇಕಾಗುತ್ತದೆ. ಮೊನ್ನೆ ಒಂದು advertisement ನೋಡಿದೆ. ಅದರಲ್ಲಿ "ವಿದ್ಯುತ್ ಸ್ವಾವಲಂಬನೆಯತ್ತ ಕರ್ನಾಟಕ" ಎಂದು ಹೇಳಿ 14,751 ಕೋಟಿ ರೂ.ಗಳ ಬಂಡವಾಳವನ್ನು ನಾವು ಹೂಡಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಇವತ್ತು ವಿದ್ಯುತ್‌ಗೆ ಸಂಬಂಧಪಟ್ಟಂತೆ ಪ್ರಶ್ನೆ ಬಂದಾಗ ಸರ್ಕಾರದವರು ಒಪ್ಪಿಕೊಳ್ಳುತ್ತಾರೆ ರಾಜ್ಯದಲ್ಲಿ ತೀವ್ರವಾಗಿರತಕ್ಕಂಥ ವಿದ್ಯುತ್ ಕೊರತೆ ಇದೆಯೇ ಎಂದು ಪ್ರಶ್ನೆ ಕೇಳಿರುವುದಕ್ಕೆ ಹೌದು ಎಂದು ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಬಹುಶ: ನೀವೇನಾದರೂ ಕೂಡ ಕೊಟ್ಟ ಮಾತನ್ನು ಉಳಿಸಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಿದ್ದರೆ ಇವತ್ತು ಜನರು ಹಾಹಾಕಾರ ಮಾಡತಕ್ಕಂಥ ಪರಿಸ್ಥಿತಿ ಬರುತ್ತಿತ್ತೇ ಎಂಬುದನ್ನು ಹೇಳಬೇಕಾಗುತ್ತದೆ. ನೀವು ಅದಕ್ಕಾದರೂ ಕೂಡ ಇಲ್ಲಿಯವರೆವಿಗೆ, ಇಷ್ಟೆಲ್ಲಾ ವಿದ್ಯುತ್ ಕೊರತೆಯನ್ನು ನಿವಾರಿಸುವುದಕ್ಕೋಸ್ಕರ ದೀರ್ಘಾವಧಿ ಯೋಜನೆಗಳನ್ನು ಹಾಕಿಕೊಂಡಿದ್ದೀರಿ ನೀವು advertisementನಲ್ಲಿ ಕೊಟ್ಟಿರತಕ್ಕಂಥ ಯೋಜನೆಗಳ ಬಗ್ಗೆ ಹೇಳಬೇಕೆಂದರೆ, ನೀವು advertisementನಲ್ಲಿ ಬಿಜಾಪುರದ ಕೂಡಿಗಿಯಲ್ಲಿ 4000 M.W., ಬೃಹತ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಸ್ಥಾಪನೆಗೆ ಅಂಗೀಕಾರ, ರಾಯಚೂರು ಯರರ್ಮರಸ್, ಯಲ್ಲಾಪುರದಲ್ಲಿ 1600 M.W. ಮತ್ತು 800 M.W. ಶಾಖೋತ್ಪನ್ನ ಕೇಂದ್ರದ ಸ್ಥಾಪನೆಗೆ ಯೋಜನೆ ಎಂದು ಹೇಳಿ ಕಾಗದದಲ್ಲಿ ವಿದ್ಯುತ್‌ನ್ನು ತಯಾರು ಮಾಡಿದ್ದೆಲ್ಲವನ್ನೂ ಕೂಡ ಅದನ್ನು ಯೋಜನೆ ಎಂದು ಹೇಳಿ ಆ ಯೋಜನೆಗಳನ್ನು ಹಾಕಿ ನಾವು ದೊಡ್ಡ ಸಾಧನೆಯನ್ನು ಮಾಡಿಬಿಟ್ಟಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಭಾಷಣವನ್ನು ರಾಜ್ಯಪಾಲರ ಕೈಯಲ್ಲಿ ಹೇಳಿಸಿದರೆ ಜನರು ನಂಬಬೇಕೇ? ಈಗ ಅವರಿಗೆ ಗೊತ್ತಿದೆ, ಯಾವ ಮಟ್ಟದಲ್ಲಿ ವಿದ್ಯುಚ್ಛಕ್ತಿ ಪ್ರಮಾಣವಿದೆ, ಎಷ್ಟರಮಟ್ಟಿಗೆ ವಿದ್ಯುತ್ ಸಪ್ಲೈಯಾಗುತ್ತಿದೆ ಎಂಬುದೆಲ್ಲಾ ಗೊತ್ತಿದೆ. ಬಹುಶ: ನನಗನ್ನಿಸುತ್ತಿದೆ, ನೀವು ಹಳ್ಳಿಗಳಿಗೆ ಹೋಗಿ ಹಾಕಿರುವ ಬಲ್ಬ್‌ಗಳನ್ನು ತೆಗೆದು ಕೈ ಇಟ್ಟರೂ ಕೂಡ ಶಾಕ್ ಹೊಡೆಯುವುದಿಲ್ಲ. ಅಷ್ಟರ ಪ್ರಮಾಣದಲ್ಲಿ ವಿದ್ಯುತ್ ಸಪ್ಲೈ ಆಗುತ್ತಿರತಕ್ಕಂಥದ್ದು. ಈ ರೀತಿಯಾಗಿ ವಿದ್ಯುಚ್ಛಕ್ತಿ ಒಂದರಲ್ಲಿಯೇ ರಾಜ್ಯದಲ್ಲಿ ಏನು ಅನಾಹುತವಾಗಿದೆ

ನೋಡಿ. ಯಾವುದೇ ಸರ್ಕಾರವಾದರೂ ಕೂಡ ಅದರ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕಾಗಿತ್ತು. ಆ ರೀತಿ ಹೆಚ್ಚು ಗಮನವನ್ನು ಕೊಡದ ಪ್ರಯುಕ್ತ ಈ ರಾಜ್ಯದಲ್ಲಿ ವಿದ್ಯುತ್ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಕುಂಠಿತವಾಗಿದೆ ಎನ್ನತಕ್ಕಂಥದ್ದನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ ಕೇವಲ ಎರಡು ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಎರಡು ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಕಾರಣಕ್ಕೋಸ್ಕರ ಇವರು ಏನು ಮಾಡಿದರೆಂದರೆ RLMS ಎನ್ನತಕ್ಕಂಥ ಯೋಜನೆ ಮತ್ತು ನಿರಂತರ ಜೋತಿ ಎನ್ನತಕ್ಕಂಥ ಎರಡು ಯೋಜನೆಗಳನ್ನು ಮಾಡಿದರು. ಸಹಸ್ರಾರು ಕೋಟಿ ರೂ.ಗಳನ್ನು ಹಾಕತಕ್ಕಂಥ ಕೆಲಸವನ್ನು ಮಾಡಿದರು. ಆದರೆ ಯಾವ ಕಾರಣಕ್ಕೋಸ್ಕರ ಈ RLMS ಯೋಜನೆ ಎಂದು ಹೇಳಿ voltage stabilization ಗೋಸ್ಕರ ಮಾಡಿದ ಆ ಯೋಜನೆಗೆ ಸುಮಾರು ಅಂದಾಜು ಮಾಡಿದ್ದು 4500 ಕೋಟಿ ರೂ.ಗಳು, ಅದನ್ನು ಯಾವ ಕಾರಣಕ್ಕೋಸ್ಕರ ಸ್ಥಗಿತಗೊಳಿಸಿದರೋ ಎಂದು ಯಾರಿಗೂ ಅರ್ಥವಾಗಲಿಲ್ಲ. ಅದನ್ನು ಏಕಾಏಕಿ ಸ್ಥಗಿತಗೊಳಿಸತಕ್ಕಂಥ ಕೆಲಸವನ್ನು ಮಾಡಿ ನಿರಂತರ ಜ್ಯೋತಿ ಎನ್ನತಕ್ಕಂಥ ಯೋಜನೆಯನ್ನು ತೆಗೆದುಕೊಂಡರು. ಅದಕ್ಕೇನು ಕಡಿಮೆ ಬಂಡವಾಳವೆ? ಅದಕ್ಕೂ ಕೂಡ ನಾಲ್ಕೈದು ಸಾವಿರ ಕೋಟಿ ರೂ.ಗಳು. ನಾಲ್ಕೈದು ಸಾವಿರ ಕೋಟಿ ರೂ.ಗಳನ್ನು ಹಾಕಿ ನೋಡಿದರು. ನನಗನ್ನಿಸುತ್ತಿದೆ, ಬಹುಶ: ಇವರು ಎಲ್ಲೋ ಒಂದು ಕಡೆಗೆ ಯೋಜನೆ ಮಾಡಿದ ರೀತಿಯಲ್ಲಿ ನಿರಂತರ ಜ್ಯೋತಿ ಎನ್ನತಕ್ಕಂಥ ಯೋಜನೆಯನ್ನು ಏನಾದರೂ ಕೂಡ ಮುಗಿಸುವಂಥ ಕೆಲಸವನ್ನು ಮಾಡಿದ್ದರೆ ಸ್ವಲ್ಪ ಮಟ್ಟಿಗೆ ನಿಜವಾಗಿಯೂ ಸಹಾಯವಾಗುತ್ತಿತ್ತು. ಎಲ್ಲಾ ಕಡೆಯಲ್ಲಿಯೂ ಕೂಡ ಶೇಕಡ 70 ರಷ್ಟು, 80 ರಷ್ಟು ಕೆಲಸ ಮುಗಿದಿದೆ, ಕಮಿಷನ್ ಆಗಿರತಕ್ಕಂಥದ್ದು only 10 to 20 per cent. ಅದನ್ನಾದರೂ ಕೂಡ ಸಂಪೂರ್ಣ ಮಾಡಿದ್ದರೆ ಬಹುಶ: ನಮಗೆ ಈ ಬರಗಾಲದಿಂದ ಆಗಿರತಕ್ಕಂಥ ಅನಾಹುತಕ್ಕೆ ಜನರು ತುತ್ತಾಗುತ್ತಿರಲಿಲ್ಲ. ನಿರಂತರ ಜ್ಯೋತಿಯ ಉದ್ದೇಶವೇನೆಂದರೆ, ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ 24 ಗಂಟೆಗಳ ಕಾಲ ಕೊಡಬೇಕು ಎಂಬುದೇ ಆಗಿದೆ. ಸಿಂಗಲ್ ಫೇಸ್‌ನಲ್ಲಿ 24 ಗಂಟೆಗಳ ಕಾಲ ಕೊಡುವುದಕ್ಕೆ ಆಗದೇ voltage drop ಆಯಿತು, ಇನ್ನೇನೋ ಪ್ರಾಬ್ಲಮ್

ಆಯಿತು ಎಂದರೂ ಕೂಡ ಕಡೇ ಪಕ್ಷ ಹತ್ತರಿಂದ ಹದಿನೈದು ಗಂಟೆಗಳ ಕಾಲವಾದರೂ ವಿದ್ಯುಚ್ಛಕ್ತಿ ಲಭ್ಯವಾಗುತ್ತಿತ್ತು. ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿರಲಿಲ್ಲ. ಆದರೆ ಎಲ್ಲಿ ನಿರಂತರ ಜ್ಯೋತಿ ಸ್ಕೀಂ ಕವರ್ ಆಗಿಲ್ಲವೋ ಅಂಥ ಕಡೆ ನೀವು ಕೊಡುತ್ತಿರುವುದೆಷ್ಟು ಎಂದರೆ ಥ್ರೀ ಫೇಸ್‌ನ್ನು ಆರು ಗಂಟೆಗಳ ಕಾಲ. ನೀವು ಪದೇ ಪದೇ ಹೇಳುತ್ತೀರಿ ಥ್ರೀ ಫೇಸ್‌ನ್ನು ಆರು ಗಂಟೆಗಳ ಕಾಲ ವಿದ್ಯುತ್‌ನ್ನು ದಿನದ ಎರಡು ಅವಧಿಯಲ್ಲಿ ಕೊಡುತ್ತಿದ್ದೇವೆ ಎಂದು ಹೇಳುತ್ತೀರಿ. ನಾನು ಹೇಳುತ್ತೇನೆ voltage ಅನ್ನು ನೀವು stabilize ಮಾಡದೇ drop ಆಗುತ್ತಿರತಕ್ಕಂಥದ್ದನ್ನು ನೋಡಿದಾಗ ಒಂದು ದಿನಕ್ಕೆ ಆರು ಗಂಟೆಯಲ್ಲ, ಎರಡು ಗಂಟೆ ಸಹಿತ ವಿದ್ಯುತ್ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಳೆದ ಒಂದು ತಿಂಗಳಲ್ಲಿ ನನ್ನ ಕ್ಷೇತ್ರದಲ್ಲಿ ಏನಾಗಿದೆಯೆಂದು ನಾನು ಇಂಜಿನಿಯರ್ ಜೊತೆ ಕುಳಿತು ಲೆಕ್ಕ ಹಾಕಿದೆ. ಕೇವಲ ಒಂದೂವರೆ ಗಂಟೆ ಕಾಲ ಮಾತ್ರ ವಿದ್ಯುತ್ ಪೂರೈಕೆಯಾಗಿರುವುದು. ಅದೂ ರಾತ್ರಿ ಹೊತ್ತು ಎರಡು ಗಂಟೆಗೋ, ಮೂರು ಗಂಟೆಗೋ ಕೊಟ್ಟಿರತಕ್ಕಂಥದ್ದು. ಡಿಸೆಂಬರ್‌ನಿಂದ ಶುರುವಾಗಿರತಕ್ಕಂಥದ್ದೇನೆಂದರೆ ಯಾವತ್ತೂ ಕೂಡ ಗ್ರಾಮಗಳಲ್ಲಿ ಅವರಿಗೆ ಬೆಳಕೇ ಇಲ್ಲ. ಕೇವಲ ಥ್ರೀ ಫೇಸ್ ಮಾತ್ರ ಕನೆಕ್ಷನ್, ಈ ಮಧ್ಯದಲ್ಲಿ ಹಳ್ಳಿಗಳಲ್ಲಿ ಮನೆಗಳಿಗೆ ಕನೆಕ್ಷನ್ ತೆಗೆದುಕೊಂಡಿದ್ದರೆ ಅವರಿಗೆ ಕರೆಂಟೇ ಇಲ್ಲ. ಇದು ಈ ರಾಜ್ಯದ ಪರಿಸ್ಥಿತಿ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ದೊಡ್ಡ ಸಾಧನೆ ಮಾಡಿದ್ದೇವೆ ಎನ್ನತಕ್ಕಂಥ ರೀತಿಯಲ್ಲಿ ಹೇಳಿಸುವಾಗ ನೀವು ಯೋಚನೆ ಮಾಡಬೇಕಿತ್ತು. ಎಷ್ಟರ ಮಟ್ಟಿಗೆ ನೀವು ಕೊಟ್ಟಂಥ ಮಾತನ್ನು ಉಳಿಸಿಕೊಂಡಿದ್ದೀರಿ ಎಂದು ಯೋಚನೆ ಮಾಡಬೇಕಿತ್ತು. ಮೊನ್ನೆ ಯಾವುದೋ ಒಂದು ಪ್ರಶ್ನೆಯಲ್ಲಿ ಈ ರಾಜ್ಯದಲ್ಲಿ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ವಿದ್ಯುತ್ ಉತ್ಪಾದನೆ ಆಗುತ್ತಿದೆ ಎಂದು ಪ್ರಶ್ನೆ ಕೇಳಿದಂಥ ಸಂದರ್ಭದಲ್ಲಿ ಸರ್ಕಾರ ಉತ್ತರ ಕೊಟ್ಟು ಪವನ ವಿದ್ಯುತ್ 1890 ಮೆ.ವ್ಯಾ., ಕಿರು ಜಲ ವಿದ್ಯುತ್ 646 ಮೆ.ವ್ಯಾ., ಸಹ ವಿದ್ಯುತ್ 782 ಮೆ.ವ್ಯಾ., ಜೈವಿಕ 87 ಮೆ.ವ್ಯಾ., ಸೌರ ಶಕ್ತಿ 9 ಮೆ.ವ್ಯಾ., ಹೀಗೆ ಒಟ್ಟು 3415 ಮೆ.ವ್ಯಾ. ಎಂದು ಹೇಳಿದ್ದೀರಿ. ನೀವು ಕಳೆದ 5 ವರ್ಷದಲ್ಲಿ ಏನು ಮಾಡಿದ್ದೀರಿ? ನೀವು 10 ಸಾವಿರ ಮೆ.ವ್ಯಾಗೆ ಗುರಿ ಇಟ್ಟುಕೊಂಡಿದ್ದಿರಿ. 14 ಸಾವಿರ ಕೋಟಿ ರೂ.ಗಳನ್ನು ಹಾಕಿದ್ದೇವೆ, 5 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುತ್ತೇವೆಂದು ರಾಜ್ಯಪಾಲರಿಂದ

ಹೇಳಿಸುತ್ತೀರಿ ಎಲ್ಲಿಗೆ ಹೋಯಿತು ಆ ಕರೆಂಟ್? ನಾನು, ನೀವು ಕೊಟ್ಟಿರತಕ್ಕಂಥ ದಾಖಲೆಗಳನ್ನು ಆಧಾರವನ್ನಾಗಿ ಇಟ್ಟುಕೊಂಡು ಮಾತನಾಡುತ್ತಿದ್ದೇನೆಯೇ ವಿನ: ಬೇರೆ ನಾನು ಏನೂ ಹೇಳುವುದಕ್ಕೆ ಹೋಗುತ್ತಿಲ್ಲ. ಇದು ಒಂದು ಕಡೆ ಇರತಕ್ಕಂಥ ವಾಸ್ತವ. ಯಾರೊಬ್ಬರೂ ಇಲ್ಲದಿರುವ ಸಂದರ್ಭದಲ್ಲಿ ಏನು ಹೇಳಿದರೂ ತಾನೆ ಪ್ರಯೋಜನವಾಗುತ್ತದೆಯೇ? ನಾನು ಎಷ್ಟೊತ್ತಾದರೂ, ಎರಡು ಮೂರು ಗಂಟೆಯಾದರೂ ಮಾತನಾಡುವುದಕ್ಕೆ ತಯಾರಿದ್ದೇನೆ. ನಾನು ಇನ್ನೂ subjectಗೆ ಹೋಗಿಲ್ಲ. ಇಲ್ಲಿ ನಾನು ಮಾತನಾಡಿ ಸಲಹೆ ಕೊಟ್ಟರೆ ಏನು ಪ್ರಯೋಜನವಾಗುತ್ತದೆ? ಈ ಕಡೆಯೂ ಖಾಲಿ, ಸರ್ಕಾರವೂ ಖಾಲಿ, ಏನು ಮಾಡುವುದು ಎಂದು ಹೇಳಿ. ಉಮೇಶ್ ಕತ್ತಿ, ನೀವು ಕುಳಿತುಕೊಂಡಿದ್ದೀರಿ ಅಷ್ಟೇ. ನಾನು ಮಾತನಾಡುವುದು ಬರೇ ರೆಕಾರ್ಡ್‌ಗೆ ಹೋಗುವುದು ಬಿಟ್ಟರೆ ಇನ್ನೇನೂ ಬದಲಾವಣೆಯಾಗುವುದಿಲ್ಲ, ಏನೂ ಪರಿಣಾಮವಾಗುವುದಿಲ್ಲ. ಏನಾದರೂ ಮಾಡಿ ನಾಳೆ ಚರ್ಚೆ ಆಗುವಂತಹ ಸಂದರ್ಭದಲ್ಲಿ ದಯಮಾಡಿ ಸರ್ಕಾರಕ್ಕೆ ಸ್ವಲ್ಪ ಕಿವಿ ಹಿಂಡುವಂತಹ ಕೆಲಸವನ್ನು ಮಾಡಿ. ಮಕ್ಕಳಿಗೆ ಪರೀಕ್ಷೆ ಪ್ರಾರಂಭವಾಗಿದೆ. ಫೆಬ್ರವರಿ, ಮಾರ್ಚ್ ಅಥವಾ ಏಪ್ರಿಲ್ ಮೂರು ತಿಂಗಳಾದರೂ ಕನಿಷ್ಠ ಸಂಜೆ ಆರು ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಆರು ಗಂಟೆ ಕಾಲ ಆದರೂ ಕೂಡ ವಿದ್ಯುಚ್ಛಕ್ತಿಯನ್ನು ಎಲ್ಲಾ ಕಡೆ ಕೊಡುವಂತಹ ರೀತಿಯಲ್ಲಿ ಏನಾದರೂ ಯೋಚನೆ ಮಾಡಿದರೆ ಒಂದು ದೊಡ್ಡ ಸಹಾಯವನ್ನು ಮಾಡಿದ ಹಾಗೆ ಆಗುತ್ತದೆ. ಇನ್ನು ವಿದ್ಯುಚ್ಛಕ್ತಿಯಲ್ಲಿ ಒಂದು ದೊಡ್ಡ ದಂಧೆ ಇದೆ. ಬಹುಶ: ಇವತ್ತು ಎಷ್ಟು ವಿದ್ಯುತ್ purchase ಮಾಡುತ್ತಿದ್ದಾರೆ ಎಂದರೆ ಒಂದು ವರ್ಷಕ್ಕೆ ಕನಿಷ್ಠ ಎಂದರೂ ಕೂಡ ಈ ವರ್ಷಕ್ಕೆ ಅವರು plan ಮಾಡಿರುವುದು 1,630 ಮೆಗಾವ್ಯಾಟ್. ಹಿಂದಿನ ವರ್ಷ ಇನ್ನೂ ಜಾಸ್ತಿ ಇತ್ತು. ಸಾವಿರಾರು ಕೋಟಿ ರೂಪಾಯಿಯಷ್ಟು ಬಂಡವಾಳವನ್ನು purchase ಮಾಡವುದಕ್ಕೆ ಹಾಕುತ್ತಿದ್ದಾರೆ. Purchase ಮಾಡಬೇಕಾದಂತಹ ಸಂದರ್ಭದಲ್ಲಿ ಒಂದು ವಿಚಾರ ಹೇಳುತ್ತಾರೆ. ಫೆಬ್ರವರಿ ತಿಂಗಳಲ್ಲಿ ನಿಮಗೆ ಎಷ್ಟೇ ವಿದ್ಯುಚ್ಛಕ್ತಿ ಲಭ್ಯವಿದ್ದರೂ, ಬೇರೆ ರಾಜ್ಯದಲ್ಲಿ ಇದ್ದರೂ ಕೂಡ ನಿಮಗೆ ಇರುವಂತಹ ತೊಂದರೆ ಏನೆಂದರೆ corridor ಇಲ್ಲ. ನಿಮಗೆ ಛತ್ತೀಸ್‌ಘಡದಲ್ಲಿ ಮತ್ತು ನಾರ್ತ್ ಇಂಡಿಯಾದಲ್ಲಿ ವಿದ್ಯುಚ್ಛಕ್ತಿ ಸಿಗುತ್ತದೆ. ಆ ವಿದ್ಯಚ್ಛಕ್ತಿಯನ್ನು ತರುವುದಕ್ಕೆ lines ಇಲ್ಲ. Lines ನಿಮ್ಮ ಸರ್ಕಾರ ಅಥವಾ ಕೇಂದ್ರ ಸರ್ಕಾರದ

control ಅಲ್ಲ. It is totally privatized. ಈ ತಿಂಗಳು ಒಂದೆರಡು ಗಂಟೆ ಏಕೆ ವಿದ್ಯುಚ್ಛಕ್ತಿ ತೊಂದರೆ ಆಯಿತು ಎಂದರೆ ಇವರು ದುಡ್ಡು ಕೊಟ್ಟು ವಿದ್ಯುಚ್ಛಕ್ತಿಯನ್ನು purchase ಮಾಡಬಹುದು, ಆದರೆ ಅದನ್ನು ತರುವುದಕ್ಕೆ corridor ಇಲ್ಲ. ಈ corridor ಇಲ್ಲವೆನ್ನುವ ಒಂದೇ ಕಾರಣವನ್ನು ಮುಂದೆ ಮಾಡಿ ನೀವು ಒಂದೆರಡು ಗಂಟೆ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ನಮ್ಮ ಮಕ್ಕಳ ಭವಿಷ್ಯ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ. ದಯಮಾಡಿ ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ, ಏನಾದರೂ ಮಾಡಿ ಕೇಂದ್ರ ಸರ್ಕಾರಕ್ಕೆ ಹೋಗಿ ಕೂಡ corridor ವ್ಯವಸ್ಥೆಯನ್ನು ಮಾಡಿ ತಾತ್ಕಾಲಿಕವಾಗಿ ಎರಡು-ಮೂರು ತಿಂಗಳು ಕನಿಷ್ಠ ಸಾಯಂಕಾಲದ ಹೊತ್ತಾದರೂ ಕೂಡ ಐದಾರು ಗಂಟೆ ಕರೆಂಟ್ ಕೊಡುವುದರ ಬಗ್ಗೆ ಇವರು ಯೋಚನೆ ಮಾಡಬೇಕು. ಇವರು ವಿದ್ಯುಚ್ಛಕ್ತಿಯನ್ನು ಯಾರ್‍ಯಾರ ಹತ್ತಿರ purchase ಮಾಡುತ್ತಾರೆನ್ನುವುದು ನಿಮ್ಮ ಗಮನದಲ್ಲಿರಲಿ. ನಾವು ಒಂದು ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತೇವೆಂದು ಹೇಳಿದರೆ ಅದನ್ನು ಸರ್ಕಾರದವರೇ ಮಾಡಬೇಕೆಂದು ಇಲ್ಲ. ಬೇರೆ ಬೇರೆ ಖಾಸಗಿ ವಲಯಗಳಿಂದ ಉತ್ಪತ್ತಿ ಮಾಡುವುದಕ್ಕೆ ಸಾಧ್ಯತೆ ಇದ್ದೇ ಇದೆ. ಇವತ್ತು ನಮಗೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಕೊಡುವ ಸಂಸ್ಥೆಗಳು ಇಲ್ಲವೆಂದು ಇಲ್ಲ. ಸರ್ಕಾರದ ನೀತಿ ಹೇಗಿದೆ ಎಂದರೆ co-generation ಇರಬಹುದು, wind energy ಇರಬಹುದು ಅಥವಾ local ಆಗಿ ಯಾವುದಾದರೂ ಒಂದು sectorನಲ್ಲಿ energy produce ಮಾಡುತ್ತಿದ್ದಾರೆಂದರೆ ಇವರು ಅವರಿಗೆ ಯಾವತ್ತೂ ನೇರವಾಗಿ agreement ಮಾಡಿಲ್ಲ. ಇವತ್ತು localನವರಿಗೆ ಪ್ರೋತ್ಸಾಹ ಮಾಡುವುದಾದರೆ ಒಂದು ಸಾವಿರ ಮೆಗಾವ್ಯಾಟ್ ಅಲ್ಲ, ಎರಡು ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ತಯಾರು ಮಾಡುವಂತಹ ಸಂಸ್ಥೆಗಳಿವೆ. ಇವತ್ತು ಅಕ್ರಮ ಗಣಿಗಾರಿಕೆಯಿಂದಾಗಿ ಎಲ್ಲಾ steel factories ನಿಂತು ಹೋಗಿವೆ. ಇವತ್ತು ಅತ್ಯಂತ ಕಡಿಮೆ ಖರ್ಚಿನಲ್ಲಿ ಸ್ಥಳೀಯವಾಗಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬೇಕೆನ್ನುವ ಮನೋಭಾವ ನಿಮ್ಮಲ್ಲಿ ಇದ್ದಿದ್ದರೆ, ನೀವು coal ತರಿಸಿಕೊಂಡು ಅದರಿಂದ ವಿದ್ಯುಚ್ಛಕ್ತಿ ತಯಾರಿಸಿ ಕೊಡಿ ಎಂದು ಆ ಎಲ್ಲಾ steel factoriesನವರಿಗೆ ಹೇಳಿದ್ದರೆ, ಬಹುಶ: ಅವರು ಕೊಟ್ಟಿರುತ್ತಿದ್ದರು. ಇವತ್ತು ore ಇಲ್ಲವೆನ್ನುವ ಕಾರಣಕ್ಕೋಸ್ಕರ ಎಲ್ಲಾ steel factories close ಆಗಿಹೋಗಿವೆ. ಅವರಿಗೆ ವಿದ್ಯುಚ್ಛಕಿಯನ್ನು

ಕೊಡುವುದಕ್ಕೆ ಸಾಮರ್ಥ್ಯ ಇತ್ತು. ಅವರಿಗೂ ಕೂಡ ಆರ್ಥಿಕವಾಗಿ ಸ್ವಲ್ಪ ಸಹಾಯವಾಗುತ್ತಿತ್ತು ಮತ್ತು ರಾಜ್ಯಕ್ಕೂ ಕೂಡ ಸಹಾಯವಾಗುತ್ತಿತ್ತು. ಇವರು ಆ ಕೆಲಸವನ್ನು ಮಾಡಲಿಲ್ಲ. ಏನು ತಮಾಷೆ ಎಂದರೆ ಇಲ್ಲಿಯವರೆಗೂ steel factory ಯವರೂ ಏನು ವಿದ್ಯುತ್ supply ಮಾಡುತ್ತಿದ್ದಾರೆ ಅಥವಾ co-generation ನಿಂದ ವಿದ್ಯುತ್ ತಯಾರಿಸಿ supply ಮಾಡುತ್ತಿರುವುದಕ್ಕೆ ಇವರು ಕೊಡುತ್ತಿರುವ ದರ ಎಷ್ಟು ಎಂದರೆ ರೂ.3.75, 4.00 ರೂಪಾಯಿ highest ಇವರು ಕೊಡುವುದು. ಆದರೆ ಇವರು ಇವತ್ತು purchase ಮಾಡುತ್ತಿರುವುದು ಯಾರ ಹತ್ತಿರ ಎಂದರೆ JSW, ಜಿಂದಾಲ್ ಈ ರೀತಿ ದೊಡ್ಡ ದೊಡ್ಡ ಕಂಪನಿಗಳ ಹತ್ತಿರ 500–600 ಮೆಗಾವ್ಯಾಟ್ purchase ಮಾಡುತ್ತಿದ್ದಾರೆ. ಅವರ ಹತ್ತಿರ ಈಗ ಯಾವ ರೇಟ್‌ನಲ್ಲಿ purchase ಮಾಡುತ್ತಿರುವುದು ಎಂದರೆ ಒಂದು ಯೂನಿಟ್‌ಗೆ 13 ರೂಪಾಯಿ. ಅದೇ ಸ್ಥಳೀಯವಾಗಿರುವಂತಹ ಸಂಸ್ಥೆಗಳು supply ಮಾಡುವುದಕ್ಕೆ ರೂ.3.75. ಇದು ಯಾವ ನೀತಿ? ಈ ಸರ್ಕಾರಕ್ಕೆ ಏನಾದರೂ ಕಣ್ಣು ಇದೆಯೇ? ಸ್ಥಳೀಯವಾಗಿ ವಿದ್ಯುತ್ ಉತ್ಪತ್ತಿ ಮಾಡುವಂತಹ ಸಂಸ್ಥೆಗಳಿಗೆ ಯಾವ ರೀತಿ ಪ್ರೋತ್ಸಾಹ ಮಾಡಬೇಕೆಂದು ಅರ್ಥ ಆಗಿದೆಯಾ? ಅದೇನೂ ಅರಿವಿಲ್ಲದೇ ಇವತ್ತು ಸಾರಾಸಗಟಾಗಿ ವಿದ್ಯುಚ್ಛಕ್ತಿಯನ್ನು ಇವರು ಯಾರಿಂದ ಕೊಳ್ಳುತ್ತಿರುವುದು ಎಂದರೆ ಖಾಸಗಿ ಯವರಿಂದ ಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೂ ಕಡಿಮೆ ಎಂದರೆ 7 ರೂಪಾಯಿ, ಜಾಸ್ತಿ ಎಂದರೆ 13 ರೂಪಾಯಿ. ಇದರಿಂದ ಜನಕ್ಕೆ ಏನಾದರೂ ಪ್ರಯೋಜನ ಇದೆಯಾ? ಜನಕ್ಕೂ ಪ್ರಯೋಜನ ಆಗುತ್ತಿಲ್ಲ. ಇವತ್ತು ನಮ್ಮ ESCOMಗಳ ಪರಿಸ್ಥಿತಿ ಏನಾಗಿದೆ?

ಉಪಾಧ್ಯಕ್ಷರು:– ಜಯಚಂದ್ರರವರೇ ಒಂದು ನಿಮಿಷ, ನಾನು ಆರ್ಥಿಕ ಸಮೀಕ್ಷೆ ಎನ್ನುವ ಪುಸ್ತಕ ನಮ್ಮ ಟೇಬಲ್ ಮೇಲಿದೆ, ಅದನ್ನು ನೋಡುತ್ತಿದ್ದೆ. ಅದರಲ್ಲಿ ವಿದ್ಯುತ್ ಖರೀದಿ ಆಗಿರುವುದು average 4 ರೂಪಾಯಿ ಎಂದು mention ಮಾಡಿದೆ. ಅದರ ಬಗ್ಗೆ ಬೆಳಕು ಚೆಲ್ಲಿ.

ಶ್ರೀ ಟಿ.ಬಿ. ಜಯಚಂದ್ರ:– Average ಎಂದರೆ ನಮ್ಮ ಸ್ಥಳೀಯ ಸಂಸ್ಥೆಗಳಿಂದ ರೂ.2.75 ಅಥವಾ 3 ರೂಪಾಯಿಗೆ ವಿದ್ಯುತ್ supply ಏನು ಪ್ರಾರಂಭವಾಗುತ್ತದೆ ಅದನ್ನೂ ಸೇರಿಸಿಕೊಂಡು ನೀರಿನ ಮೂಲದಿಂದ ಬರುವುದನ್ನು calculate ಮಾಡಿದರೆ ಕಡಿಮೆ ಬರುತ್ತದೆ. ಆದರೆ ಖಾಸಗಿ

ಯವರಿಗೆ ಮಾತ್ರ 13 ರೂಪಾಯಿ ಕೊಡುತ್ತಿರುವುದು. ನೀವು average ಲೆಕ್ಕ ಹಾಕಿಕೊಂಡರೆ ಬಹಳ ವರ್ಷಗಳ ಯೋಜನೆಗಳಿಂದ ಬರುತ್ತಿರುವುದು ಬಹಳ ಕಡಿಮೆ produce ಮಾಡತಕ್ಕಂಥದ್ದು Power Corporation, ಅದನ್ನು distribution ಮಾಡತಕ್ಕಂಥದ್ದು KPTCL. ಅವು ಯಾವಾಗ ಆಗಿರುವ unitಗಳು? ಶರಾವತಿಯಿಂದ ಬರುತ್ತಿರುವುದಕ್ಕೆ ಇವರು only nominal ಆಗಿ charge ಮಾಡುವುದು ಕೆಲವೇ ಪೈಸೆಗಳು. ಈ ರೀತಿ ಎಲ್ಲಾ ಲೆಕ್ಕ ಹಾಕಿಕೊಂಡು ಅವರು 4 ರೂಪಾಯಿ ಎಂದು ಹೇಳುತ್ತಾರೆ. ಅದಲ್ಲ ಮುಖ್ಯ. ನಮ್ಮ ಸ್ವಾಮ್ಯದಲ್ಲಿ ಇರುವುದು ಇದ್ದೇ ಇದೆ. ಅದನ್ನು ನಾವು ನಮ್ಮ ರೈತರಿಗೆ ಕೊಡಬೇಕಾಗುತ್ತದೆ, ಕೊಡೋಣ. ಆದರೆ ನಾವು ಯಾವ ರೇಟ್‌ನಲ್ಲಿ purchase ಮಾಡುತ್ತಿರುವುದು? ಇದು ಬೇಕಿತ್ತೇ? ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿರಲಿಲ್ಲವೇ? ಇದು ನಾನು ಹೇಳಿರುವುದು ಕೇವಲ ಒಂದು ಉದಾಹರಣೆ. ಇವತ್ತು coal base ನಲ್ಲಿ ನೀವು ಸಾಕಷ್ಟು ರೀತಿಯಲ್ಲಿ ಸ್ಥಳೀಯವಾಗಿ ಪ್ರೋತ್ಸಾಹ ಮಾಡಬಹುದಾಗಿತ್ತು. ಯಾವುದನ್ನೂ ಮಾಡಲಿಲ್ಲ. ಈಗ ನಿಮಗೆ ಬಹಳ important ಎಂದರೆ JSW, ಅದೇನು ಕತೆಯೋ ಗೊತ್ತಿಲ್ಲ. ಜಿಂದಾಲ್‌ಗೂ ಈ ಸರ್ಕಾರಕ್ಕೂ ಬಹಳ ನಂಟಿದೆ. NETS, JUVLNL, BMM, PTC ಈ ರೀತಿಯಾಗಿ ಏನೇನೋ ಕಂಪನಿಗಳಿಂದ purchase ಮಾಡುತ್ತಿದ್ದಾರೆ. ಇದೆಲ್ಲದರ ಜೊತೆಗೆ ಏನೇನು ದೀರ್ಘಕಾಲದ ಯೋಜನೆಗಳನ್ನು ಮಾಡುತ್ತಿದ್ದಾರೆಂದರೆ ಕೂಡಿಗಿಯಲ್ಲಿ 4,000 ಮೆಗಾವ್ಯಾಟ್ ಉತ್ಪತ್ತಿ ಮಾಡುತ್ತಿದ್ದೇವೆ, ಅದಕ್ಕೆ ಭೂಮಿ acquire ಆಗುತ್ತಿದೆ. ಹಾಸನದಲ್ಲಿ 660 ಮೆಗಾವ್ಯಾಟ್ ಮಾಡುತ್ತೇವೆ, ಒಪ್ಪಂದಕ್ಕೆ ಅನುಮೋದನೆ ಕೊಟ್ಟಿದ್ದೇವೆ. ಬೆಳಗಾಂ, ಗದಗ ಮತ್ತು ದಾವಣಗೆರೆಯಲ್ಲಿ ಅನಿಲ ಆಧಾರಿತ ವಿದ್ಯುತ್ 2,100 ಮೆಗಾವ್ಯಾಟ್ ಯೋಜನೆಗೆ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಗುಲ್ಬರ್ಗಾ ಕಲ್ಲಿದ್ದಲು ವಿದ್ಯುತ್ ಯೋಜನೆ ಘಟಕ 1–2 1,320 ಮೆ.ವ್ಯಾಟ್, RFU ಮೌಲ್ಯಮಾಪನ ಕಾರ್ಯ ಜಾರಿಯಲ್ಲಿದೆ. ಇದೆಲ್ಲವೂ ಏನು? ಘಟಪ್ರಭ ಕಲ್ಲಿದ್ದಲು ವಿದ್ಯುತ್ ಯೋಜನೆ 1,320 ಮೆ.ವ್ಯಾ., 1,300 ಎಕರೆ ಜಾಗ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ. ಇವೆಲ್ಲವನ್ನೂ ಇವರು ಮಾಡಿರುವಂಥದ್ದು. ತಾವು ಹೇಳಿದ್ದು ಏನು? ಮಾನ್ಯ ರಾಜ್ಯಪಾಲರ ಕೈಯಲ್ಲಿ ಹೇಳಿಸಿದ್ದು ಏನು? ಈಗ ಆಗುತ್ತಿರುವಂಥದ್ದು ಏನು? ವಸ್ತುಸ್ಥಿತಿ ಏನು ಎನ್ನತಕ್ಕಂಥದ್ದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಬೆಳಿಗ್ಗೆ coal purchase

ಮಾಡುವುದರ ಬಗ್ಗೆ ಅವ್ಯವಹಾರವಾಗಿದೆಯೆಂಬ ಪ್ರಶ್ನೆಯನ್ನು ಕೇಳಿದ್ದೆ. ಈ ವರ್ಷ ನಮ್ಮ ಹತ್ತಿರ 15 ಲಕ್ಷ ಟನ್ imported coal ಅನ್ನು ಕೊಂಡುಕೊಳ್ಳುತ್ತಿದ್ದಾರೆ. ಈ 15 ಲಕ್ಷ ಟನ್ ಟೆಂಡರ್‌ನಲ್ಲಿ ಇವರು import ಮಾಡಿಕೊಂಡು ತೆಗೆದುಕೊಳ್ಳುವುದಕ್ಕೆ ಕೆಲವು ದಳ್ಳಾಳಿಗಳು ಇದ್ದಾರೆ. ಅವರೇ tenderನಲ್ಲಿ participate ಮಾಡುವುದು, ನಾಮಕಾವಸ್ಥೆಗೆ ಯಾವದೋ ಒಂದು ಸಂಸ್ಥೆ ಇರುತ್ತದೆ ಅವರಿಗೆ exemption ಇರುತ್ತದೆ. ಅವರಿಗೆ ಇಷ್ಟು ಎಂದು commission ಕೊಟ್ಟು ಬಿಡುತ್ತಾರೆ. ಇಲ್ಲಿ commission ಕೊಟ್ಟು ವ್ಯವಹಾರ ಮಾಡುವವರು ಅವರೇ ಆಗಿರುತ್ತಾರೆ. ನಾನು ಈ ಬಗ್ಗೆ ಬೆಳಿಗ್ಗೆ ಆರೋಪವನ್ನು ಮಾಡಿದೆ. ಆಂಧ್ರ ಪ್ರದೇಶಕ್ಕೆ ಹೋಲಿಸಿದರೆ ವರ್ಷದಲ್ಲಿ ಸುಮಾರು 18,000 ಕೋಟಿ ರೂ.ಗಳಿಂತಲೂ ಹೆಚ್ಚಿಗೆ ಕೊಟ್ಟಿದ್ದಾರೆ. ಇದು ಯಾವ ಕಂಪೆನಿ? ಇದನ್ನು supply ಮಾಡುವಂಥವರು ಯಾರೆಂದರೆ, CBI enquiry ಆಗಿರುವಂಥವನ್ನು, ಜೈಲಿನಲ್ಲಿರುವಂಥವನು, ಅವನಿಂದ purchase ಮಾಡಿರುತಕ್ಕದ್ದು. ಅದಕ್ಕೆ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಈಗ NTTC ಅಥವಾ ಇನ್ನು ಯಾವುದೋ ಸಂಸ್ಥೆಗಳು ಇವತ್ತು ಬಹಳ ಕಡಿಮೆಗೆ quote ಮಾಡುತ್ತೇವೆಂದರೆ ಅವರಿಗೆ ಕೊಟ್ಟು ಬಿಡುತ್ತಾರೆ? ಇದಕ್ಕೆ long term policyಗಳನ್ನು ಇವರು ಇಟ್ಟುಕೊಳ್ಳುವುದಕ್ಕೆ ಏಕೆ ಸಾಧ್ಯವಾಗಿಲಿಲ್ಲ? ತಾವು coal ಅನ್ನು ಯಾವ mine owners ನಿಂದ purchase ಮಾಡುತ್ತೀರಾ, ಅದು ಇಂಡೋನೇಷಿಯಾ ಇರಬಹುದು, ಆಸ್ಟ್ರೇಲಿಯಾ ಇರಬಹುದು, ಅವರ ಹತ್ತಿರ ನೇರವಾಗಿ ತಾವು ಕುಳಿತು agreement ಮಾಡಿದರೆ, ನಿಮಗೆ ತೊಂದರೆಯಾಗುವುದಿಲ್ಲ. ಈಗ ಒಂದು ಟನ್‌ಗೆ 6,230 ರೂ.ಗಳಂತೆ 15 ಲಕ್ಷ ಟನ್‌ಗೆ agreement ಆಗಿದೆ. 4,000 ಟನ್ supply ಮಾಡಿದ್ದಾರೆ, ಇನ್ನು 11,000 ಟನ್ supply ಮಾಡಬೇಕು. ಇವತ್ತು ಬಹಳಷ್ಟು ರೇಟ್ ಕುಸಿದಿದೆ. ಇದರಿಂದ ನಿಮಗೆ ಲಾಭವಾಗುತ್ತಿರಲಿಲ್ಲವೇ? ತಮಗೆ long term arrangement ಅನ್ನು ಇಟ್ಟುಕೊಳ್ಳುವುದಕ್ಕೆ ಏಕೆ ಸಾಧ್ಯವಾಗಲಿಲ್ಲ? ಅಥವಾ long term arrangement ಇಟ್ಟುಕೊಂಡರೆ ನಮಗೆ ಏನೂ ಲಾಭವಾಗುವುದಿಲ್ಲವೆಂದು ಏನಾದರೂ ಯೋಚನೆ ಮಾಡಿದ್ದೀರಾ? ನಾನು ಇದನ್ನು ಒಂದು ಉದಾಹರಣೆಯಾಗಿ ಹೇಳುತ್ತಿದ್ದೇನೆ. ಇವರು ಹೇಳಿದ್ದಕ್ಕೂ, ಮಾಡಿದ್ದಕ್ಕೂ,

ನಡೆಯುತ್ತಿರುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲವೆನ್ನುವುದಕ್ಕೆ ಇದು ಒಂದು ಉದಾಹರಣೆಯಾಗಿದೆ.

ಇನ್ನು ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ಈಗ ಹಣಕಾಸಿನ ಪರಿಸ್ಥಿತಿ ಬಹಳ ಅತ್ಯುತ್ತಮವಾಗಿದೆ. ಈಗ ಒಂದು ಲಕ್ಷ ಕೋಟಿ ರೂ.ಗಳವರೆಗೂ ಬಜೆಟ್ ಅನ್ನು ಮಂಡನೆ ಮಾಡಬಹುದೆಂಬ ಮಟ್ಟಕ್ಕೆ ಆಗಿದೆ. ಇದರಲ್ಲಿ ಕಾರಣ ಏನೆಂದರೆ, 2002ರಲ್ಲಿ Fiscal Responsibility Act ಅನ್ನು ತಂದಾಗ ಅದನ್ನು ತತ್ವಶ: ಜಾರಿಗೊಳಿಸುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ ಹಿನ್ನೆಲೆಯಲ್ಲಿ, ಇವತ್ತು ನಮ್ಮ ಸಂಪನ್ಮೂಲದ ಮಟ್ಟ ಜಾಸ್ತಿಯಾಗಿದೆ. ಇವತ್ತು ನಾವು ಎಲ್ಲೋ ಒಂದು ಕಡೆ ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸುವ ಮಟ್ಟಕ್ಕೆ ಸಾಮರ್ಥ್ಯ ಇದೆಯೇ? ಎಂದು ಹೇಳಿದರೆ, ನನಗೆ ಎಲ್ಲೋ ಒಂದು ಕಡೆಗೆ ಅದು ಇಲ್ಲವೆಂಬುದು ನನ್ನ ಭಾವನೆಯಾಗಿದೆ. ಅದನ್ನು ಪ್ರಚಾರಕ್ಕೋಸ್ಕರ ಮಾಡಿರುವಂಥದ್ದು, ಕಳೆದ 5 ವರ್ಷಗಳಲ್ಲಿ ನೀವು ಬಜೆಟ್ ಮಂಡನೆ ಮಾಡಿದ್ದು ಎಷ್ಟು? ನಿಮಗೆ ಸಂಪನ್ಮೂಲವನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವಾಗಿದ್ದು ಎಷ್ಟು? ನೀವು ಖರ್ಚು ಮಾಡಿದ್ದು ಎಷ್ಟೆಂಬುದನ್ನು ನೋಡಿದರೆ, ಕಳೆದ 5 ವರ್ಷಗಳಲ್ಲಿ ಪ್ರತಿ ವರ್ಷವೂ ಕೂಡ 15 ರಿಂದ 20 ಸಾವಿರ ಕೋಟಿ ರೂ.ಗಳು unspent balances ಇದೆ. ಬಜೆಟ್‌ನಲ್ಲಿ unspent balances ಅಂದರೆ, ಇಲ್ಲಿ ಹೇಗೆ ಹಣ ಉಳಿಯಿತೆಂಬುದು ಅರ್ಥವಾಗುವುದಿಲ್ಲ. Finance Departmentನಲ್ಲಿ ಆಯವ್ಯಯವನ್ನು ಮಂಡನೆ ಮಾಡುತ್ತಾರೆ, ನಾವು ಇಷ್ಟು ಹಣ ಬರುತ್ತದೆಂಬ ನಿರೀಕ್ಷೆ ಮಾಡಿ, ಇಷ್ಟು ಹಣವನ್ನು ಖರ್ಚು ಮಾಡುತ್ತೇವೆನ್ನುವ ರೀತಿಯಲ್ಲಿ ಹೇಳುತ್ತಾರೆ. ಇದನ್ನು ಮಾಡಬೇಕಾದಾಗ ಸ್ವಲ್ಪ ಲೆಕ್ಕಾಚಾರ ತಪ್ಪಾದಂಥ ಸಂದರ್ಭದಲ್ಲಿ supplementary Estimates ಎನ್ನುವಂಥದ್ದಕ್ಕೂ ಅವಕಾಶವಿದೆ. ಯಾವುದೋ ಒಂದು ಖಾತೆಯಲ್ಲಿ ಹಣ ಹೆಚ್ಚಿಗೆ ಇರುತ್ತದೆ, ಅದನ್ನು ತೆಗೆದು ಇನ್ನೊಂದು ಕಡೆಗೆ ಹಾಕಬಾಹುದು. Unforeseen expenditures ಅದರಲ್ಲಿ ಇನ್ನೊಂದು ಕಡೆಗೆ ಹಣವನ್ನು ಹಾಕುವುದಕ್ಕೆ ಅವಕಾಶವಿರುತ್ತದೆ. ಈ ಎಲ್ಲಾ ಅವಕಾಶಗಳು ಇದ್ದಾಗ, ಕೂಡಾ unspent balances ಕನಿಷ್ಠ ಎಂದರೂ 15 ರಿಂದ 20 ಸಾವಿರ ಕೋಟಿ ರೂ.ಗಳಿದೆ. ಇದನ್ನು ನೋಡಿದಾಗ, ತಾವು ಕೇವಲ ಪ್ರಚಾರಕ್ಕೋಸ್ಕರ ಇದನ್ನು ಲಕ್ಷ ಕೋಟಿ ರೂ.ಗಳೆಂದು ಹೇಳಿದ್ದೇ ವಿನ: ಇಷ್ಟರವರೆಗೂ ಕೂಡ

ಮಾಡಿರುವಂಥದ್ದು ಎಷ್ಟು ಎಂದರೆ, ಕೇವಲ 60 ರಿಂದ 70 ಸಾವಿರ ಕೋಟಿ ರೂ.ಗಳನ್ನು ಮೀರುವುದಕ್ಕೆ ಸಾಧ್ಯವಾಗಿಲ್ಲ. ನೀವು spend ಮಾಡುವುದರಲ್ಲಿ shortfall ತುಂಬಾ ಇದೆ. ಇದರ ಜೊತೆಗೆ ಸಾಲ ಬಜೆಟ್ ಮಂಡನೆ ಮಾಡಬೇಕಾದಾಗ, ನಮ್ಮಲ್ಲಿ ಕಳೆದ 5 ವರ್ಷದಲ್ಲಿ ಸಾಲ ಎಷ್ಟು ಇತ್ತೆಂದರೆ ಸುಮಾರು 52,000 ಕೋಟಿ ರೂ.ಗಳಿದ್ದದ್ದು, ಇವತ್ತು ಲಕ್ಷದ ಹನ್ನೊಂದು ಸಾವಿರ ಕೋಟಿ ರೂ.ಗಳಿಗೆ ಹೋಗಿದೆ. ನೀವು ಸಾಲವನ್ನು ತೆಗೆದುಕೊಂಡು ಬಂದು ಇದು ನಮ್ಮ ಹಣವೆಂದು ತೋರಿಸುವುದು. ನಮಗೆ ಸಾಲ ಮಾಡುವುದಕ್ಕೆ ಅವಕಾಶವಿದೆ, ನಾವು ತಂದಿದ್ದೇವೆ. ನಿಮಗೆ ಸಾಲ ತರುವುದಕ್ಕೆ ಶಕ್ತಿ ಇದೆಯೆಂಬ ಕಾರಣಕ್ಕೋಸ್ಕರ ಸಾಲವನ್ನು ತಂದು ಮಾಡಿದರೆ, ಸಂಪನ್ಮೂಲ ಜಾಸ್ತಿ ಆಗಿ ಇವತ್ತು ರಾಜ್ಯ ಅಭಿವೃದ್ಧಿಯಾಗಿದೆಯೆಂದು ಅರ್ಥವೇ? ಅದು ಖಂಡಿತ ಸಾಧ್ಯವಿಲ್ಲ. ಒಂದೊಂದು ವರ್ಷಕ್ಕೂ ಬಜೆಟ್ increase ಆಗಬೇಕಾದಾಗ, ಒಂದು healthy increase ಇರಬೇಕಾಗುತ್ತದೆ. ಇದರ ಜೊತೆಗೆ ನಮಗೆ inflation. ಇವತ್ತಿನ ಪತ್ರಿಕೆಯಲ್ಲಿ ಇದೆ, ಈ ವರ್ಷದ inflation 8%, 9% ಇದೆ. ನಿಮ್ಮ ಈ inflation 9%, 10% ಇರುವಂಥ ಸಂದರ್ಭದಲ್ಲಿ, ತಾವು ಒಂದು ಲಕ್ಷ ಕೋಟಿ ರೂ.ಗಳವರೆಗೂ ಹಾಕಿದ್ದೇವೆಂದು ಹೇಳಿದರೆ actual spending ಎಷ್ಟು? ನೀವು inflation rate ಅನ್ನು ಕಳೆದುಕೊಂಡರೆ, ನಿಮಗೆ 70–80% ಬರುವಂಥದ್ದು. ಇದರ ಜೊತೆಗೆ unspent balances ನೋಡತಕ್ಕಂಥದ್ದು, ಇವೆಲ್ಲವನ್ನೂ ನೋಡಿದರೆ ಈ ವರ್ಷದಲ್ಲೂ ಕೂಡ ನಾಳೆ ಬಜೆಟ್ ಮಂಡನೆ ಮಾಡುವುದರಲ್ಲಿ ಗೊತ್ತಾಗುತ್ತದೆ. ಅದರಲ್ಲಿ ಯಾವುದೇ ಕಾರಣಕ್ಕೂ 70 ರಿಂದ 80 ಸಾವಿರ ಕೋಟಿ ರೂ.ಗಳಿಗಿಂತ ಮುಂದಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ನೀವು ಲಕ್ಷ ಕೋಟಿ ರೂ.ಗಳಿಗೆ ಯಾವ ರೀತಿಯಾಗಿ ಲೆಕ್ಕವನ್ನು ತೋರಿಸುತ್ತೀರೆಂದರೆ, ಕೇಂದ್ರ ಸರ್ಕಾರದ ಯೋಜನೆಗಳ ಮೂಲಕ ಬರುವಂಥ ಹಣ, ಅದು grants ಇರಬಹುದು, loans ಇರಬಹುದು, ಇದೆಲ್ಲವನ್ನೂ ಮೊದಲು accountಗೆ ತೆಗೆದುಕೊಳ್ಳುತ್ತಿರಲಿಲ್ಲ. ಈಗ accountಗೆ ತೆಗೆದುಕೊಳ್ಳಬೇಕೆಂದು ಪ್ರಾರಂಭ ಮಾಡಿ ಒಂದು ಲಕ್ಷ ಕೋಟಿ ರೂ.ಗಳೆಂದು ಹೇಳಿ, ಮೇಜು ಕುಟ್ಟಿಸಿಕೊಳ್ಳುವಂಥ ಕೆಲಸವನ್ನು ಮಾಡಿತ್ತಿದ್ದೀರೇ ವಿನ: ಇದರಿಂದ ನಿಜವಾಗಿಯೂ ರಾಜ್ಯ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗಿಲ್ಲವೆನ್ನುವಂಥ ಮಾತನ್ನು ತಾವು

ಒಪ್ಪಬೇಕಾಗುತ್ತದೆ. ನಾವು ಇದನ್ನು ಎಲ್ಲೋ ಒಂದು ಕಡೆಗೆ ಬಜೆಟ್ ಮಂಡನೆ ಮಾಡಬೇಕಾದರೆ, Apart of the budget ಎಂದು simple ಆಗಿ ಒಂದು ಮಾತನ್ನು ಹೇಳುತ್ತೇನೆ. P.W.Dಯಲ್ಲಿ Appendix-E ಇರುವಂಥದ್ದು, it is a part of the budget, ಬಜೆಟ್ ಅನ್ನು ಮಂಡನೆ ಮಾಡಿದಂಥ ಕೆಲಸವು ದಿವಸಗಳಲ್ಲೇ ಅಂದರೆ 15 ದಿವಸಗಳಲ್ಲೋ ಒಂದು ತಿಂಗಳಲ್ಲೋ ತಾವು Appendix-E ಅನ್ನು ಕೊಡುವಂಥದ್ದು ವಾಸ್ತವಿಕವಾಗಿ ನಡೆದುಕೊಂಡು ಬಂದಿದೆ. ಕಳೆದ 5 ವರ್ಷಗಳಿಂದ ಏನು ನಡೆದುಕೊಂಡು ಬಂದಿದೆಯೆಂದರೆ, 2012–2013ರ Appendix-E ಇನ್ನೂ issue ಆಗಲೇ ಇಲ್ಲ. ಈಗ ನಾವು ಫೆಬ್ರವರಿ ತಿಂಗಳಲ್ಲಿ ಇದ್ದೇವೆ, ಇದುವರೆಗೂ ಅದು ಇನ್ನೂ ಆಗಿಲ್ಲ ಕಳೆದ ವರ್ಷ 2011–12ರಲ್ಲಿ ಇನ್ನು 20 ದಿವಸಗಳಿದೆ ಎಂದಾಗ Appendix-E ಯನ್ನು ಮಾಡಿದರು. ಆದರೂ ಕೂಡ ಕಾಮಗಾರಿಗಳು ನಡೆಯುತ್ತಿರುತ್ತವೆ. ಅವು ಹೇಗೆ ನಡೆಯುತ್ತದೆಂದರೆ Budget Manual ನಲ್ಲಿ ಇರುವಂಥದ್ದನ್ನೆಲ್ಲಾ ಮರೆತು ಬಿಟ್ಟು, ಬೇಕಾಬಿಟ್ಟಿಯಾಗಿ ಅವರು ಹೇಳಿದ ಹಾಗೆ ಟೆಂಡರ್ ಅನ್ನು ಕರೆದು ಬಿಡುವುದು, ಕೆಲಸವನ್ನು ಪ್ರಾರಂಭ ಮಾಡಿಸುವುದು, payment ಮಾಡಿಸಿ ಬಿಡುವುದು. ಆಮೇಲೆ Appendix-Eಯಲ್ಲಿ ತರುವಂಥ ಕೆಲಸವನ್ನು ಮಾಡುತ್ತಾರೆ. ಬಹುಶ: ಇಷ್ಟು ಕೆಟ್ಟ ಪ್ರಮಾಣದಲ್ಲಿ ಹಣಕಾಸು ಇಲಾಖೆಯನ್ನು ಟ್ರೀಟ್ ಮಾಡಿದಂಥ ಯಾವುದಾದರೂ ಸರ್ಕಾರ ಇದ್ದರೆ ಅದು ಈ ಸರ್ಕಾರ ಮಾತ್ರ, ಎಲ್ಲ ನೀತಿ ನಿಯಮಗಳನ್ನು ಗಾಳಿಗೆ ತೂರತಕ್ಕಂಥ ಕೆಲಸ ಮಾಡಿದ್ದು ಈ ಸರ್ಕಾರ ಎನ್ನುವಂಥ ಮಾತನ್ನು ನಾವು ಹೇಳಲೇಬೇಕಾಗುತ್ತದೆ.

ಇನ್ನು ಕೈಗಾರಿಕೆಗಳ ಬಗ್ಗೆ ಒಂದು ವಿಚಾರವನ್ನು ನಾನು ಹೇಳಬೇಕಾಗುತ್ತದೆ. ಕೈಗಾರಿಕೆಯಲ್ಲಿ ಈಗಾಗಲೇ ನಮ್ಮ ಮುಂದೆ ಅನೇಕ ವರದಿಗಳಿವೆ. K.I.A.D.B. ಇರಬಹುದು ಅಥವಾ B.D.A. ಇರಬಹುದು, ಇವು ಈ ರಾಜ್ಯದಲ್ಲಿ ಯಾವ ರೀತಿ ನಡೆದುಕೊಂಡಿವೆ ಎನ್ನುವುದಕ್ಕೆ ನಿಮ್ಮ ಮುಂದೆ ಸಾಕಷ್ಟು ವರದಿಗಳಿವೆ. ಕೈಗಾರಿಕೆಯಲ್ಲಿ ನೀವು ಮಾಡಿದ್ದಾರೂ ಏನು ಎಂದರೆ ಬಹುಶ: ಹಣ ಲೂಟಿಯಾಗ ತಕ್ಕಂಥ ಕೆಲಸವನ್ನು, ರಿಯಲ್ ಎಸ್ಟೇಟ್ ದಂಧೆ ಮಾಡುವಂಥ ಕೆಲಸವನ್ನು ಬಿಟ್ಟರೆ ಬೇರೆ ಏನು ಕೆಲಸವನ್ನೂ ಮಾಡುವುದಕ್ಕೆ ಆಗಲಿಲ್ಲ. K.I.A.D.B.ಯನ್ನು ಒಂದು ಅಸ್ತ್ರವನ್ನಾಗಿ ಉಪಯೋಗಿಸತಕ್ಕಂಥ ಕೆಲಸವನ್ನು ಮಾಡಿ K.I.A.D.B. ಮುಖೇನ ಜಮೀನನ್ನು acquire

ಮಾಡುವುದು, acquisition ಮಾಡುವುದು, de-notification ಮಾಡುವುದು ಆಯಿತು. Acquisition, de-notification ಮಾಡಿ ಸುಮಾರು 16,000 ಎಕರೆ ಜಾಗವನ್ನು de-notification ಮಾಡುವಂಥ ಕೆಲಸವನ್ನು ಮಾಡಿದ್ದೀರಿ ಯಾವ ಪುರುಷಾರ್ಥಕ್ಕೋಸ್ಕರ, ಯಾರಿಗೋಸ್ಕರ ಇದು? ಎಲ್ಲೋ 1,000 ಎಕರೆ ಜಮೀನು ಇತ್ತು ಎಂದರೆ ಅದರಲ್ಲಿ ಮಧ್ಯಭಾಗದಲ್ಲಿ 200 ಎಕರೆ ಜಾಗವನ್ನು ಬಿಟ್ಟುಬಿಡುವುದು. ಅದು ಯಾರ ಜಮೀನು ಎಂದು ಹುಡುಕಿಕೊಂಡು ಹೋದರೆ, ಅದು ರಾಜಕಾರಣದಲ್ಲಿ ಅತ್ಯಂತ ಪ್ರಭಾವಿಗಳು ಯಾರಿದ್ದಾರೆ ಅವರಿಗೆ ಸೇರಿದಂಥ ಜಮೀನು ಅಥವಾ ಅವರ ಮಾಲೀಕತ್ವ ಇರುವುದು ಅಥವಾ ಅವರ ಒಡೆತನ ಇರುವುದು, ಇಲ್ಲವೆಂದರೆ ಅವರ ಸ್ನೇಹಿತರಾಗಿರುವಂಥವರಿಗೆ ಸೇರಿರುವುದು ಆಗಿರುತ್ತದೆ. ಈ ರೀತಿ ಮಾಡಿ, K.I.A.D.B.ಯನ್ನು ಒಂದು ಅಸ್ತ್ರವನ್ನಾಗಿ ಉಪಯೋಗಿಸಿ ರಿಯಲ್ ಎಸ್ಟೇಟ್ ದಂಧೆ ಮಾಡುವುದು ಬಿಟ್ಟರೆ ಬೇರೆ ಏನೂ ಸಾಧನೆ ಮಾಡಲು ನಿಮ್ಮಿಂದ ಆಗಲಿಲ್ಲ. ಉತ್ತರ ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳಿದ್ದು ಅಲ್ಲಿ ಮಾಡಿಲ್ಲ. ಸೌತ್ ಕರ್ನಾಟಕದಲ್ಲಿ ಎಲ್ಲಿ land acquisition ಮಾಡಿದ್ದಾರೆ ಎಂದರೆ ಬೆಂಗಳೂರು ಸುತ್ತಮುತ್ತ ಬಿಟ್ಟರೆ ಇಡೀ ರಾಜ್ಯದಲ್ಲಿ ಬೇರೆಲ್ಲೂ acquisition ನಡೆದಿಲ್ಲ. ಈಗ ಸ್ವಲ್ಪಸ್ವಲ್ಪ ಬೆಳಗಾಂ, ಹುಬ್ಬಳ್ಳಿ, ಧಾರವಾಡಗಳಲ್ಲಿ ಮಾಡುತ್ತಿದ್ದಾರೆ. ಆದರೆ ನಾವು South Karnataka, North Karnataka ಎಂದು ಯೋಜನೆ ಮಾಡಬೇಕಾದರೆ, ಕೈಗಾರಿಕೆಗಳಲ್ಲಿ ಹಿಂದುಳಿದಿರುವಂಥ ಪ್ರದೇಶಗಳಿಗೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸವನ್ನೂ ಮಾಡಿಲ್ಲ. ಅವರು ಮಾಡಿದ್ದು ಬೆಂಗಳೂರು ಸುತ್ತಮುತ್ತ, ತುಮಕೂರು ಸುತ್ತಮುತ್ತ ಮತ್ತು ಕೋಲಾರದ ಭಾಗದಲ್ಲಿ. ಕಾರಣವೇನೆಂದರೆ, ಅದರಲ್ಲಿ de-notificationನಲ್ಲಿ ಇರುವಷ್ಟು ಲಾಭ ಬೇರೆ ಇನ್ನಾವುದರಲ್ಲೂ ಇಲ್ಲ. ಇದು ಇವರ ಕೈಗಾರಿಕಾ ನೀತಿ. ಅಲಾಟ್‌ಮೆಂಟ್ ವಿಚಾರವನ್ನು ಹೇಳುವುದಾದರೆ, ಒಂದೇ ಮನೆಯಲ್ಲಿ ಹತ್ತತ್ತು ಕಂಪನಿಗಳು, ಬೇರೆ ಬೇರೆ ಹೆಸರಿನಲ್ಲಿ ಕಂಪನಿಗಳು ಇದ್ದು ಅವರ ಹೆಸರಿಗೆ ಅಲಾಟ್‌ಮೆಂಟ್ ಆಗಿರುತ್ತದೆ. ಇವತ್ತು ಬೆಂಗಳೂರು ಸುತ್ತಮುತ್ತ I.T. ಹೆಸರಿನಲ್ಲಿ ಆಗಿರುವುದನ್ನು ನೀವು ನೋಡಿ. I.T. ಹೆಸರಿನಲ್ಲಿ ಮಾಡಿರುವಂಥ ಎಲ್ಲಾ acquisitions ಕೂಡ ಕೆಲವೇ ಜನರಿಗೆ ಸೀಮಿತಗೊಳಿಸಲು ಮಾಡಿರತಕ್ಕದ್ದಾಗಿದೆ. ಅದರ ಹಿಂದೆ ಅತ್ಯಂತ ಪ್ರಭಾವಿಗಳ ಕೈವಾಡ ಇರುವುದನ್ನು ನಾವು ನೋಡಬಹುದು. ಹಾಗಾಗಿ,

ಕೈಗಾರಿಕೆಗಳ ಹೆಸರಿನಲ್ಲಿ ಲೂಟಿ ಮಾಡುವಂಥ ಕೆಲಸವನ್ನು ಮಾಡಿದ್ದು ಬಿಟ್ಟರೆ ಇವರು ಬೇರೆ ಇನ್ನೇನನ್ನೂ ಮಾಡಲಿಲ್ಲ.

ಇದೆಲ್ಲಕ್ಕಿಂತ ಹೆಚ್ಚಾಗಿ ಬಿ.ಜೆ.ಪಿ. ಕೊಟ್ಟಂಥ ಮುಖ್ಯಮಂತ್ರಿಗಳು ಯಾವ ರೀತಿಯಾಗಿ ನಡೆದುಕೊಂಡರು ಎನ್ನುವ ವಿಚಾರ ಅಧಿಕಾರವನ್ನು ಬಿಟ್ಟು ಕೊಡತಕ್ಕಂಥದ್ದು ಸ್ವಾಭಾವಿಕ. ರಾಜಕೀಯದಲ್ಲಿ ವ್ಯತ್ಯಾಸಗಳು ಬಂದಾಗ ಅಧಿಕಾರವನ್ನು ಬಿಟ್ಟು ಕೊಡುವಂಥ ಪ್ರಸಂಗ ಬರುತ್ತದೆ. ಆ ಪ್ರಶ್ನೆ ಬೇರೆ. ಆದರೆ ಒಂದು ಹಗರಣದ ಹಿನ್ನೆಲೆಯಲ್ಲಿ, ಭ್ರಷ್ಟಾಚಾರದ ಹಿನ್ನೆಲೆಯಲ್ಲಿ, ಸರ್ಕಾರವೇ ರಚನೆ ಮಾಡಿದಂಥ ಲೋಕಾಯುಕ್ತದವರು ಯಾವುದೋ ಒಂದು ಸಂದರ್ಭದಲ್ಲಿ ರಾಜೀನಾಮೆ ಕೊಟ್ಟಂಥ ಸಂದರ್ಭದಲ್ಲಿ ನೀವು ಇರಲೇಬೇಕು, ನೀವು ಮುಂದುವರೆಯಲೇಬೇಕು ಎಂದು ಅವರ ಮನೆ ಬಾಗಿಲಿಗೆ ಹೋಗಿದ್ದಂಥ ಸರ್ಕಾರ, ಅವರು ಕೊಟ್ಟಂಥ ವರದಿಯ ಹಿನ್ನೆಲೆಯಲ್ಲಿ ರಾಜೀನಾಮೆ ಕೊಡಬೇಕಾಗಿ ಬಂತು. ಒಬ್ಬ ಮುಖ್ಯಮಂತ್ರಿಯಾಗಿರತಕ್ಕಂಥವರು ಜೈಲಿಗೆ ಹೋಗಬೇಕಾದಂಥ ಸಂದರ್ಭ ಬಂತು; ಜೈಲಿಗೆ ಹೋಗಿ ಬಂದರು. 50 ವರ್ಷಗಳಲ್ಲಿ ಮಾಡದೇ ಇರುವಂಥ ಕೆಲಸವನ್ನು ನಾವು ಮಾಡುತ್ತೇವೆ ಎಂದಾಗ ಅದರಲ್ಲಿ ಇದೂ ಒಂದು ಎಂದು ನಾವು ಅಂದುಕೊಳ್ಳಬೇಕು. ಕರ್ನಾಟಕ ರಾಜ್ಯದ ಆಡಳಿತದ ಬಗ್ಗೆ ಜನಗಳಿಗೆ ವಿಶ್ವಾಸವಿತ್ತು, ರಾಷ್ಟ್ರದಲ್ಲಿ ಗೌರವವಿತ್ತು, ಜನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು, ಅಭಿವೃದ್ಧಿಯ ಪರವಾಗಿರುವಂಥ ಜನ, ಸೌಮ್ಯದಿಂದ ವರ್ತನೆ ಮಾಡುವಂಥ ಜನ ಎಂದು, ದೆಹಲಿಯಿಂದ ದೂರವಿದ್ದರೂ ಕೂಡ ಕರ್ನಾಟಕದ ಬಗ್ಗೆ ವಿಶೇಷವಾದಂಥ ಗೌರವವಿತ್ತು. ಇವತ್ತು ನೀವು ದೆಹಲಿಗೆ ಹೋಗಿ ಯಾರನ್ನಾದರೂ ಈ ವಿಚಾರವಾಗಿ ಮಾತನಾಡಿಸಿದರೆ, ಕರ್ನಾಟಕದಲ್ಲಿ ಏನು ನಡೆಯುತ್ತಿದೆ ಎಂದು ಎಲ್ಲರೂ ಕೇಳುತ್ತಾರೆ.

ಗಣಿಗಾರಿಕೆ ವಿಚಾರದಲ್ಲಿ, ಅಕ್ರಮವಾದಂಥ ಗಣಿಗಾರಿಕೆ ನಡೆಯುವಂಥ ಸಂದರ್ಭದಲ್ಲಿ ಈ ಸದನದಲ್ಲಿ ಲೋಕಾಯುಕ್ತ ಕೊಟ್ಟಂಥ ವರದಿಯ ಹಿನ್ನೆಲೆಯಲ್ಲಿ ಈ ಸದನದಲ್ಲಿ ನಾವು ಚರ್ಚೆ ಮಾಡಿದೆವು. ಚರ್ಚೆ ಮಾಡುವಂಥ ಸಂದರ್ಭದಲ್ಲಿ, ಸಹಸ್ರಾರು ಕೋಟಿಗಳಷ್ಟು ಹಣ ಲೂಟಿಯಾಗಿದೆ, ಅದು ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿರುವಂಥ ಹಣ, ಆ ಹಣ ಯಾರದ್ದೋ ಕಿಸೆಗೆ ಹೋಗುತ್ತಿದೆ, ಅದಕ್ಕಾಗಿ ಅವರ ಮೇಲೆ ಎನ್‌ಕ್ವೈರಿ ಮಾಡಬೇಕು ಎಂದು

ಹೇಳಿದರೆ ಅದನ್ನು ಒಪ್ಪಲಿಲ್ಲ. ಲೋಕಾಯುಕ್ತ ಕೊಟ್ಟಂಥ ವರದಿಯನ್ನು ಅನುಷ್ಠಾನ ಮಾಡಲು ಹೋಗಲಿಲ್ಲ. ಲೋಕಾಯುಕ್ತದವರು ತಮ್ಮ ವರದಿಯಲ್ಲಿ ಹೆಸರಿಸಿದಂಥ ಅಧಿಕಾರಿಗಳಿರಬಹುದು ಅಥವಾ ಪ್ರಭಾವಿಗಳು ಯಾರಿದ್ದರು? ಅವರು ತಪ್ಪಿತಸ್ಥರು ಎಂದು ಗುರುತಿಸಿದಾಗಲೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಆ ಹಿನ್ನೆಲೆಯಲ್ಲಿ ಇವತ್ತು ಕಾಂಗ್ರೆಸ್ ಪಕ್ಷ ವಿರೋಧ ಪಕ್ಷವಾಗಿ ಕುಳಿತು, ಆ ಚರ್ಚೆಯ ಸಂದರ್ಭದಲ್ಲಿ ವಿದ್ಯಮಾನಗಳೇನು ನಡೆಯಿತು,? ಮಾತಿನ ಕಾರುಬಾರುಗಳೇನು ನಡೆಯಿತು, ಸದನದ ಒಳಗೆ ಯಾವ ರೀತಿ ಶೌರ್ಯಗಳನ್ನು ಪ್ರದರ್ಶನ ಮಾಡುವುದು ನಡೆಯಿತು, ಅದೆಲ್ಲವನ್ನೂ ನೋಡಿ, ನಾವು ಅನಿವಾರ್ಯವಾಗಿ ಬೀದಿಗಿಳಿದು ಪಾದಯಾತ್ರೆ ಹೋಗತಕ್ಕಂಥ ಸಂದರ್ಭವಾಯಿತು. ಬೆಂಗಳೂರಿನಿಂದ ಬಳ್ಳಾರಿಯವರೆಗೆ 325 ಕಿ.ಮೀ. ಪಾದಯಾತ್ರೆಯನ್ನು ಮಾಡಿ, ಲೋಕಾಯುಕ್ತದವರು ಕೊಟ್ಟಿರುವ ವರದಿಯ ಹಿನ್ನೆಲೆಯಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಏನಾಗಿದೆ ಎಂದು ಇಡೀ ರಾಷ್ಟ್ರಕ್ಕೆ ತೋರಿಸಿಕೊಟ್ಟ ಸಂದರ್ಭದಲ್ಲಿ ಅಂತೂ ಇಂತೂ ಸರ್ವೋಚ್ಚ ನ್ಯಾಯಾಲಯ ಮಧ್ಯ ಪ್ರವೇಶ ಮಾಡಿ ಸಿ.ಬಿ.ಐ. ಎನ್‌ಕ್ವೈರಿಯನ್ನು ಮಾಡತಕ್ಕಂಥದ್ದು ಆಯಿತು. ಸಿ.ಬಿ.ಐ. ಎನ್‌ಕ್ವೈರಿ ಎನ್ನುವುದಕ್ಕಿಂತ ಹೆಚ್ಚಾಗಿ, ಇವತ್ತು ಲೋಕಾಯುಕ್ತರು ಕೊಟ್ಟಂಥ ವರದಿ ಒಂದು ಶಾಸನದ ರೂಪದಲ್ಲಿದೆ. ಸರ್ಕಾರದ ಬೊಕ್ಕಸಕ್ಕೆ ಬರಬೇಕಾದಂಥ ಸುಮಾರು 60 ಸಾವಿರ ಕೋಟಿ ರೂಪಾಯಿ ಬಂದಿಲ್ಲ ಎಂದು ಹೇಳುವಾಗ, ಹಣ ವಸೂಲಿಗೆ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರ ಕಾನೂನು ಮಾಡಿ ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಏನೆಲ್ಲ ಕಾನೂನು ಮಾಡಿದರೂ ಕೂಡ ಆ ಕಾನೂನನ್ನು ಮಾಡುವುದಕ್ಕೆ ಆಗಲಿಲ್ಲ. ಅಕ್ರಮ ಗಣಿಗಾರಿಕೆಯಿಂದ ಬಂದಿರತಕ್ಕಂಥ ಸಂಪತ್ತನ್ನು ಇವತ್ತು ರಾಜ್ಯದ ಸಂಪತ್ತಾಗಿ ಮಾಡುವುದರಲ್ಲಿ ವಿಧಾನಸಭೆಯಲ್ಲಿ ನಾವು ಎಲ್ಲೋ ವಿಫಲರಾಗಿದ್ದೇವೆ ಎನ್ನುವ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಕರ್ಮಕಾಂಡದಲ್ಲಿ ಸಿಕ್ಕಿ ಹಾಕಿಕೊಂಡವರು ಬರೀ ಮುಖ್ಯಮಂತ್ರಿಗಳು ಒಬ್ಬರೇ ಏನು? ಎಷ್ಟು ಜನ ಮಂತ್ರಿಗಳು ಸಿಕ್ಕಿಹಾಕಿಕೊಂಡರು? ನಾನು ಒಂದೊಂದನ್ನೂ ಹೇಳುವುದು ಬೇಡ. ಸುಮಾರು 6–7 ಜನ ಮಂತ್ರಿಗಳು ರಾಜೀನಾಮೆ ಕೊಡುವಂಥ ಪ್ರಸಂಗಗಳು ಬಂತು. ಜನಗಳು ಕೊಟ್ಟಂಥ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಈ ರಾಜ್ಯದಲ್ಲಿ ಬೊಕ್ಕಸಕ್ಕೆ ಬರುವಂಥ ಹಣವನ್ನು ತಪ್ಪಿಸಿ, ಲೂಟಿ ಮಾಡುವಂಥ

ಕೆಲಸವನ್ನು ಮಾಡಿದ ಹಿನ್ನೆಲೆಯಲ್ಲಿ ಬಹಳಷ್ಟು ಜನ ರಾಜೀನಾಮೆ ಕೊಡುವಂಥ ಪ್ರಸಂಗ ಬಂತು. ನಾನು ಅವರ ಹೆಸರುಗಳನ್ನು ಹೇಳುವುದು ಬೇಕಾಗಿಲ್ಲ ಎಂದು ಅನಿಸುತ್ತದೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು, ರಾಮಚಂದ್ರೇಗೌಡರು, ಕೃಷ್ಣಯ್ಯ ಶೆಟ್ಟರು, ಜನಾರ್ಧನ ರೆಡ್ಡಿಯವರು. ಇನ್ನೂ ಎಷ್ಟು ಜನ? ಇದನ್ನೇ ಏನು ಕರ್ನಾಟಕದ ಜನ ನಿರೀಕ್ಷೆ ಮಾಡಿದ್ದು? ಇದಕ್ಕೋಸ್ಕರವೇ ಅವರು ನಿಮಗೆ ಮತವನ್ನು ಕೊಡುವಂಥ ಕೆಲಸವನ್ನು ಮಾಡಿದ್ದು? ಕರ್ನಾಟಕದ ಮಾನ ಮರ್ಯಾದೆ ಏನಾಯಿತು? ಕರ್ನಾಟಕದ ಮಾನ ಮರ್ಯಾದೆ ಎನ್ನುವುದೆಲ್ಲವೂ ಕೂಡ ಹರಾಜಾಗಿದೆ. ಅಭಿವೃದ್ಧಿಯಲ್ಲಿ ಬಹಳ ಸಾಧನೆ ಮಾಡಿದ್ದೇವೆ ಎಂದು ವಿಜೃಂಭಣೆಯಿಂದ ಕೊಚ್ಚಿಕೊಳ್ಳುತ್ತಿದ್ದಾರೆ. ಇವರ net domestic product & current prices ಲೆಕ್ಕ ಹಾಕಿಕೊಂಡರೆ, ಆ ಬಗ್ಗೆ ಸಮೀಕ್ಷೆಯಲ್ಲಿ ಬಂದಿದೆ, 2005–06ರಲ್ಲಿ 17.67 ಇದ್ದರೆ, 2011–12ರಲ್ಲಿ 15.92 ಇದೆ. Per Capital Domestic Product and Current Prices 2005–06ರಲ್ಲಿ 16.27 ಇದ್ದರೆ ಈಗ 14.71 ಇದೆ. ಈ declining trends ನೋಡಿದಾಗ, ಈ indicators ಎಲ್ಲಾ ನೋಡಿದಾಗ ಅಭಿವೃದ್ಧಿ ಎನ್ನತಕ್ಕಂಥದ್ದು ಶೂನ್ಯವಾಗುತ್ತಿದೆ ಎನ್ನತಕ್ಕಂಥದ್ದು ಅರ್ಥವಾಗುತ್ತದೆ. ಯಾವುದೇ ಸರ್ಕಾರ ಆಡಳಿತ ಮಾಡುವಂಥ ಸಂದರ್ಭದಲ್ಲಿ ಆಡಳಿತ ಯಂತ್ರವನ್ನು ನಡೆಸತಕ್ಕ ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ. ಅವರು ಎಷ್ಟರಮಟ್ಟಿಗೆ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿದರು ಎನ್ನತಕ್ಕಂಥದ್ದು ನೋಡಬೇಕು. ಸರ್ಕಾರದ ಬೇರನ್ನು ಭದ್ರ ಮಾಡಿಕೊಳ್ಳುವುದಕ್ಕೋಸ್ಕರ operation Kamala ಆಯಿತು. ಬಹುಶ: operation Kamala ಎನ್ನತಕ್ಕಂಥದ್ದು ಯಾವ ವಿಚಾರದಲ್ಲೂ ಕೂಡ, ಎಲ್ಲೂ ಕೂಡ ಕಂಡಿಲ್ಲದೇ ಇರುವುದು. 5–6 ಜನ ಪಕ್ಷೇತರರನ್ನು ಸೇರಿಸಿಕೊಂಡು ಮಂತ್ರಿಗಳನ್ನಾಗಿ ಮಾಡಿದರು. ಅವರೆಲ್ಲ ರಾಜೀನಾಮೆ ಕೊಟ್ಟು ಹೋದರು. ಬಹಳಷ್ಟು ಬೇರೆ ಬೇರೆ ಪಕ್ಷಗಳವರಿಂದ ರಾಜೀನಾಮೆ ಕೊಡಿಸಿದರು. ರಾಜೀನಾಮೆ ಕೊಡಿಸಿ ಅವರ ಸದಸ್ಯತ್ವ ವಜಾ ಆಗಿದ್ದಂಥದ್ದು ಇದೆ. Supreme Court ನಲ್ಲಿ ಆ ಬಗ್ಗೆ ಕೇಸ್ ಹೋದಂಥ ಸಂದರ್ಭದಲ್ಲಿ ಈ ಪೀಠದ ಮೇಲೆ Supreme Court observation ಮಾಡಿದ್ದಂಥದ್ದು ಇದೆಲ್ಲವನ್ನೂ ನೋಡಿದಾಗ ಬಹುಶ: ಎಷ್ಟರಮಟ್ಟಿಗೆ ರಾಜಕೀಯವಾಗಿ ಸಾಮರಸ್ಯವನ್ನು ಕಾಪಾಡಿಕೊಳ್ಳತಕ್ಕಂಥ ರೀತಿಯಲ್ಲಿ ಸಂಪುಟದ ಸದಸ್ಯರು

ಹೋದರು ಎನ್ನುವುದು ಗೊತ್ತಾಗುತ್ತದೆ. ಎಲ್ಲೋ ಒಂದು ಕಡೆ ಆಡಳಿತ ಎನ್ನತಕ್ಕಂಥದ್ದು ಕೆಟ್ಟು ಹೋಗಿದೆ ಎಂದರೆ ಅದಕ್ಕೆ ಇದೇ ಪ್ರಮುಖ ಕಾರಣ. ಆಡಳಿತ ಚೆನ್ನಾಗಿರಬೇಕು, ಆಡಳಿತದಲ್ಲಿ ಒಳ್ಳೆಯ ಕೆಲಸಗಳಾಗಬೇಕು ಎಂದರೆ ಅಧಿಕಾರಿಗಳ ಸಹಕಾರ ಕೂಡ ಬೇಕಾಗುತ್ತದೆ. ನೀವು ಈ ರೀತಿಯಾಗಿ ಸರ್ಕಾರ ಮಾಡಿದರೆ ನಿಮ್ಮ ಮಾತು ಕೇಳುವವರಾರು? ನಿಮ್ಮ ಮಾತನ್ನು ಯಾರೂ ಕೇಳುತ್ತಿಲ್ಲ. ತಮಾಷೆ ಎಂದರೆ, ನೀವು ಮಂತ್ರಿಗಳ ಹೇಳಿಕೆಗಳನ್ನು ನೋಡಬೇಕು. ಮುಖ್ಯಮಂತ್ರಿಯವರು ಹೇಳಿದ ಮಾತನ್ನು ಮಂತ್ರಿ ಧಿಕ್ಕರಿಸುತ್ತಾರೆ. ಒಬ್ಬ ಮಂತ್ರಿ ಹೇಳಿದ ಮಾತನ್ನು ಇನ್ನೊಬ್ಬರು ಧಿಕ್ಕರಿಸುತ್ತಾರೆ. ಇದನ್ನು ನೋಡಿದರೆ ಏನಾದರೊಂದು collective responsibility ಎನ್ನುವುದು ಇದೆಯೇ? ನಮಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ಎಂದರೆ, ಸರ್ಕಾರ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿ ಕೆಲಸವನ್ನು ಮಾಡಬೇಕಾದಾಗ, ಆಡಳಿತ ಯಂತ್ರವನ್ನು ನಡೆಸಬೇಕಾದಾಗ ಎಲ್ಲೋ ಒಂದು ಕಡೆಗೆ ಸಾಮರಸ್ಯವನ್ನು ಕಾಪಾಡಿಕೊಂಡು ಹೋಗಬೇಕಾಗುತ್ತದೆ. ಆ ಸಾಮರಸ್ಯ ಎನ್ನುವುದು ಇಲ್ಲದೇ ಇರುವುದು ಕಾಣುತ್ತದೆ. ಮುಖ್ಯಮಂತ್ರಿಯವರ ವಿರುದ್ಧವೇ ಹೇಳಿಕೆ ಕೊಡುವುದು. ಇದು ಎಷ್ಟು ನಡೆದಿಲ್ಲ? ಅಂದರೆ ಇದು ಎಲ್ಲಿಯವರೆಗೆ ಹೋಯಿತೆಂದರೆ, Republic of Bellary ನೆನೆಸಿಕೊಂಡುಬಿಟ್ಟರೆ ಅಲ್ಲಿ ಯಾವ ಕಾನೂನು ಕೂಡ ಇರಲಿಲ್ಲ. ಯಾವ ಕಾನೂನುಗಳೂ ನಡೆಯಲಿಲ್ಲ. ಮುಖ್ಯಮಂತ್ರಿಯವರು ಹೋದರೂ ಮುಖ್ಯಮಂತ್ರಿಯವರಿಗೆ ಗೌರವವಿಲ್ಲದ ರೀತಿಯಲ್ಲಿ ಆಯಿತು. ಇವತ್ತು ಅವರೆಲ್ಲಾ ಎಲ್ಲಿದ್ದಾರೆ? ಇದನ್ನು ಜನರು ನಿರೀಕ್ಷೆ ಮಾಡಿದ್ದರೆ? ಇವತ್ತು ನೀವು ಕೊಟ್ಟಂಥ ಆಡಳಿತ ಈ ಮಟ್ಟಕ್ಕಿದೆ. ಸಂವಿಧಾನಕ್ಕೇ ಅಪಚಾರ ಮಾಡತಕ್ಕ ರೀತಿಯಲ್ಲಿ ನಿಮ್ಮ ನಡವಳಿಕೆಗಳು ಇತ್ತು. ನಿಮ್ಮಲ್ಲಿ ಸಾಮರಸ್ಯ ಎನ್ನುವ ಪ್ರಶ್ನೆಯೇ ಇರಲಿಲ್ಲ. ನಿಮಗೆ ಏನೇ ಮಾಡಬೇಕಾದರೂ ಕೂಡ ರಾಜಕೀಯ ಒತ್ತಡಗಳು ಯಾವ ರೀತಿಯಾಗಿ ಇರುತ್ತಿತ್ತು? ನೀವೇನೂ ಮಾಡಬೇಕಾಗಿಲ್ಲ. ಮಂತ್ರಿಗಳಾಗಬೇಕಾದವರು ಏನಾದರೂ ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ವರ್ಗಗಳಲ್ಲಿ, ಎಲ್ಲಾ ಜಾತಿಗಳಿಗೆ ಪ್ರತಿನಿಧ್ಯ ಸಿಗುವ ರೀತಿಯಲ್ಲಿ ಮಂತ್ರಿಯಾಗಿ ಬಂದರೆ? ಬರಲಿಲ್ಲ. ಯಾವ್ಯಾವ ಒತ್ತಡ ತಂತ್ರಗಳನ್ನು ಮಾಡಿದರೆ ಮಂತ್ರಿಗಳಾಗಬಹುದೆನ್ನುವುದಕ್ಕೆ ಮಾಡಿ ತೋರಿಸಿದವರು ಎಂದರೆ ಅವರು Excise Minister ರೇಣುಕಾಚಾರ್ಯರವರು. ಹೇಗೆ? ಅವರು ಯಾವ ರೀತಿಯಾಗಿ ಮಂತ್ರಿಯಾದರು? ಏನು ಹೇಳಿಕೆ

ಕೊಟ್ಟರು? ಅವರ ಹಿನ್ನೆಲೆಗಳೇನು? ಇದನ್ನೆಲ್ಲಾ ನೋಡಿದರೆ ನಾಚಿಕೆಯಾಗುತ್ತದೆ. ರಾಜೀನಾಮೆ ಕೊಟ್ಟಂಥ ಬೇರೆ ಬೇರೆ ಮಂತ್ರಿಗಳ ಪ್ರಶ್ನೆ ಕೂಡ ಇದೆ. ಅದು ಹಾಲಪ್ಪನವರು ಇರಬಹುದು, ಇನ್ನೊಬ್ಬರು ಇರಬಹುದು. ಹೇಳುವುದಕ್ಕೆ ಬೇಸರವಾಗುತ್ತದೆ. ಇದರ ಜೊತೆಗೆ, ಯಡಿಯೂರಪ್ಪನವರು ನಾನೊಬ್ಬ ರೈತ ನಾಯಕ ಎಂದರು. ನಿಜ. ನನಗೂ ಸ್ವಲ್ಪ ಗೊತ್ತು. ರೈತರ ಹಿನ್ನೆಲೆಯಿಂದ ಬಂದದ್ದರ ಜೊತೆಗೆ ರೈತರ ಪರವಾದ ವಿಚಾರಗಳನ್ನೇ ತನ್ನದಾಗಿ ಮಾಡಿಸಿಕೊಂಡು ಪಕ್ಷವನ್ನು ಕಟ್ಟತಕ್ಕಂಥ ಕೆಲಸ ಮಾಡಿದರು. ಆದರೆ, ಅವರು ಮುಖ್ಯಮಂತ್ರಿಯಾದ ಮೇಲೆ ರೈತರ ಪರ, ರೈತರಿಗೋಸ್ಕರ ನಾನಿರುವುದು ಎನ್ನುವಂಥ ರೀತಿಯಲ್ಲಿ, ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿ ಅಧಿಕಾರದ ಗದ್ದುಗೆಯನ್ನು ಏರಿದವರು ಕೆಲವೇ ದಿವಸಗಳಲ್ಲಿ ಹಾವೇರಿಯಲ್ಲಿ ಆದ ಗೋಲಿಬಾರ್ ಪ್ರಕರಣದಲ್ಲಿ ರೈತರ ಮೇಲೆ ಮಾಡಿದ ಪ್ರಯೋಗ ನೋಡಿದರೆ ಎಷ್ಟರಮಟ್ಟಿಗೆ ನೀವು ರೈತರ ನಾಯಕರು? ಎನ್ನುವುದು ಒಂದು ಕಡೆಯಾದರೆ ಇನ್ನೊಂದು ಕಡೆ ಹೊಸ ಪ್ರಯೋಗವನ್ನು ಮಾಡಿದರು. ಅದು ಕೃಷಿ ಬಜೆಟ್. ಕೃಷಿ ಬಜೆಟ್ ಕತೆ ಹೇಗೆಂದರೆ, ಪಾಪ, ಎಲ್ಲೆಲ್ಲಿಯೋ ಇದ್ದ ಆ ರೈತರನ್ನೆಲ್ಲಾ ಕರೆಸಿ ಅವರ ತಲೆ ಮೇಲೆ ಒಂದು ಬಜೆಟ್ ಪುಸ್ತಕವನ್ನು ಹೊರೆಸಿಕೊಂಡು, ಕಾಲ್ನಡಿಗೆಯಲ್ಲಿ ವಿಧಾನ ಸೌಧಕ್ಕೆ ಬಂದರು, ಬಜೆಟ್ ಮಂಡನೆ ಮಾಡಿದರು. ಇವರೇನೋ ಮಂತ್ರ ಮಾಡಿದ್ದಾರೆ ಎಂದು ನೋಡಿದರೆ, ತಮಾಷೆ ಎಂದರೆ ಕೃಷಿಗೆ ಪೂರಕವಾದ ಎಲ್ಲ ಇಲ್ಲಾಖೆಗಳನ್ನೂ ಒಂದು ಕಡೆ ಸೇರಿಸಿ ಒಂದು ಪುಸ್ತಕದಲ್ಲಿ ಪ್ರಿಂಟ್ ಮಾಡಿಸಿದರು. ಒಂದು separate budget ಮಾಡಬೇಕು ಎಂದರೆ ಅದು ಅಷ್ಟು ಸುಲಭವಲ್ಲ. ಕೇಂದ್ರ ಸರ್ಕಾರದಲ್ಲಿ Railway Budget ಅನ್ನು ಬೇರೆ ಮಾಡಬೇಕಾದಾಗ ಬಹಳಷ್ಟು ರೀತಿಯಲ್ಲಿ ಕಮಿಟಿಗಳನ್ನು ಮಾಡಿ, ತೀರ್ಮಾನಗಳನ್ನು ಮಾಡಿ Head of Accounts ಅನ್ನೇ change ಮಾಡತಕ್ಕಂಥ ಕೆಲಸವನ್ನು ಮಾಡಿದರು. ಹಾಗಾಗಿ, Railway Budget ಮತ್ತು ಬೇರೆ ಬಜೆಟ್ ಸೆಪರೇಟ್ ಆಗಿ ಆಗುತ್ತಿದೆ. ಆದರೆ, ಇಲ್ಲಿ ಕೃಷಿ ಬಜೆಟ್ ಮಂಡನೆ ಮಾಡಬಾರದು ಎಂದಲ್ಲ. ಮಾಡಬೇಕೆನ್ನುವ ಇಚ್ಛೆ ಇದ್ದರೆ ಅದಕ್ಕೊಂದು ಕ್ರಮವಿತ್ತು, ರೀತಿ ಇತ್ತು, ಆ ಪ್ರಕಾರ ಮಾಡಿದ್ದರೆ ಪ್ರಯೋಜನವಾಗುತ್ತಿತ್ತು. ಕೃಷಿಗೆ ಸಂಬಂಧಪಟ್ಟಂಥ ಎಲ್ಲ ಇಲಾಖೆಗಳೆಲ್ಲವನ್ನೂ ಒಂದು ಕಡೆ ಪ್ರಿಂಟ್ ಮಾಡಿಸಿ ನಾನು ಕೃಷಿ ಬಜೆಟ್ ಮಂಡನೆ ಮಾಡಿದ್ದೇನೆ,

ಇದಕ್ಕೆ ಸಾವಿರಾರು ಕೋಟಿ ರೂಪಾಯಿ ಕೊಟ್ಟಿದ್ದೇನೆಂದರೆ improvement ಏನಾಯಿತು? ಎಲ್ಲೋ ಒಂದು ಕಡೆಗೆ ರೈತರನ್ನು ದಿಕ್ಕೆಡಿಸುವ ಕೆಲಸ ಮಾಡಿದರೇ ಹೊರತು ರೈತರಿಗೆ ಯಾವುದೇ ಸಹಾಯವಾಗಲಿಲ್ಲ. ಕಳೆದ 5 ವರ್ಷಗಳಲ್ಲಿ ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೂ ಅದನ್ನೇ. ನೀವು ನಿಮ್ಮ ಪ್ರಣಾಳಿಕೆಯಲ್ಲೂ ಬೇಕಾದಷ್ಟು ಹೇಳಿದ್ದೀರಿ. ಎಲ್ಲವೂ ಕೂಡ ರೈತರಿಗೆ ನ್ಯಾಯಯುತವಾಗಿರುವ ರೀತಿಯಲ್ಲಿ remunerative prices ಕೊಡಬೇಕಾದುದು ನಿಮ್ಮ ಜವಾಬ್ದಾರಿ. Remunerative price ಅನ್ನು ಕೊಡುವ ಪ್ರಯತ್ನ ಎಲ್ಲಿಯಾದರೂ ಆಯಿತೆ? ಎಲ್ಲೋ ಒಂದು ಕಡೆಗೆ ನಿಮ್ಮ ಆಡಳಿತ ಎನ್ನುವುದು ಸರಿಯಾಗಿ ಇದ್ದಿದ್ದರೆ ರೈತರಿಗೆ ನ್ಯಾಯಯುತವಾಗಿರುವ remunerative price ಅನ್ನು ಕೊಡಬಹುದಿತ್ತು. ನಿಮ್ಮ ನೀತಿಗಳು ಸ್ಪಷ್ಟವಿದ್ದಿದ್ದರೆ ಮಾಡಬಹುದಿತ್ತು. ನಿಮ್ಮ ನೀತಿಗಳು ಸ್ಪಷ್ಟ ಇಲ್ಲದ ಕಾರಣ ನೀವು ಏನನ್ನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು ರೈತ ಅತ್ಯಂತ ಕಂಗಾಲಾಗಿದ್ದಾನೆ, ಸಾಲದ ಶೂಲಕ್ಕೆ ಸಿಕ್ಕಿದ್ದಾನೆ. ಅತ್ಯಂತ ಹೆಚ್ಚಿನ ರೀತಿಯಲ್ಲಿ ಆತ್ಮಹತ್ಯೆಗೆ ಗುರಿಯಾಗುತ್ತಿದ್ದಾನೆ. ಆತ್ಮಹತ್ಯೆಗೆ ಕಾರಣವೇನೆಂದರೆ, ಬೆಲೆ ಕುಸಿದಿರುವುದೇ ಪ್ರಮುಖ ಕಾರಣ. ಇದರ ಜೊತೆಗೆ, ಸಾವಯವ ಗೊಬ್ಬರವನ್ನು ಪ್ರೋತ್ಸಾಹ ಮಾಡುವುದಕ್ಕೋಸ್ಕರ ಕಮಿಟಿಗಳನ್ನು ಮಾಡಿದ್ದೀರಿ. ಕಮಿಟಿಗಳನ್ನು ಮಾಡಿ ultimately ಮಾಡಿದ್ದೇನೆಂದರೆ, ಒಂದು ಪಕ್ಷವನ್ನು ಬೆಳೆಸುವ ಕೆಲಸ ಮಾಡಿದ್ದು ಬಿಟ್ಟರೆ ಗೊಬ್ಬರವನ್ನು ಪ್ರೋತ್ಸಾಹ ಮಾಡುವ ಕೆಲಸ ಆಗಲಿಲ್ಲ. ಅದಕ್ಕೆ ನೀವು ವರ್ಷಗಟ್ಟಲೆ ಕೊಟ್ಟಂಥ ಕೋಟ್ಯಾಂತರ ರೂಪಾಯಿ ಹಣ ಇವತ್ತು ಲೆಕ್ಕವಿಲ್ಲದೆ ಹೊರಟುಹೋಯಿತು, ದುರುಪಯೋಗವಾಯಿತು. ಆ ಹಣಕ್ಕೆ ಲೆಕ್ಕ ಇಲ್ಲ, ಬುಕ್ ಇಲ್ಲದ ರೀತಿಯಲ್ಲಿ ಆಯಿತು. ಇವರು ಹೇಳಿದ್ದಕ್ಕೂ ಅವರು ಮಾಡಿದ್ದಕ್ಕೂ ಒಂದಕ್ಕೊಂದು ಸಂಬಂಧವಿಲ್ಲದೇ ಇರುವ ರೀತಿಯಲ್ಲಿ ಭಾಷಣ ಮಾಡಿಸಿ ಇವತ್ತು ಜನರನ್ನು ತಪ್ಪು ದಾರಿಗೆಳೆಯುವ ಕೆಲಸವನ್ನು ಮಾಡಿದ್ದೀರಿ. ಬಹಳಷ್ಟು ನಿರೀಕ್ಷೆ ಇಟ್ಟ ರೈತರಿಗೆ ನೀವು ಸಾಲ ಮನ್ನಾ ಮಾಡಿದ್ದೀರಿ. 25 ಸಾವಿರ ರೂಪಾಯಿಗಳವರೆಗೂ ಕೂಡ ಸುಮಾರು 15 ಲಕ್ಷ ಜನರ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿ, ಕೊನೆಗೆ ಆದೇಶ ಹೊರಡಿಸಬೇಕಾದಾಗ ಇದನ್ನು ಯಾವಾಗ ಕಟ್ಟಬೇಕೆಂದರೆ ದಿ:30.6.2013ರಂದು ಎಂದು ಹೇಳಿದಿರಿ ಆ ಸಮಯಕ್ಕೆ ಗ್ಯಾರಂಟಿಯಾಗಿ ಸರ್ಕಾರ ಇರುವುದಿಲ್ಲ. ಮುಂದೆ ಬಂದವರು ಹಣ

ಕೊಟ್ಟುಕೊಳ್ಳಲಿ ಎಂದು 3600 ಕೋಟಿ ರೂಪಾಯಿಗಳನ್ನು ನಾವು ಮನ್ನಾ ಮಾಡಿದ್ದೇವೆ ಎಂದು ರೈತರ ವಿಶ್ವಾಸ ಗಳಿಸುವ ಕೆಲಸ ಮಾಡಿದಿರಿ. Actual ಆಗಿ ನಿಮ್ಮಲ್ಲಿ ಪ್ರಾಮಾಣಿಕತೆ ಇದ್ದರೆ, ಏನಾದರೂ ಮಾಡಿ ರೈತರ ಸಾಲ ಮನ್ನಾ ಮಾಡಿ ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡಬೇಕಾದಾಗ ಬಜೆಟ್ ಮೂಲದಿಂದ ನೀವೇನಾದರೂ ಹಣ ಕೊಟ್ಟಿದ್ದರೆ ನಾನು ಈ ಸರ್ಕಾರವನ್ನು ಮೆಚ್ಚಬಹುದಿತ್ತು. ಆ ಕೆಲಸವನ್ನು ಮಾಡದೇ ಮುಂದೆ ಬರುವ ಸರ್ಕಾರಗಳ ತಲೆ ಮೇಲೆ ಹಾಕಿ claim, bill ಗಳನ್ನು ಆ ಕಾಲದಲ್ಲಿ ಕೊಡಿ, ಜೂನ್ ನಂತರದಲ್ಲಿ ಬರುವ ಸರ್ಕಾರದಲ್ಲಿ ಕೊಡಿ ಎಂದು ಸಹಕಾರ ಸಂಸ್ಥೆಗಳು ಯಾವುದಕ್ಕೂ ನೀವು ಹಣ ಕೊಡದ ರೀತಿಯಲ್ಲಿ, ಪ್ರೋತ್ಸಾಹ ಕೊಡದ ರೀತಿಯಲ್ಲಿ ಮಾಡಿದಿರಿ. ಆದರೆ, ಎಲ್ಲೋ ಒಂದು ಕಡೆ ಇದರಿಂದ ನಿಮ್ಮ ಎಲ್ಲ ಸಹಕಾರ ಸಂಸ್ಥೆಗಳು ಕೂಡ ಮುಚ್ಚಿ ಹೋಗುವ ರೀತಿಯಲ್ಲಿ ಬಂದಿವೆ. ಸಹಕಾರ ಸಂಸ್ಥೆಗಳು ವೈದ್ಯನಾಥನ್ ವರದಿ ಏನಾದರೂ ಇಲ್ಲದೇ ಇದ್ದು ನಿಮಗೇನಾದರೂ ಪ್ರೋತ್ಸಾಹವಾಗುವಂತೆ ಹಣ ಬರದೇ ಇದ್ದರೆ ಇವತ್ತು ಅವು ಸಂಪೂರ್ಣವಾಗಿ ಮುಚ್ಚಿಹೋಗುತ್ತಿದ್ದವು. ಅವು ಇವತ್ತು ಮುಚ್ಚಿಹೋಗುವುದಕ್ಕೆ ಸರ್ಕಾರಗಳು ಮಾಡುತ್ತಿರುವಂಥ ನೀತಿ ಕಾರಣ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಮ್ಮ ಮಾತಿಗೂ, ಕೃತಿಗೂ ಸಂಬಂಧ ಇಲ್ಲದ ರೀತಿಯಲ್ಲಿ ಕರ್ನಾಟಕದಲ್ಲಿ ಅಲ್ಲ ಇಡೀ ದೇಶದಲ್ಲಿ ಅಪಖ್ಯಾತಿಯನ್ನು ಹೊಂದಿರತಕ್ಕಂಥ ಆಡಳಿತವನ್ನು ಕೊಟ್ಟು, ಜನಗಳಿಗೆ ಒಂದು ರೀತಿಯಲ್ಲಿ ಭ್ರಮನಿರಸನ ಆಗುವ ರೀತಿಯಲ್ಲಿ ಮಾಡಿದ್ದೀರಿ. ಬಹುಶ: ನೀವು ಇನ್ನು ಮುಂದೆ ಯಾವುದೇ ಸಂದರ್ಭದಲ್ಲೂ ಕೂಡ ಇದು ಮೊದಲು, ಇದು ಕೊನೆ ಎನ್ನುವ ರೀತಿಯಲ್ಲಿ ಬಿಜೆಪಿಯ ಆಡಳಿತ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಗೋಪಾಲ್ ಭಂಡಾರಿ ಹೆಚ್.(ಕಾರ್ಕಳ):- ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯಪಾಲರ ಭಾಷಣವನ್ನು ಓದಿದಾಗ ಬಹಳ ಸಮೃದ್ಧಿ ಇದ್ದಹಾಗೆ ಪುಸ್ತಕದಲ್ಲಿ ಕಾಣಿಸುತ್ತದೆ. ಆದರೆ, ನಮ್ಮ ಕ್ಷೇತ್ರದಲ್ಲಿ ನೋಡಿದಾಗ ಯಾವುದೇ ರೀತಿಯ ಕಾಮಗಾರಿಗಳನ್ನು ಈ ಸರ್ಕಾರದ ಅವಧಿಯಲ್ಲಿ ಮಾಡಲಿಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಬಹಳಷ್ಟು ದೊಡ್ಡ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾವು ಕೆಲವು ಕಾಯಿದೆಗಳನ್ನು

ಮಾಡಿದ್ದೇವೆಂದು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಭೂ ಕಬಳಿಕೆ ನಿಷೇಧ ಎನ್ನುವ ಕಾಯಿದೆ ಮಾಡಿದ್ದೇವೆಂದು ಪ್ರಸ್ತಾಪ ಮಾಡಿದ್ದಾರೆ. ನಾನು ಇಡೀ ರಾಜ್ಯದ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿಲ್ಲ. ಭೂ ಕಬಳಿಕೆ ಬೆಂಗಳೂರು ನಗರದಲ್ಲಿ, ಆಯಾ ನಗರ, ಪ್ರದೇಶಗಳಲ್ಲಿ ಆಗಿರಬಹುದು. ಆದರೆ, ನಮ್ಮಂಥ ಗ್ರಾಮೀಣ ಪ್ರದೇಶಗಳಲ್ಲಿ, ಮಲೆನಾಡಿನಲ್ಲಿ ಈ ಸರ್ಕಾರ ಬಂದ ನಂತರ ನಿವೇಶನಗಳ ವಿತರಣೆಯೇ ಆಗಿಲ್ಲ. ನಿವೇಶನಗಳನ್ನು ಕೊಡತಕ್ಕ ಪ್ರಕ್ರಿಯೆಯೇ ಆಗಿಲ್ಲ. ಎಲ್ಲೂ ಕೂಡ ಆಗಿಲ್ಲ. ನಮ್ಮ ಜಿಲ್ಲೆಯಲ್ಲಿ ಆಗಿಯೇ ಇಲ್ಲ. ನನ್ನ ತಾಲ್ಲೂಕಿನಲ್ಲಿ ಕೇವಲ 100–150 ನಿವೇಶನಗಳನ್ನು ಕಳೆದ 3–4 ವರ್ಷಗಳಲ್ಲಿ ಕೊಟ್ಟಿದ್ದಾರೆ. ಅದು ಬಿಟ್ಟರೆ, ನಮ್ಮ ಜಿಲ್ಲೆಯಲ್ಲಿ ಬೇರೆಲ್ಲೂ ಕೊಟ್ಟಿಲ್ಲ. ಆದರೆ, ಕೆಲವು ಭೂರಹಿತರು ಇದ್ದಾರೆ, ಬಹಳ ಬಡವರಿದ್ದಾರೆ, ಕಷ್ಟದಲ್ಲಿದ್ದಾರೆ ಅವರು ಎಲ್ಲಿ ಕುಳಿತುಕೊಳ್ಳಬೇಕೆಂದು ಗೊತ್ತಾಗುವುದಿಲ್ಲ. ಸರ್ಕಾರ ಜಾಗದಲ್ಲಿ ಟೆಂಟ್ ಹಾಕಿ ಕುಳಿತುಕೊಂಡಿದ್ದಾರೆ. ಕೆಲವರು ಸಣ್ಣ ಸಣ್ಣ ಜೋಪಡಿಗಳನ್ನು ಹಾಕಿಕೊಂಡಿದ್ದಾರೆ. ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಆದರೆ, ಭೂ ಕಬಳಿಕೆ ನಿಷೇಧ ಮಾಡಿದ ನಂತರ ಅವರಿಗೆಲ್ಲ ಅತಂತ್ರದ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇನಾಗುತ್ತಿದೆ ಎಂದರೆ, ಈ ಕಾಯಿದೆಯಲ್ಲಿ ಏನು ಹೇಳಿದ್ದಾರೆಂದರೆ, ಯಾರು ಸರ್ಕಾರಿ ಜಾಗವನ್ನು ಆಕ್ರಮಣ ಮಾಡಿ ಮನೆ ಕಟ್ಟಿ ಕುಳಿತುಕೊಂಡಿದ್ದಾರೆ, ಅದನ್ನು ತಕ್ಷಣ ಇಲಾಖಾಧಿಕಾರಿಗಳು ತೆಗೆದು ಹಾಕಬೇಕು, ಇಲ್ಲದೇ ಇದ್ದರೆ ಇಲಾಖಾಧಿಕಾರಿಗಳಿಗೆ 3 ವರ್ಷ ಶಿಕ್ಷೆ ಮತ್ತು ಯಾರು ಆಕ್ರಮಣ ಮಾಡಿದ್ದಾನೆ ಅವನಿಗೂ 3 ವರ್ಷ ಶಿಕ್ಷೆ ಎಂದು ಇದೆ. ಎಕರೆಗಟ್ಟಲೆ ಆಕ್ರಮಣ ಮಾಡುವವರಿಗೆ, ಉದ್ದೇಶಪೂರ್ವಕವಾಗಿ ಆಕ್ರಮಣ ಮಾಡುವವರಿಗೆ ಈ ಕಾಯಿದೆ ಮಾಡಿದ್ದರೆ ಚಿಂತೆ ಇಲ್ಲ. ಇದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಮಾಡಿದ ಹಾಗೆ ಆಗುತ್ತದೆ. ಒಂದು ತುಂಡು ಜಾಗವಿಲ್ಲದೇ ಇರತಕ್ಕಂಥ ಒಂದು ಸೆಂಟ್ ಜಾಗ ತನ್ನ ಹೆಸರಿನಲ್ಲಿ ಇಲ್ಲದೇ ಇರತಕ್ಕಂಥ ಬಡವರು, ನಿರ್ಗತಿಕರು ಸರಕಾರಿ ಜಾಗದಲ್ಲಿ ಮನೆ ಕಟ್ಟಿ ಕುಳಿತರೆ ಅವರನ್ನೆಲ್ಲಾ ಎತ್ತಿ ಹೊರಗೆ ಬಿಸಾಡಿರತಕ್ಕಂಥ ಪ್ರಕ್ರಿಯೆ ನಡೆಯುತ್ತಿದೆ. ಎಕರೆ ಗಟ್ಟಲೆ ಆಕ್ರಮಣ ಮಾಡಿದವರಿಗೆ ರಾಜ ಮಾರ್ಯದೆ ಸಿಗುತ್ತಿದೆ, ಅವರಿಗೆ ರಾಜಾಶ್ರಯ ಸಿಕ್ಕಿದ ಹಾಗೆ ಆಗುತ್ತಿದೆ. ನಮ್ಮಲ್ಲಿ ಎಲ್ಲಾ ಕಿತ್ತು ಬಿಸಾಡತಕ್ಕಂಥ ಪ್ರಕ್ರಿಯೆ ಆಗಿದೆ. ನನ್ನ ಮತ ಕ್ಷೇತ್ರದಲ್ಲಿ ಒಬ್ಬ ಗರ್ಭಿಣಿ ಸ್ತ್ರೀಯನ್ನು ಅವರ ಮನೆಯಿಂದ ಹೊರಗೆ ಹಾಕಿ

ರಸ್ತೆಯಲ್ಲಿ ಬಿಸಿಲಿನಲ್ಲಿ ಬೆಳಿಗ್ಗೆಯಿಂದ ರಾತ್ರಿ ತನಕ ಕುಳಿತುಕೊಂಡಿರತಕ್ಕಂಥ ಪ್ರಕ್ರಿಯೆ ನಡೆದಿದೆ. ಇದರಿಂದ ಬಹುಶ: ಏನು ಲಾಭವಾಗಿದೆ ಎನ್ನುವ ಒಂದು ಪ್ರಶ್ನೆ. ಜೊತೆಗೆ ಸರಕಾರಿ ಜಾಗದಲ್ಲಿ ಮನೆ ಕಟ್ಟಿ ಕುಳಿತಿರುವ ನಿರ್ಗತಿಕರು, ಭೂ ರಹಿತರು, ನಿವೇಶನ ರಹಿತರು ಯಾರಿದ್ದಾರೆ? ಅವರ ಮನೆಗೆ ಒಂದು ನಂಬರ್ ಕೊಟ್ಟು ರೇಷನ್ ಕಾರ್ಡ್ ಕೊಡಲಿಕ್ಕಾಗುತ್ತಿಲ್ಲ. ತಮಗೆ ಗೊತ್ತಿದೆ ಮೂರು ವರ್ಷದ ಹಿಂದೆ ಇದು ಆಗುತ್ತಿತ್ತು. ನಮ್ಮ ಜಿಲ್ಲೆಯಲ್ಲೂ ಕೂಡ ಅದನ್ನು ಕೊಡಲಿಕ್ಕಾಗುತ್ತಿತ್ತು. ವಿದ್ಯುತ್ ಸಂಪರ್ಕ ಕೊಡಬೇಕಾದರೆ, ಭಾಗ್ಯ ಜ್ಯೋತಿ ಕನೆಕ್ಷನ್ ಕೊಡಬೇಕಾದರೆ ನಿವೇಶನದ ಟೈಟಲ್ ಬೇಕಾಗಿಲ್ಲ. ಪಂಚಾಯಿತಿಯಿಂದ ಒಂದು NOC ಕೊಟ್ಟರೆ ಆಗುತ್ತಿತ್ತು. ಈಗ ಯಾವ ಗ್ರಾಮ ಪಂಚಾಯಿತಿಗಳಲ್ಲೂ NOC ಕೊಡುತ್ತಿಲ್ಲ, ಈ ಕಾಯಿದೆಯ ಫಲ. ಎಕರೆಗಟ್ಟಲೆ ಉದ್ದೇಶಪೂರ್ವಕವಾಗಿ ಭೂಮಿಯನ್ನು ಕಬಳಿಸುವವರ ಮೇಲೆ ಗದಾ ಪ್ರಹಾರ ಈ ಸರ್ಕಾರ ಮಾಡಲಿ, ಅದಕ್ಕೆ ನನ್ನ ಆಕ್ಷೇಪವಿಲ್ಲ. ಹಿಂದೆ ಇದ್ದಂಥ ಕಾಯಿದೆಯಲ್ಲಿಯೂ ಇತ್ತು. ಈಗ ಬರೀ ಬಡವರ, ಅಸಹಾಯಕರ ಮೇಲೆ ಗದಾ ಪ್ರಹಾರ ಮಾಡತಕ್ಕಂಥ ಒಂದು ಕೆಲಸ ಈ ಸರ್ಕಾರದಿಂದ ಆಗುತ್ತಿರುವುದು ಬಿಟ್ಟರೆ ಒಂದು ಮನೆ ನಂಬರ್ ಸಿಗುತ್ತಿಲ್ಲ, ಅವರಿಗೆ ಡೋರ್ ನಂಬರ್ ಇಲ್ಲ, ಅವರಿಗೆ NOC ಇಲ್ಲ. ವಿದ್ಯುತ್ ಇಲ್ಲ, ಶಾಲೆಗೆ ಹೋಗುವ ಮಕ್ಕಳಿಗೆ ಬೆಳಕು ಕೊಡದೇ ಆಗತಕ್ಕಂಥ ಒಂದು ಅತಂತ್ರ ಪರಿಸ್ಥಿತಿಯಾಗಿದೆ. ಯಾವ ಗ್ರಾಮ ಪಂಚಾಯಿತಿಯ PDOಗಳ ಹತ್ತಿರ ನಾವು ಹೋಗಿ ಕೇಳಿದರೆ ಅವರು NOC ಕೊಡಲಿಕ್ಕೆ ಹೆದರುತ್ತಾರೆ. ಏಕೆಂದು ಕೇಳಿದರೆ, ನಮಗೆ ಮೂರು ವರ್ಷ ಜೈಲಿಗೆ ಹಾಕುತ್ತಾರೆಂದು ಅವರು ಹೇಳುತ್ತಾರೆ. ಅವರಿಗೂ ಮೂರು ವರ್ಷ ಜೈಲು, ಇವರಿಗೂ ಮೂರು ವರ್ಷ ಜೈಲು, ಈ ರಾಜ್ಯದಲ್ಲಿ ಉದ್ದೇಶಪೂರ್ವಕವಾಗಿ ಎಕರೆಗಟ್ಟಲೆ ಭೂಮಿಯನ್ನು ನಗರ ಪ್ರದೇಶದಲ್ಲಿ ಉದ್ದೇಶಪೂರ್ವಕವಾಗಿ ಆಕ್ರಮಣ ಮಾಡಿದಂಥವರನ್ನು ಯಾರನ್ನೂ ಕೂಡ ಜೈಲಿಗೆ ಹಾಕಲಿಲ್ಲ, ಯಾರನ್ನೂ ಬೀದಿಗೆ ಹಾಕಲಿಲ್ಲ. ನನ್ನ ತಾಲ್ಲೂಕಿನ ಹೊಸಮಾರು ಗ್ರಾಮದಲ್ಲಿ ಒಬ್ಬ ಗರ್ಭಿಣಿ ಸ್ತ್ರೀಯನ್ನು ರಸ್ತೆಯಲ್ಲಿಯೇ ರಾತ್ರಿ 9 ಗಂಟೆಯ ತನಕ ಕೂರಿಸಿದರು. ಇದು ಈ ಕಾಯಿದೆಯ ಫಲ ಎಂದು ನನ್ನ ಭಾವನೆ. ಕೃಷಿ ಬಜೆಟ್ ಬಗ್ಗೆ ಹೇಳಿದರು. ಕೃಷಿ ಬಜೆಟ್ ಎಂದ ಕೂಡಲೇ ನಾವು ಬಹುಶ: ಈ ಕೃಷಿ ಬಜೆಟ್‌ನಿಂದ ನಮ್ಮ ಕೃಷಿಕರಿಗೆ ಬಹಳ ಪ್ರಯೋಜನವಾಗುತ್ತದೆಂದು ಬಹಳ ಸಂತೋಷಪಟ್ಟಿದ್ದೆವು. ನಮ್ಮ ಕರಾವಳಿ

ಪ್ರದೇಶದ ರೈತರ ಪರಿಸ್ಥಿತಿ ಅತ್ಯಂತ ಚಿಂತಾಜನಕ. ಮಳೆ ವಿಪರೀತ ಬರುತ್ತಿದೆ. ಆದರೆ ಬೆಳೆಯ ಪ್ರಮಾಣ ಬಹುಶ: ಬೇರೆ ಪ್ರದೇಶಕ್ಕಿಂತ ಐದನೇ ಒಂದು ಭಾಗದಷ್ಟು ಕಡಿಮೆ ಬೆಳೆ ಬರುತ್ತದೆ. ಮೊನ್ನೆ ನಮ್ಮ ತಾಲ್ಲೂಕಿನ KDP ರಿವ್ಯೂ ಮೀಟಿಂಗ್ ಮಾಡುವಾಗ ನಮ್ಮ ಕೃಷಿ ಇಲಾಖಾಧಿಕಾರಿಗಳ ಹತ್ತಿರ ಪ್ರಶ್ನೆ ಕೇಳಿದೆ. ಕಳೆದ ಹತ್ತು ವರ್ಷಗಳಿಂದ ನಮ್ಮ ತಾಲ್ಲೂಕಿನಲ್ಲಿ ಭತ್ತದ ಕೃಷಿ ಎಷ್ಟು ಪರ್ಸೆಂಟ್ ಕಡಿಮೆಯಾಗಿದೆ ಎಂದು ಕೇಳಿದಾಗ, ಅವರು ಅಂಕಿ ಸಂಖ್ಯೆಯನ್ನು ಕೊಟ್ಟಿದ್ದಾರೆ. ಒಂದು ರೀತಿಯ ಭಯದ ವಾತಾವರಣ, ಹತ್ತು ವರ್ಷಗಳಿಂದ ಭತ್ತದ ಕೃಷಿ ನಮ್ಮ ಒಂದು ಕಾರ್ಕಳ ತಾಲ್ಲೂಕಿನಲ್ಲಿ 52% ನಷ್ಟು ಕಡಿಮೆಯಾಗಿದೆ ಎನ್ನುವ ಉತ್ತರ ಅವರು ಕೊಟ್ಟರು. ಅದು ಅವರ ಅಂಕಿ ಸಂಖ್ಯೆಗೆ ಸೀಮಿತವಾಗಿರಬಹುದು. ನನ್ನ ಲೆಕ್ಕದಲ್ಲಿ ಇನ್ನೂ ಜಾಸ್ತಿಯಿದೆ. ಎಲ್ಲರೂ ಭತ್ತದ ಕೃಷಿ ಬಿಡತಕ್ಕಂಥ, ಕೃಷಿಯಿಂದ ಪಾಲಾಯಾನ ಮಾಡತಕ್ಕಂಥ ವಾತಾವರಣ ಆಗಿದೆ. ಇದಕ್ಕೆ ಕೃಷಿ ಬಜೆಟ್‌ನಿಂದ ಏನು ಪರಿಹಾರ ಸಿಕ್ಕಿದೆ? ಬಹುಶ: ನನಗೆ ಅನ್ನಿಸುತ್ತದೆ ಈ ಕೃಷಿ ಬಜೆಟ್‌ನಿಂದ ಯಾವುದೇ ರೀತಿಯ ಪರಿಹಾರ ಸಿಕ್ಕಿಲ್ಲ. ರೈತರ ಬದುಕಿನಲ್ಲಿ ಚೈತನ್ಯ ಆಗಲಿಲ್ಲ. ರೈತರಿಗೆ ಯಾವ ಹೊಸ ಉತ್ಸಾಹವೂ ಕೂಡ ಈ ಹೊಸ ಕೃಷಿ ಬಜೆಟ್‌ನಿಂದ ಬರಲಿಲ್ಲವೆಂದು ನನ್ನ ಒಂದು ವೈಯಕ್ತಿಕವಾದ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಆ ಕೃಷಿಯನ್ನು ಉಳಿಸಿಕೊಳ್ಳಲಿಕ್ಕೆ ಏನು ಮಾಡಬೇಕು? ನಾವು ಇನ್ನೊಂದು ಹತ್ತು ವರ್ಷಗಳ ನಂತರ ಗದ್ದೆ ನೋಡಬೇಕಾದರೆ ಬಹುಶ: ಪುಸ್ತಕದಲ್ಲಿಯೇ ನೋಡಬೇಕಾಗಿದ್ದೀತು. ಆ ರೀತಿಯ ಪರಿಸ್ಥಿತಿಯಾಗುತ್ತಿದೆ. ಹತ್ತು ವರ್ಷದಲ್ಲಿ 52% ಕಡಿಮೆಯಾಗಿದೆ ಎಂದರೆ ಇನ್ನು ಹತ್ತು ವರ್ಷಗಳ ನಂತರ ಎಲ್ಲಿ ಇರುತ್ತದೆ? ಇನ್ನು ಐದು ವರ್ಷದಲ್ಲಿ ಏನೂ ಕೂಡ ಇರುವುದಿಲ್ಲ. ಆ ವಾತಾವರಣಆಗಿದೆ, ನಮ್ಮ ಕರಾವಳಿ ಪ್ರದೇಶದ ರೈತರಿಗೆ, ತಮಗೂ ಕೂಡ ಗೊತ್ತಿದೆ. ತಾವು ಕೂಡ ಅನೇಕ ಬಾರಿ ಹೇಳಿದಿರಿ. ನಮ್ಮಲ್ಲಿ ಭಾರಿ ನೀರಾವರಿ ಇಲ್ಲವೇ ಇಲ್ಲ. ನಮಗೆ ಭಾರಿ ನೀರಾವರಿ ಎನ್ನುವುದನ್ನು ಮಾಧ್ಯಮಗಳಲ್ಲಿ ಓದಿ ಮಾತ್ರ ಗೊತ್ತಿರುವುದು ಬಿಟ್ಟರೆ, ನಮ್ಮ ಜಿಲ್ಲೆಯಲ್ಲಿ ಇಲ್ಲ. ಸಣ್ಣ ನೀರಾವರಿಗಳನ್ನು ಅಲ್ಲಿ ಇಲ್ಲಿ ಮಾಡೋಣ ಎಂದರೆ ಅದೂ ಕೂಡ ಇಲ್ಲ. ಪಶ್ಚಿಮವಾಹಿನಿ ಎನ್ನುವ ಒಂದು ಯೋಜನೆಯಾಗಿತ್ತು. ನಮ್ಮಲ್ಲಿರತಕ್ಕಂಥ ನದಿಗಳು ಎಷ್ಟು ಇವೆ ಎಂದರೆ ಅಷ್ಟು ನದಿಗಳಿವೆ. ಶೇಕಡ 90ಕ್ಕಿಂತ ಹೆಚ್ಚು ನೀರು ಸಮುದ್ರಕ್ಕೆ ವ್ಯರ್ಥವಾಗಿ

ಹೋಗುತ್ತಿದೆ. ಅದನ್ನು ಜೋಡಿಸತಕ್ಕಂಥ ಒಂದು ವ್ಯವಸ್ಥೆ ಮಾಡಲಿಕ್ಕೆ ದೊಡ್ಡ ಯೋಜನೆ ಮಾಡಿ ಆ ಯೋಜನೆ ಹದಿನೈದು ವರ್ಷಗಳಿಂದ ಬಹುಶ: ಸರಕಾರಲ್ಲಿ ಧೂಳು ತಿನ್ನುತ್ತಿದೆ. ಅದು ಆಗಿದ್ದರೆ ಬಹುಶ: ನಮ್ಮ ಕರಾವಳಿಯಲ್ಲಿ ಈ ಭಯಾನಕವಾದಂಥ ಪರಿಸ್ಥಿತಿ ಕೃಷಿ ಕ್ಷೇತ್ರಕ್ಕೆ ಬರುತ್ತಿರಲಿಲ್ಲ ಎನ್ನುವುದು ನನ್ನ ಭಾವನೆ. ಇನ್ನೊಂದು ಸಾವಯವ ಕೃಷಿಯಲ್ಲಿ ಬಹಳ ದೊಡ್ಡ ಸಾಧನೆ ಮಾಡಿದರು ಎಂದು ಹೇಳಿದರು. ನಾನು ಶಾಸಕನಾಗಿದ್ದೇನೆ, ಸಾವಯವ ಕೃಷಿಯಲ್ಲಿ ಯಾವುದೋ ಒಂದು ಅಲ್ಲಿ ಮಿಷನ್ ಬಂತು, ಕಳೆದ ಒಂದೆರಡು ವರ್ಷಗಳಿಂದ ಸಾವಯವ ಕೃಷಿಗೆ ಒಂದು ಮಿಷನ್ ಮಾಡಿ ಒಂದಷ್ಟು ಹಣ ಕೊಟ್ಟರು. ನಾನು ಫಲಾನುಭವಿಗಳು ಎಲ್ಲಿ ಆಯ್ಕೆಯಾಗುತ್ತಾರೆಂದು ಹುಡುಕಿದರೆ, ಪಂಚಾಯಿತಿಯಲ್ಲಿ ಇಲ್ಲ, ತಾಲ್ಲೂಕು ಪಂಚಾಯಿತಿಯಲ್ಲಿ ಆಯ್ಕೆಯಾಗಿಲ್ಲ, ನಾನು ಶಾಸಕನಾಗಿ ನನಗೆ ಗೊತ್ತೇ ಇಲ್ಲ. ಇದು ಹೇಗೆ ಆಯ್ಕೆಯಾಗುತ್ತದೆಂದರೆ ಅದಕ್ಕಾಗಿ ಒಂದು ಸೊಸೈಟಿಆಗಿದೆ. ನನ್ನ ತಾಲ್ಲೂಕಿನಲ್ಲಿ ಅದಕ್ಕೆ ಬೇಕಾಗಿಯೇ ಒಂದು ಸೊಸೈಟಿ. ಇದರಲ್ಲಿ ರೈತರ್ಯಾರೂ ಇಲ್ಲ. ಸಾವಯವ ಕೃಷಿ ಮಾಡುವುದಿಲ್ಲ, ಇದ್ದ ಹಣವನ್ನೆಲ್ಲಾ ಹಂಚಿಕೊಂಡು ಬಿಟ್ಟಿದ್ದಾರೆ. ನಾನು ಪಟ್ಟಿ ತಂದಿದ್ದೇನೆ ಅದನ್ನು ಬೇಕಾದರೆ ಕೊಡುತ್ತೇನೆ. ಯಾರು ಈ ಪಟ್ಟಿ ಮಾಡಿದ್ದು ಎಂದು ಕೇಳಿದರೆ ಯಾರೂ ಉತ್ತರ ಹೇಳುವವರಿಲ್ಲ. ಆ ಮಿಷನ್‌ಗೆ ಹಣ ಕೊಟ್ಟು ಅವರಿಂದಲೇ ಮಾಡತಕ್ಕಂಥ ಒಂದು ವ್ಯವಸ್ಥೆಯಾಗಿದ್ದರಿಂದ ಬಹುಶ: ಸಾವಯವ ಕೃಷಿ ಅದಕ್ಕೆ ಒತ್ತು ಕೊಟ್ಟಿದ್ದು ಸಂಪೂರ್ಣ ವ್ಯರ್ಥವಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಇದರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯ ಬಗ್ಗೆ ಪ್ರಸ್ತಾಪವಿದೆ. ನಮ್ಮಲ್ಲಿ ಭಾಗ್ಯಲಕ್ಷ್ಮಿ ಯೋಜನೆಯ ಬಗ್ಗೆ ಹೇಳಿದ್ದಾರೆ. ಭಾಗ್ಯಲಕ್ಷ್ಮಿ ಯೋಜನೆಯನ್ನು ತೆಗೆದುಕೊಳ್ಳೋಣ, ನಮ್ಮಲ್ಲಿ ಇದರಲ್ಲಿ ಏನಾಗುತ್ತಿದೆ ಎಂದರೆ, ಬಹಳ ದೊಡ್ಡ ಗೊಂದಲ. ಎಲ್ಲರಿಗೂ ಭಾಗ್ಯಲಕ್ಷ್ಮಿ ಕೊಡಬೇಕಾದರೆ ಆ ಮಗುವಿನ ತಂದೆಯಾದವನ್ನು BPL card holder ಆಗಿರಬೇಕೆಂದು ಹೇಳುತ್ತಾರೆ. ಅವನಿಗೆ BPL card ಇರಬೇಕು. ತಾಯಿಯ ಹೆಸರಿನಲ್ಲಿ BPL card ಇದ್ದರೆ ಆಗುವುದಿಲ್ಲ. ತಂದೆಯ ಹೆಸರಿನಲ್ಲಿ ಇದ್ದರೆ ಮಾತ್ರ ಕೊಡಬೇಕೆಂದು ಅದರಲ್ಲಿ ಹೇಳುತ್ತಾರೆ. BPL card ಬಗ್ಗೆ ಈ ರಾಜ್ಯದಲ್ಲಿ ಬಹಳ ದೊಡ್ಡ ಗೊಂದಲವಿದೆ. BPL card ಯಾರಿಗೆ ಸಿಗಬೇಕೋ ಅವರಿಗೆ ಸಿಕ್ಕೇ ಇಲ್ಲ ಎನ್ನುವ ವಾದ ಇವತ್ತಿಗೂ ಕೂಡ ಜೀವಂತವಾಗಿದೆ. ನಮ್ಮ ಜಿಲ್ಲೆಯಲ್ಲಿ

ಮಾತ್ರವಲ್ಲ ಇಡೀ ರಾಜ್ಯದಲ್ಲಿ ಯಾರಿಗೆ BPL card ಸಿಗಬೇಕೋ ಅವರಿಗೆ ಬಹುತೇಕ ಜನರಿಗೆ ಸಿಗಲಿಲ್ಲ. ಯಾರಿಗೆ APL card ಸಿಗಬೇಕಾಗಿತ್ತೋ ಅದರಲ್ಲಿ ಸ್ವಲ್ಪ ಜನರಿಗೆ APL card ಸಿಕ್ಕಿದೆ. ಈ ಗೊಂದಲ ಪರಿಹರಿಸಲಿಕ್ಕೆ 3–4 ಆಹಾರ ಮಂತ್ರಿಗಳು ಬಂದು ಹೋದರೂ ಇವತ್ತಿಗೂ ಆಗಲಿಲ್ಲ. ಅರ್ಜಿ ಕೊಡೋಣ ಎಂದು ಯಾರಾದರೂ ಹೋದರೆ ಅರ್ಜಿ ತೆಗೆದುಕೊಳ್ಳುವುದಕ್ಕೆ ಯಾರೂ ಗತಿ ಇಲ್ಲ. Card ಕೊಡುವುದಕ್ಕೆ ಅರ್ಜಿ ತೆಗೆದುಕೊಳ್ಳುವವರೇ ಇಲ್ಲ. ನಮ್ಮಲ್ಲಿ ಮೊನ್ನೆ ಒಬ್ಬರು ಬಂದಿದ್ದರು. ನಮ್ಮ ಪಕ್ಕದ ತಾಲ್ಲೂಕಿನಿಂದ ತಮ್ಮ ಹೆಸರನ್ನು ಡಿಲೀಟ್ ಮಾಡಿಕೊಂಡು ನಮ್ಮ ತಾಲ್ಲೂಕಿಗೆ ಬಂದು ಅರ್ಜಿ ಕೊಡಬೇಕೆಂದು ಸುಮಾರು ನಾಲ್ಕು ತಿಂಗಳಿನಿಂದ ಕಾಯುತ್ತಿದ್ದಾರೆ. ಅವರ ಅರ್ಜಿ ತೆಗೆದುಕೊಳ್ಳುವುದಕ್ಕೆ ಅಲ್ಲಿ ಯಾರೂ ಗತಿ ಇಲ್ಲ. ಆ ಅರ್ಜಿಯನ್ನು ಆ software ತೆಗೆದುಕೊಳ್ಳುವುದಿಲ್ಲ. ಈ BPL ಬಗ್ಗೆ ಇರುವ ಗೊಂದಲದ ಬಗ್ಗೆ ಇಲ್ಲಿ ಚರ್ಚೆಯಾದಾಗ ಇಲ್ಲಿಯೇ ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಸರಕಾರಿ ಆದೇಶವೂ ಇದೆ, ಒಂದೊಂದು ರೀತಿಯಲ್ಲಿ ಸರ್ಕಾರಿ ಆದೇಶವಿದೆ. ಸರ್ಕಾರಿ ಆದೇಶ ಏನು ಹೇಳುತ್ತದೆ ಎಂದರೆ, BPL card ಅನ್ನು ration ತೆಗೆದುಕೊಳ್ಳುವುದಕ್ಕೆ ಮಾತ್ರ ಉಪಯೋಗಿಸಿಕೊಳ್ಳಬೇಕೇ ವಿನಹ ಬೇರೆ ಯಾವುದಕ್ಕೂ ಮಾನದಂಡವಾಗಿ ಉಪಯೋಗಿಸಬಾರದು ಎನ್ನುವ ಸ್ಪಷ್ಟ ಆದೇಶವಿದೆ. ಆ ಆದೇಶವನ್ನು ಕೇಳುವವರು ಇಲ್ಲ. ಇಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ಕೊಡಿ ಎಂದು ಹೋದರೆ ನಿಮಗೆ BPL card ಇಲ್ಲ ಹೀಗಾಗಿ ಕೊಡುವುದಕ್ಕೆ ಆಗುವುದೇ ಇಲ್ಲ ಎಂದು ನಿರಾಕರಣೆ ಮಾಡತಕ್ಕಂಥ ಪರಿಸ್ಥಿತಿ ಇದೆ. ಈ ಸರಕಾರದ ವಾದದಲ್ಲಿ ಒಂದು ರೀತಿಯ ದ್ವಂದ್ವ ಕಾಣುತ್ತಿದೆ. ಒಂದು ಕಡೆಗೆ ಅದು ರೇಷನ್‌ಗೆ ಮಾತ್ರ ಸೀಮಿತ. ಇನ್ನೊಂದು ಕಡೆ ಅದು ಭಾಗ್ಯಲಕ್ಷ್ಮಿಗೆ ಬೇಕು, ಮತ್ತೊಂದು ಕಡೆಗೆ ಆಸ್ಪತ್ರೆಗೆ ಬೇಕು. ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಮಾಡಿದಿರಿ. ಈ ಯೋಜನೆಗೆ ಒಳಪಡಬೇಕೆಂದರೆ ಅಲ್ಲಿ BPL card ಇರುವಂತವರು ಮಾತ್ರ ಹೋಗಬೇಕು. BPL card ಯಾರಿಗೆ ಅರ್ಹತೆ ಇದೆ ಅವರಿಗೆ ಸಿಕ್ಕಿಲ್ಲ ಎನ್ನುವ ವಾದ ಸರ್ಕಾರವೇ ಒಪ್ಪಿದೆ. ಆದುದರಿಂದ, ಅದನ್ನು ರೇಷನ್‌ಗೆ ಮಾತ್ರ ಎಂದು ಆದೇಶ ಮಾಡಿದ್ದು. ಆದರೆ, ಆಸ್ಪತ್ರೆಗೆ ಹೋದರೆ ಆಗುವುದಿಲ್ಲ, Old age pension ಗೆ ಹೋದರೆ ಆಗುವುದಿಲ್ಲ, ಈ ರೀತಿಯ ಒಂದು ಅತಂತ್ರವಾದ ಪರಿಸ್ಥಿತಿ. ಇದರಿಂದ ಯಾವ ರೀತಿ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಿದೆ ಎಂದು

ನನಗೆ ಕಾಣುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಯಿಂದ ಗಂಗಾ ಕಲ್ಯಾಣ ಯೋಜನೆಗಳನ್ನು ಬಹಳ ಹಿಂದಿನಿಂದಲೂ ಕೊಡುತ್ತಿದ್ದರು. ಈ ಸರ್ಕಾರ ಬಂದ ಮೇಲೆ ಅಲ್ಲ, ಮೊದಲಿನಿಂದಲೂ ಗಂಗಾ ಕಲ್ಯಾಣ ಯೋಜನೆಗಳನ್ನು ಕೊಡುತ್ತಿದ್ದರು. ಆದರೆ, ಅದನ್ನು ಅಧಿಕಾರ ವಿಕೇಂದ್ರೀಕರಣ ಮಾಡಲಿಕ್ಕೆ ಹೋದರೆ ಈಗ ಅದು centralize ಆಗುತ್ತಿದೆ. ಇವತ್ತು ರಾಜ್ಯ ಮಟ್ಟದ ಬಹುತೇಕ ಅಧಿಕಾರಿಗಳ ಕಪಿಮುಷ್ಠಿಯಲ್ಲಿ ಅಧಿಕಾರಿಗಳನ್ನು ಇಟ್ಟುಕೊಂಡಿದ್ದಾರೆ. ಬೋರ್‌ವೆಲ್ ಕೊರೆಯಬೇಕಾದರೆ ಸ್ಥಳೀಯವಾಗಿ ಏನೂ ಮಾಡಲಿಕ್ಕೆ ಆಗುವುದಿಲ್ಲ. ಇಲ್ಲಿಯೇ ಕುಳಿತುಕೊಂಡು ಒಟ್ಟು ಏಜೆನ್ಸಿ ಫಿಕ್ಸ್ ಮಾಡಬೇಕಾದಂತ ಒಂದು ಪರಿಸ್ಥಿತಿ ಬರುತ್ತದೆ. ಇನ್ನೊಂದು ಆರೋಗ್ಯದ ವಿಚಾರದಲ್ಲಿ ಬಹಳಷ್ಟು ಪ್ರಸ್ತಾಪವಿದೆ. ಎಲ್ಲಾ ವಿಷಯಗಳನ್ನು ನಾನು ಹೇಳುವುದಿಲ್ಲ. ಆದರೆ, ವಾಜಪೇಯಿ ಆರೋಗ್ಯ ಶ್ರೀ ಯೋಜನೆಯ ಬಗ್ಗೆ ಬಹಳ ದೊಡ್ಡ ಜಾಹೀರಾತುಗಳನ್ನು ಪತ್ರಿಕೆಗಳಲ್ಲಿ ನಾವು ಕಾಣುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಹೆಸರು ಇದೆ. ಅದನ್ನು ಪಟ್ಟಿಯಲ್ಲಿ ಸೇರಿಸಿಕೊಂಡಿದ್ದಾರೆ. ನಾನು ಮೊನ್ನೆ ಕಸ್ತೂರಿಬಾ ಆಸ್ಪತ್ರೆಗೆ 2–3 ಪೇಷೆಂಟ್‌ಗಳನ್ನು ಕಳುಹಿಸಿದರೆ, ಅವರು ಈಗ ನಾವು ತೆಗೆದುಕೊಳ್ಳುವುದಿಲ್ಲವೆಂದು ನಿರಾಕರಣೆ ಮಾಡುತ್ತಿದ್ದಾರೆ. ಏಕೆ ಎಂದು ಕೇಳಿದರೆ ನಮಗೆ ಹಣ ಬರುವುದು ಖಾತ್ರಿಯಿಲ್ಲ, ನಮಗೆ ಬರಬೇಕಾದ ಬಾಕಿ ಬಹಳಷ್ಟು ಇದೆ, ಇದನ್ನು ನಾವು ನಂಬುವುದಿಲ್ಲ, ಹೀಗಾಗಿ ನಾವು ಪೇಷೆಂಟ್‌ಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಇದು ಕೇವಲ ಆ ಆಸ್ಪತ್ರೆಗೆ ಮಾತ್ರ ಸೀಮಿತವಾಗಿಲ್ಲ. ಇವತ್ತಿನದಿವಸ ಬಹುತೇಕ ಆಸ್ಪತ್ರೆಗಳಿಗೆ ಇದು ಸೀಮಿತವಾಗಿದೆ. ಈ ರೀತಿಯಾದರೆ ಸರ್ಕಾರ ಹಾಕಿರುವ ಜಾಹೀರಾತು ಯಾರಿಗೋಸ್ಕರ? ವಾಜಪೇಯಿ ಆರೋಗ್ಯಶ್ರೀ ಎಂದು ಪತ್ರಿಕೆಯಲ್ಲಿ ಮತ್ತು ಬೋರ್ಡ್‌ಗಲ್ಲಿ ಓದಿದ್ದೇವೆ. ಮತ್ತೆ ಈ ಬಗ್ಗೆ ಅಲ್ಲಲ್ಲಿ ದೊಡ್ಡ ದೊಡ್ಡ ಫ್ಲೆಕ್ಸ್ ಹಾಕಿ ಅದರಲ್ಲಿ ಮಾನ್ಯ ಮುಖ್ಯಮಂತ್ರಿಯವರ ಫೋಟೋವನ್ನು ಹಾಕಿಕೊಂಡಿದ್ದಾರೆ. ಬಡವರು, ಪಾಪದವರು, ಗತಿ ಇಲ್ಲದವರಿಗೆ ದೊಡ್ಡ ದೊಡ್ಡ ಭಯಾನಕವಾದ ಕಾಯಿಲೆ ಬಂದಾಗ ಅದನ್ನು ನೋಡಿ ಆಸ್ಪತ್ರೆಗೆ ಹೋದರೆ ಆಸ್ಪತ್ರೆಯವರು ವಾಪಸ್ಸು ಕಳುಹಿಸುತ್ತಿದ್ದಾರೆ. ಇದು ಯಾವ ರೀತಿಯಾದ ನ್ಯಾಯ? ಇದರಿಂದ ಏನಾದರೂ ಸಮೃದ್ಧಿಯಾಗಿದೆಯೇ ಎಂಬ ಮಾತನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. 9 ಲಕ್ಷ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ.

ನನ್ನ ಕ್ಷೇತ್ರದಲ್ಲಿ ಪಟ್ಟಿಯನ್ನು ಅಂತಿಮವಾಗಿ ಶಿಫಾರಸ್ಸು ಮಾಡುವುದನ್ನು ಶಾಸಕರಿಗೆ ಕೊಟ್ಟಿದ್ದಾರೆ. ಈ ಪಟ್ಟಿಯನ್ನು ನಾನು ಕಳುಹಿಸಿ 9 ತಿಂಗಳಾಗಿತ್ತು. ಮೊನ್ನೆದಿವಸ ಆ ಪಟ್ಟಿಗೆ ಅನುಮೋದನೆ ಬಂದಿದೆ. ಒಂದು ಪಟ್ಟಿ ತಾಲ್ಲೂಕಿನಿಂದ ಶಿಫಾರಸ್ಸು ಆಗಿ ಇಲ್ಲಿನ ನಿಗಮಕ್ಕೆ ಬಂದರೆ ಅದರ ಅನುಮೋದನೆಗೆ 9 ತಿಂಗಳು ಬೇಕಾಗುತ್ತದೆ. ಆದರೆ, ಇದಕ್ಕೆ ಹಣ ಇಲ್ಲ. ಕೆಲವರು ಇದರ ಆಸೆಯನ್ನು ಬಿಟ್ಟುಬಿಟ್ಟಿದ್ದಾರೆ. ಬಹುಶಃ ಸರ್ಕಾರಿ ಜಾಗದಲ್ಲಿದ್ದವರಿಗೆ ಇದು ಆಗುವುದಿಲ್ಲ. ಮತ್ತೆ ಕುಟುಂಬದವರ ಜಾಗದಲ್ಲಿದ್ದವರಿಗೆ ಇದು ಆಗುವುದಿಲ್ಲ. ರಿಜಿಸ್ಟ್ರೇಷನ್ ಇಲ್ಲದೇ ಮನೆಯನ್ನು ಕೊಡುತ್ತಿಲ್ಲ. ಹಿಂದಿನ ಸರ್ಕಾರಗಳು ಇದ್ದಾಗ ನಾವೆಲ್ಲಾ ಶಾಸಕರಾಗಿ ನೋಡಿದ್ದೇವೆ. ಅದೇನೆಂದರೆ, ಇಂದಿರಾ ಆವಾಸ್ ಯೋಜನೆ ಮನೆಗಳಿಗೆ ಮತ್ತು ಅಂಬೇಡ್ಕರ್ ಯೋಜನೆ ಮನೆಗಳಿಗೆ ಯಾವುದೇ ರಿಜಿಸ್ಟ್ರೇಷನ್‌ನಿನ ಅವಶ್ಯಕತೆ ಇರಲಿಲ್ಲ. ಇದಕ್ಕಿಂತ ಮೊದಲು ನೆರಳು ಭಾಗ್ಯ ಯೋಜನೆ ಎಂದು ಇತ್ತು. ಇದೆಕ್ಕೆಲ್ಲ ರಿಜಿಸ್ಟ್ರೇಷನ್‌ನ ಅಗತ್ಯತೆ ಇರಲಿಲ್ಲ. ಈಗ ರಿಜಿಸ್ಟ್ರೇಷನ್ ಇಲ್ಲದೇ ಅಂದರೆ ನೋಂದಾವಣೆ ಮಾಡದೇ ಫಲಾನುಭವಿಯ ಮನೆಗೆ ಐದು ಪೈಸೆ ಕೂಡ ಬಿಡುಗಡೆ ಮಾಡುತ್ತಿಲ್ಲ. ನಿನಗೆ ಮನೆ ಮಂಜೂರು ಆಗಿದೆ ನೀನು ಮನೆ ಕಟ್ಟು ಎಂದು 10 ತಿಂಗಳ ಹಿಂದೆ ಹೇಳಿದ ನಂತರ ಆತ ಪಂಚಾಂಗ ಹಾಕಿ ಗೋಡೆ ಮತ್ತು ಮಾಡು ಮಾಡಿದರೆ ನೀನು ಈಗ ಮಾಡು ಮಾಡಿರುವುದರಿಂದ ಕೊಡುವುದಕ್ಕೆ ಆಗಿಲ್ಲವೆಂದು ಹೇಳುತ್ತಾರೆ. ಪಂಚಾಯತ್ ಹಂತದಲ್ಲಿ ಹೋದರೆ ನಿನಗೆ ಮಂಜೂರಾತಿ ಆಗಿಲ್ಲ. ಆದ್ದರಿಂದ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಒಟ್ಟಾರೆ ಆತನಿಗೆ ಮನೆ ಇಲ್ಲದಂತಾಗಿದೆ. ನನ್ನ ತಾಲ್ಲೂಕಿನಲ್ಲಿ ನಾನು ಸ್ವತಃ ತಿಳಿದುಕೊಂಡಿರುವ ವಿಚಾರ ಏನೆಂದರೆ, ನಮ್ಮಲ್ಲಿ ಅತ್ಯಂತ ನಿಕೃಷ್ಟವಾದ ಪರಿಸ್ಥಿತಿ ಇದೆ. ಇದರಲ್ಲಿ ಜಿಪಿಎಸ್ ಕೂಡ ಮಾಡಬೇಕಂತೆ. ಇದನೆಲ್ಲವನ್ನೂ ಯಾರು ಮಾಡಿದರೋ ಗೊತ್ತಿಲ್ಲ. ಆತ ಯಾರ್ಯಾರೋ ಕಡೆಯಿಂದ ಮತ್ತು ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಸಾಲ ತೆಗೆದುಕೊಂಡು ಗೋಡೆ ಕಟ್ಟಿದ್ದರೆ ನೀನು ಗೋಡೆ ಇಟ್ಟಿದ್ದೀಯಾ ಆದ್ದರಿಂದ GPS ಮಾಡುವುದಕ್ಕೆ ಆಗುವುದಿಲ್ಲ ಇದು ಪಂಚಾಯತ್‌ನಲ್ಲಿ ಮಾತ್ರ ಆಗಬೇಕೆಂದು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ಯಾರೂ ಸಹ ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ. ಇದು ತಮಗೂ ಸಹ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿ ಫಲಾನುಭವಿಗಳೇ ಮನೆ ಕಟ್ಟುವ ಕೆಲಸ

ಮಾಡಿಕೊಳ್ಳುತ್ತಾರೆ. ಇಷ್ಟೆಲ್ಲ ಇದ್ದಾಗ್ಯೂ ಬಡವರು ಮನೆಗಳನ್ನು ಮಾಡುವುದಕ್ಕೆ ಹೋದಾಗ ಅಲ್ಲಿ ಸಮಸ್ಯೆಗಳು ಆಗುತ್ತಿವೆ. ಇದರ ಜೊತೆಗೆ ಗ್ರಾಮೀಣಾಭಿವೃದ್ಧಿಯಲ್ಲಿ ಬಹಳ ದೊಡ್ಡ ಕೆಲಸ ಮಾಡಿದ್ದೇವೆ ಎಂಬುದು ಇದರಲ್ಲಿ ಇದೆ. ನಮ್ಮ ಉಡುಪಿ ಜಿಲ್ಲಾ ಪಂಚಾಯತ್ ಒಂದು ನಿರ್ಣಯ ಮಾಡಿದೆ. ಆ ಸಂದರ್ಭದಲ್ಲಿ ನಾನೂ ಸಹ ಇದ್ದೆ. ಜಿಲ್ಲಾ ಪಂಚಾಯತ್‌ನಲ್ಲಿ 3054 ಮತ್ತು 5054 ಹೆಡ್‌ನ ಅಡಿಯಲ್ಲಿ ಕಾಮಗಾರಿಗಳಿಗೆ ಬೇರೆ ಬೇರೆ ಮೂಲಗಳಿಂದ ಅಂದರೆ, 12th and 13th Finance ನಿಂದ ಬಹುಶ: ನಮ್ಮ ಜಿಲ್ಲೆಯ ರಸ್ತೆಗಳ ನಿರ್ವಹಣೆಗೆ ವರ್ಷಕ್ಕೆ 29 ಕೋಟಿ ರೂಪಾಯಿ ಬರುತ್ತಿತ್ತು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚುಕಡಿಮೆ ಸುಮಾರು 30 ರಿಂದ 40 ಕೋಟಿ ರೂಪಾಯಿ ಬರುತ್ತಿತ್ತು. ಆದರೆ, ಮೂರು ವರ್ಷಗಳಿಂದ ನಯಾಪೈಸೆ ಬಂದಿಲ್ಲ. ಈ ವರ್ಷ ಒಂದೆರೆಡು ಕೋಟಿ ರೂಪಾಯಿಗಳನ್ನು ಬಿಟ್ಟರೆ ಕಳೆದ ಮೂರು ವರ್ಷಗಳಿಂದ ಒಂದು ಪೈಸೆ ಬಂದಿಲ್ಲ. ಇವತ್ತಿನದಿವಸ ಗುಂಡಿ ಮುಚ್ಚುವುದಕ್ಕೆ ಆಗುತ್ತಿಲ್ಲ. ತಾಲ್ಲೂಕು ಪಂಚಾಯತ್‌ನವರನ್ನು ಕೇಳಿದರೆ ಅವರು ಜಿಲ್ಲಾ ಪಂಚಾಯತ್‌ನವರನ್ನು ತೋರಿಸುತ್ತಾರೆ. ಜಿಲ್ಲಾ ಪಂಚಾಯತ್‌ನವರನ್ನು ಕೇಳಿದರೆ ಅವರು ಶಾಸಕರನ್ನು ತೋರಿಸಿ, ಶಾಸಕರಿಗೆ 3054ನಲ್ಲಿ ಫಂಡ್ ಕೊಡುತ್ತಾರೆಂದು ಹೇಳುತ್ತಾರೆ. ಶಾಸಕರಿಗೆ ಈಗ ಮಾತ್ರ ಕೊಡುತ್ತಿಲ್ಲ. ಮೊದಲೂ ಸಹ ಕೊಡುತ್ತಿದ್ದರು. ಆದರೆ, ಈ ಸಾರಿ ಮಾತ್ರ ಕೊಟ್ಟಿಲ್ಲ. ಮತ್ತೆ ಈ ಭಾಗದಲ್ಲಿ ಕುಳಿತುಕೊಂಡಂಥ ಸದಸ್ಯರಿಗೆ ಕೊಟ್ಟಿಲ್ಲ. ಇದನ್ನು ಅನುಮೋದಿಸಬಹುದೆಂದು ಮಂತ್ರಿಗಳು ಪತ್ರದ ಮೇಲೆ ಬರೆದಿದ್ದಾರೆ. ಆದರೆ, ಈಗ ಪತ್ರ ಮಾತ್ರ ಇದೆ, ಬೇರೇನೂ ಇಲ್ಲ. ಅಂದರೆ, ನಮಗೆ ಹಣ ಮಾತ್ರ ಬಂದಿಲ್ಲ. ಆದರೆ, ಆ ಕಡೆಯ ಸದಸ್ಯರಿಗೆ ಕೊಟ್ಟಿದ್ದಾರೆಂದು ನಾವು ಕೇಳಿದ್ದೇವೆ. ಸ್ವಲ್ಪವಾದರೂ ಈ ಕಡೆಯವರಿಗೆ ಕೊಡಬಹುದಾಗಿತ್ತು. ಆದರೆ, ಅದನ್ನು ಕೊಟ್ಟಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ನಮ್ಮ ಆಗುಂಬೆ ಘಾಟ್ ಬಗ್ಗೆ ಹೇಳುವುದಾದರೆ, ಈ ಆಗುಂಬೆ ಘಾಟ್ ಬಹುಶ: ನಾಲ್ಕಾರು ಜಿಲ್ಲೆಗಳನ್ನು ಸಂಪರ್ಕ ಮಾಡುವಂಥ ಒಂದು ಘಾಟ್ ಆಗಿದೆ. ಈ ಘಾಟ್‌ನ ಮೂಲಕ ಕೇವಲ 12 ನಿಮಿಷದಲ್ಲಿ ಆಗುಂಬೆಯಿಂದ ಸೋಮೇಶ್ವರಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ತಾವೂ ಸಹ ಪ್ರಯಾಣ ಮಾಡಿರಬಹುದು. ಉಡುಪಿ ಭಾಗದಿಂದ ಬೆಂಗಳೂರಿಗೆ ಬರುವುದಕ್ಕೆ ಈ ಘಾಟ್ ಮೂಲಕ ಬಹಳ ಹತ್ತಿರ ಇದೆ. ಹಾಗೆಯೇ

ದಾವಣಗೆರೆಗೆ ಹೋಗುವುದಕ್ಕೆ ಅನುಕೂಲವಾಗುತ್ತದೆ. ಮತ್ತೆ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಭಾಗವನ್ನು ಸಂಪರ್ಕ ಮಾಡುವುದಕ್ಕೆ ಅತ್ಯಂತ ಉತ್ತಮವಾದಂಥ ಒಂದು ಹೆದ್ದಾರಿಯಾಗುತ್ತದೆ. ಆದ್ದರಿಂದ, ಶಿರಾಡಿ ಘಾಟ್‌ಗೆ ಒಂದು alternative ಆಗಿ ಒಂದು ರಸ್ತೆ ಮಾಡಿ ಎಂದು ಒತ್ತಾಯ ಮಾಡಿ ಸಾಕಾಗಿದೆ. ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ 100 ಕೋಟಿ ರೂಪಾಯಿಗಳನ್ನು ಘಾಟ್ ರಸ್ತೆಗೆ ನಿಗದಿ ಮಾಡಿದ್ದರು. ಡಾ: ಆಚಾರ್ಯರವರು ನಮ್ಮ ಮುಂದಿಲ್ಲ. ಅವರ ಹತ್ತಿರ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನಾವು ಮತ್ತು ಅವರು ಕುಳಿತು ಚರ್ಚೆ ಮಾಡಿದಾಗ 47 ಕೋಟಿ ರೂಪಾಯಿಗಳನ್ನು ಆ ಘಾಟ್ ರಸ್ತೆಗಾಗಿ ಇಟ್ಟರು. ಅದರಲ್ಲಿ 27 ಕೋಟಿ ರೂಪಾಯಿಗಳನ್ನು ಉಡುಪಿ ಜಿಲ್ಲೆಗೆ ಮತ್ತು 20 ಕೋಟಿ ರೂಪಾಯಿಗಳನ್ನು ಮಾನ್ಯ ಕಿಮ್ಮನೆ ರತ್ನಾಕರ್‌ವರ ಕ್ಷೇತ್ರಕ್ಕೆ ಅಂದರೆ, ಶಿವಮೊಗ್ಗ ಜಿಲ್ಲೆಯ ಭಾಗಕ್ಕೆ ಸೇರಿಸಿ ಅದನ್ನು ಅಭಿವೃದ್ಧಿಪಡಿಸಿ ಎಂದು ಹೇಳಿದ್ದರು. ಆದರೆ, ಅದಕ್ಕೆ ಇಟ್ಟಂಥ ಹಣವನ್ನು ಇವತ್ತಿನವರೆಗೆ ಖರ್ಚು ಮಾಡುವುದಕ್ಕೆ ಈ ಸರ್ಕಾರದಿಂದ ಆಗಲಿಲ್ಲ. ಅವರು ಹೇಳುವಂಥ ಒಂದು ಕುಂಟುನೆಪ ಏನೆಂದರೆ, ಉಡುಪಿಯಲ್ಲಿ ಕೆಡಿಪಿ ಸಭೆಯನ್ನು ಮಾನ್ಯ ಕೋಟಾ ಶ್ರೀನಿವಾಸ್ ಪೂಜಾರ್‌ರವರ ಅಧ್ಯಕ್ಷತೆಯಲ್ಲಿ ಮಾಡಿದಂಥ ಸಂದರ್ಭದಲ್ಲಿ ಅದು ಅರಣ್ಯಕ್ಕೆ ಬರುತ್ತದೆಂದು ಹೇಳಿದರು. ಖಂಡಿತ ಅದು ಅರಣ್ಯಕ್ಕೆ ಬರುವುದಿಲ್ಲವೆಂದು ನಾವೆಲ್ಲರೂ ಹೇಳಿದೆವು. ಮತ್ತೆ ಲೋಕೋಪಯೋಗಿ ಮತ್ತು ಅರಣ್ಯ ಇಲಾಖೆಗಳು ಸೇರಿ joint survey ಮಾಡಿ ಎಂದ ಹೇಳಿದೆವು. ಆನಂತರ ಅಲ್ಲಿ joint survey ಮಾಡಿ ನೋಡಿದಾಗ ಅವರು ಹೇಳಿರುವಂಥದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂಥ ವಿಚಾರವಾಗಿತ್ತು. ಬ್ರಿಟಿಷ್ ಸರ್ಕಾರದ ಕಾಲದಲ್ಲಿ 40 ಮೀಟರ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಕಾಯ್ದಿರಿಸಿ ಉಳಿದದ್ದನ್ನು ಅರಣ್ಯ ಇಲಾಖೆಗೆ ಕೊಟ್ಟಿದ್ದಾರೆ. 40 ಮೀಟರ್ ರಸ್ತೆಯಲ್ಲಿ four ways ರಸ್ತೆಯನ್ನು ಮಾಡುವಷ್ಟು ಜಾಗ ಇರುವುದರಿಂದ ಅದನ್ನು ಮಾಡಿ ಎಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳಿಗೆ ನಾನು ಅನೇಕ ಬಾರಿ ಹೇಳಿದ್ದೇನೆ. ಅದರೆ, ಆ ಪ್ರಸ್ತಾವನೆ ಇನ್ನೂ ಕೂಡ ಬಹುಶ: ಮುಖ್ಯ ಇಂಜಿನಿಯರ್ ಕಚೇರಿ ಅಥವಾ ಲೋಕೋಪಯೋಗಿ ಇಲಾಖೆಯ ಸಚಿವರ ಕಚೇರಿಯಲ್ಲಿ ಕೊಳೆಯುತ್ತಿರುವುದನ್ನು ಬಿಟ್ಟರೆ ಇನ್ನೂ ಕೂಡ ಆ ಘಾಟ್ ರಸ್ತೆಯನ್ನು ದುರಸ್ತಿ ಮಾಡುವಂಥ ಸಂಕಲ್ಪ, ಮನಸ್ಸು ಈ

ಸರ್ಕಾರಕ್ಕೆ ಬರಲಿಲ್ಲ. ಮತ್ತೆ ಭಾರತ ಸರ್ಕಾರದ ಅನುದಾನದಿಂದ ಎರಡು National Highway ಗಳನ್ನು ಲಿಂಕ್ ಮಾಡತಕ್ಕಂಥ ಅಂದರೆ, ಉಡುಪಿಯಲ್ಲಿರುವ National Highway 17 ಮತ್ತು ತೀರ್ಥಹಳ್ಳಿಯಲ್ಲಿರುವ National Highway 13 ಅನ್ನು ಲಿಂಕ್ ಮಾಡುವಂಥ ಒಂದು ಪ್ರಸ್ತಾವನೆಗೆ ಸಂಬಂಧಪಟ್ಟಂತೆ National Highway Authority ರವರಿಂದ ಒಂದು ಎಸ್ಟಿಮೇಟ್ ಮಾಡುವುದಕ್ಕೆ ಭಾರತ ಸರ್ಕಾರದ ಮಂತ್ರಿಗಳಾದಂಥ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಪತ್ರ ಬರೆದು ಕಳುಹಿಸಿದರು. ಆ ಪತ್ರವನ್ನು ರೆಫರ್ ಮಾಡಿ ಎಸ್ಟಿಮೇಟ್ ಅನ್ನು ತಯಾರು ಮಾಡಿ ಮಾನ್ಯ ಲೋಕೋಪಯೋಗಿ ಇಲಾಖೆಗೆ ಕೊಟ್ಟು ಅವರಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕಳುಹಿಸಲಾಗಿತ್ತು. ಈ ಬಗ್ಗೆ ನಾನು ಅನೇಕ ಬಾರಿ ಪ್ರಸ್ತಾವನೆ ಮಾಡಿದ್ದೇನೆ. ಈ ವಿಚಾರ ಮಾನ್ಯ ಜೀವರಾಜ್‌ರವರಿಗೂ ಸಹ ಗೊತ್ತಿದೆ. ಮತ್ತೆ ಅವರ ಜೊತೆ ಸಹ ನಾನು ಮಾತನಾಡಿದ್ದೇನೆ. ಹಾಗೆಯೇ ಅವರ ಕ್ಷೇತ್ರವನ್ನು ಸಹ ಆ ರಸ್ತೆ ಸಂಪರ್ಕ ಮಾಡುತ್ತದೆ. ಮಾನ್ಯ ಕಿಮ್ಮನೆರತ್ನಾಕರ್‌ರವರು ಮತ್ತು ನಾನು ಅನೇಕ ಸಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಂಥ ಮಾನ್ಯ ಉದಾಸಿಯವರ ಹತ್ತಿರ ಹೋಗಿ ಕೇಳಿದಾಗ ಆ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಇದು ಸರ್ಕಾರದ ನೀತಿಯೇ? ಇದಕ್ಕೆ ನೀವು ಏನೂ ಖರ್ಚು ಮಾಡುವುದು ಬೇಡ. ಭಾರತ ಸರ್ಕಾರಕ್ಕೆ ಈ ಪ್ರಸ್ತಾವನೆಯನ್ನು ಕಳುಹಿಸಿ ಎಂದು ಹೇಳಿದರೆ ಇದನ್ನು ಕಳುಹಿಸುವುದಕ್ಕೆ ಆಗುವುದಿಲ್ಲವೆಂಬ ಉತ್ತರವನ್ನು ಕೊಟ್ಟರು. ಏಕೆ ಈ ರೀತಿಯಾದ ಉತ್ತರ ಕೊಟ್ಟರೆಂದು ಗೊತ್ತಾಗಲಿಲ್ಲ. ಇಂಥ ಪ್ರಗತಿಪರ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಇಚ್ಛಾಶಕ್ತಿಯ ಕೊರತೆಯನ್ನು ನಾವು ಈ ಸಂದರ್ಭದಲ್ಲಿ ಖಂಡಿತವಾಗಿ ಕಾಣುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನನ್ನ ತಾಲ್ಲೂಕಿನಲ್ಲಿ ಕಡತಲ ಗ್ರಾಮ ಇದೆ. ಅಲ್ಲಿ ಒಂದು ಸೇತುವೆಗೆ ಗ್ಯಾಮನ್ ಇಂಡಿಯಾ ಕಂಪನಿಗೆ ಟೆಂಡರ್ ಆಗಿ ಕಾಮಗಾರಿ ಪ್ರಾರಂಭವಾಯಿತು. ಪ್ರಾರಂಭವಾದ ಕಾಮಗಾರಿಯನ್ನು ನಿಲ್ಲಿಸಿ ಅಲ್ಲಿದಂಥ ಸಿಮೆಂಟ್, ಸ್ಟೀಲ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ಆದರೆ, Pillar ಗೆ

ತೋಡಿದ ಗುಂಡಿ ಮಾತ್ರ ಅಲ್ಲಿಯೇ ಇದೆ. ಕಳೆದಸಾರಿ ಒಬ್ಬ ಮೋಟರ್ ಬೈಕ್ ಸವಾರ ಆ ಗುಂಡಿಗೆ ಬಿದ್ದ. ಆ ಗುಂಡಿಯನ್ನು ದುರಸ್ತಿ ಮಾಡಿ ಎಂದು ಲೋಕೋಪಯೋಗಿ ಇಲಾಖೆಯ ಸಚಿವರಲ್ಲಿ ವಿನಂತಿ ಮಾಡಿದ್ದೇವೆ. ಆದರೆ, ಅವರು ಆ ಕಡೆಗೆ ಕಿವಿ ಕೊಡಲಿಲ್ಲ. ಬಹುಶ: ಅವರಿಗೆ ನಮ್ಮ ಮಾತು ಕೇಳುತ್ತಿದೆಯೋ ಅಥವಾ ಇಲವೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮತ್ತೆ ನಮ್ಮ ಕಾರ್ಕಳ ಪುರಸಭೆಯ ವಿಚಾರದ ಬಗ್ಗೆ ಹೇಳುವುದಾದರೆ, ಮಾನ್ಯ ಉಪಾಧ್ಯಕ್ಷರು ಆ ಭಾಗಕ್ಕೆ ಬರುವುದರಿಂದ ಕಾರ್ಕಳ ಪುರಸಭೆಯ ವಿಚಾರ ಗೊತ್ತಿರುತ್ತದೆ. ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ 25 ವರ್ಷಗಳ ಹಿಂದೆ ನಿರ್ಮಾಣ ಮಾಡಿದಂಥ ಒಂದು ವಾಟರ್ ಟ್ಯಾಂಕ್ natural calamity ಯಿಂದ ಇದ್ದಕ್ಕಿದ್ದ ಹಾಗೆ ಬಿದ್ದು ಹೋಯಿತು. ಅದಕ್ಕೆ ಹಣ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಂಡೆವು. ಹಾಗೆಯೇ ಅವರಿಗೆ ಪತ್ರ ಸಹ ಬರೆಯಲಾಗಿತ್ತು. ಆದರೆ, ಇದುವರೆಗೆ ಒಂದು ನಯಾಪೈಸೆ ಕೊಟ್ಟಿಲ್ಲ. ಪುರಸಭೆಯಲ್ಲಿದ್ದಂಥ ಅನುದಾನದಿಂದ ಟ್ಯಾಂಕ್ ಅನ್ನು ಸಂಪೂರ್ಣ ಮಾಡಿ ನೀರು ಕೊಡತಕ್ಕಂಥ ಕೆಲಸ ಮಾಡಿದ್ದೇವೆ. ಕಾರ್ಕಳ ಪುರಸಭೆಗೆ ಒಂದು ಸುಸಜ್ಜಿತವಾದ ಮಾರುಕಟ್ಟೆ ಬೇಕಾಗಿದೆ. ಅಂದರೆ, ಮೀನು ಮತ್ತು ತರಕಾರಿ ಮಾರಾಟ ಮಾಡಲು daily market ಒಂದು ಬೇಕೆಂದು 2.5 ಕೋಟಿ ರೂಪಾಯಿಗಳ ಅನುದಾನ ಕೇಳಿದರೆ ಇವತ್ತಿನವರೆಗೆ ಒಂದು ನಯಾಪೈಸೆ ವಿಶೇಷ ಅನುದಾನವನ್ನು ಕೊಟ್ಟಿಲ್ಲ. ಕಾರ್ಕಳ ಪುರಸಭೆಯ ಬಂಡಿಮಠದಲ್ಲಿ ಹೊಸ ಬಸ್ ನಿಲ್ದಾಣ ಮಾಡಬೇಕು, ಅದಕ್ಕಾಗಿ ಹಣ ಕೊಡಿ ಎಂದು ಕೇಳಿದರೆ ಅದಕ್ಕೂ ಸಹ ಒಂದು ನಯಾಪೈಸೆ ಕೊಟ್ಟಿಲ್ಲ. ಎರಡು ಕೋಟಿ ರೂಪಾಯಿ ವೆಚ್ಚ ಮಾಡಿ ಅಲ್ಲಿ ಬಸ್ ನಿಲ್ದಾಣ ಮಾಡಿದ್ದೇವೆ. ಬಸ್ ನಿಲ್ದಾಣವನ್ನು ಉದ್ಘಾಟನೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳನ್ನು ನಾವು ಕರೆದಿದ್ದೆವು. ಅವರು ಬಂದಾಗ ಅವರನ್ನು ಸ್ವಾಗತ ಮಾಡಿದ್ದೇವೆ. ನಮಗೆ ಅನುದಾನ ಕೊಡಿ ಎಂದು ಕೇಳಿದ್ದಕ್ಕೆ 10 ಕೋಟಿ ರೂಪಾಯಿ ಕೊಡುತ್ತೇನೆಂದು ಆ ಸಂದರ್ಭದಲ್ಲಿ ಅವರು ಘೋಷಣೆ ಮಾಡಿದರು. ಅದು ಪತ್ರಿಕೆಯಲ್ಲಿಯೂ ಸಹ ಅವರು ಹೇಳಿರುವದು ಬಂದಿದೆ. ಆದರೆ, ಒಂದು ಪೈಸೆ ಕೊಟ್ಟಿಲ್ಲ. ಪೇಟೆ ರಸ್ತೆಯ ಅಗಲ ಕಿರಿದಾಗಿದೆ. ಆದ್ದರಿಂದ ಪೇಟೆ ರಸ್ತೆಯನ್ನು ಅಗಲೀಕರಣ ಮಾಡಬೇಕಾಗಿರುವುದರಿಂದ ಇದಕ್ಕೆ ಒಂದು ಯೋಜನೆ ಮಾಡೋಣವೆಂದು ದಿವಂಗತ ಡಾ: ಆಚಾರ್ಯರವರ

ಸಹಕಾರದಿಂದ ಪ್ರಯತ್ನ ಮಾಡಿದಾಗ ಅದಕ್ಕೆ 5 ಕೋಟಿರೂಪಾಯಿ ಕೊಡುತ್ತೇನೆಂದು ಹೇಳಿದರು. ರಸ್ತೆಗೆ 10 ಕೋಟಿ ರೂ.ಗಳು ರಸ್ತೆಯ ಅಗಲೀಕರಣಕ್ಕೆ 5 ಕೋಟಿ ರೂ.ಗಳನ್ನು ಕೊಡುತ್ತೇನೆಂದು ಹೇಳಿದ್ದರು. ಈ ಬಗ್ಗೆ ಘೋಷಣೆಯಾಗಿ ಪತ್ರಿಕೆಯಲ್ಲಿ ಬಂದಿದೆ. ಇದಕ್ಕೆ ಯಾರು ತಡೆ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ. ಬಹುಶ: ಯಾವುದೋ ಒಂದು ಕಾಣದ ಕೈ ಇದರಲ್ಲಿ ಹಸ್ತಕ್ಷೇಪ ಮಾಡುತ್ತಿದೆಯಾ ಎನ್ನತಕ್ಕಂಥ ಒಂದು ಸಂಶಯ ಕೂಡ ನನಗೆ ಬರುತ್ತಿದೆ. ಎರಡು ಚರಂಡಿಗಳನ್ನು ಮಾಡುವುದಕ್ಕೆ 2 ಕೋಟಿ ರೂ.ಗಳನ್ನು ಕೊಟ್ಟಿರುವುದನ್ನು ಬಿಟ್ಟರೆ ಏನೂ ಕೊಟ್ಟಿಲ್ಲ. ರಸ್ತೆ ಅಗಲೀಕರಣದ ಪ್ರಸ್ತಾವನೆ ಶೇಕಡ 75 ರಷ್ಟು ಪುರಸಭೆ ಮಾಡಿದೆ. ಇನ್ನೂ ಕೂಡ ಅದನ್ನು ಬಿಡಲಿಕ್ಕೆ ಆಗದೇ ಇರವಂತಹ ಅನೇಕ ಕಾಣದ ಕೈಗಳ ಹಸ್ತಕ್ಷೇಪ ಅಲ್ಲಿ ನಡೆಯುತ್ತಿದೆ. ಆಸುಪಾಸಿನ ಪುರಸಭೆಗಳಿಗೆ ಮಾಡಿ ನನ್ನ ಆಕ್ಷೇಪ ಇಲ್ಲ. ನಮ್ಮ ಜಿಲ್ಲೆಯ ಬೇರೆ ಪುರಸಭೆಗಳಿಗೆ ವಿಶೇಷ ಅನುದಾನ ಕೊಟ್ಟಿದ್ದಕ್ಕೆ ನನ್ನ ಆಕ್ಷೇಪಣೆ ಇಲ್ಲ. ನಮಗೆ ಘೋಷಣೆ ಮಾಡಿದ್ದನ್ನಾದರೂ ಕೊಡಬಹುದಾಗಿತ್ತಲ್ಲ. ನಾನು ಮೂರು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಮಾನ್ಯ ಯಡಿಯೂರಪ್ಪನವರಿಗೆ ಕೊಟ್ಟಿದ್ದೇನೆ. ಹಣ ಬಿಡುಗಡೆ ಮಾಡಿ ಎಂದು ಪತ್ರ ಬರೆದಿರುವ ಛಾಯಪ್ರತಿ ಇದೆ. ಆಮೇಲೆ ಮಾನ್ಯ ಸದಾನಂದಗೌಡರಿಗೆ ಕೊಟ್ಟಿದ್ದೇನೆ, ಅವರು ಬರೆದಿದ್ದಾರೆ. ಹೌದು, ನಾನು ಘೋಷಣೆ ಮಾಡಿದ್ದೇನೆ, ನಾನು ಕೊಡುತ್ತೇನೆ ಎಂದು ಹೇಳಿ ಅವರು ಹೊರಟು ಹೋಗಿ ಬಿಟ್ಟರು. ಆಮೇಲೆ ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಪತ್ರವನ್ನು ಕೊಟ್ಟಿದ್ದೇನೆ. ಈ ರೀತಿ ಅಭಿವೃದ್ಧಿ ಮಾಡಲಿಕ್ಕೆ ಹಣ ಕೊಡಿ, ನಮ್ಮ ಮನೆಗೆ ಅಲ್ಲ. ನಾನು ಕಾಂಗ್ರೆಸ್ ಶಾಸಕನಾಗಿ ಇರಬಹುದು. ಕಾರ್ಕಳ ಪುರಸಭೆ ಕಾಂಗ್ರೆಸ್ ಇರಬಹುದು. ಆದರೆ ಇಲ್ಲಿ ಬಿಜೆಪಿ ಸರ್ಕಾರ ಇರಬಹುದು. ಆದರೆ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡುವಂಥದ್ದು ಸರ್ಕಾರದ ಕರ್ತವ್ಯ ಇದೆ. ಒಂದು ನಯಾಪೈಸೆ ಕೊಡಲಿಲ್ಲ. ಪತ್ರದಲ್ಲಿ ಮಾತ್ರ ಬರೆದಿದ್ದಾರೆ. ಎಲ್ಲಾ ಪತ್ರಗಳ ಪ್ರತಿ ಕೂಡ ಇದೆ. ಇದು ಯಾವ ನ್ಯಾಯ? ಈ ರೀತಿಯ ನ್ಯಾಯವೆ? ಇದು ಖಂಡಿತ ಸರಿಯಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದರ ಜೊತೆಗೆ ವಿದ್ಯುತ್ತಿನ ಬಗ್ಗೆ ಬಹಳಷ್ಟು ಚರ್ಚೆ ಆಯಿತು. ನಮ್ಮ ಜಿಲ್ಲೆಯಲ್ಲಿ UPC ನಂದಿಕೂರಿನಲ್ಲಿದೆ. ಬಹಳ ವಿರೋಧ ಒಂದು ಕಡೆ ಇದೆ. ಕಾರ್ಕಳದವರು ನಾವು ಯಾವುದಕ್ಕೂ ಹೋಗಿಲ್ಲ. ನಮ್ಮಲ್ಲಿ

20 ವರ್ಷಗಳ ಹಿಂದೆ KMR sub-station ನ್ನು ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳು ಇರುವಾಗ ಮಾಡಿದ್ದರು. ಆ ಮಂಗಳೂರು sub-station ಬಿಟ್ಟರೆ ಅದೇ ಇರುವುದು. ಬಹುಶ: ಸುಳ್ಯ, ಪುತ್ತೂರು, ಬೆಳ್ತಂಗಡಿ ಜೊತೆಗೆ ಹಾಸನ, ಸಕಲೇಶಪುರಕ್ಕೂ ಕೂಡ ಅಲ್ಲಿಂದಲೇ ಪವರ್ ನಮ್ಮ ತಾಲ್ಲೂಕಿಗೆ ಬರುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ನಾನು ಮೊನ್ನೆ ಪ್ರಸ್ತಾಪ ಮಾಡಿದ್ದೆ. 11–12 ದೊಡ್ಡ ದೊಡ್ಡ ಹೈ ಟೆನ್ಷನ್ ವೈರ್‌ಗಳು ನಮ್ಮ ತಾಲ್ಲೂಕಿನಲ್ಲಿ ಹೋಗುತ್ತಿವೆ. ಬಹುತೇಕ ಜಾಗಗಳನ್ನು ಬಿಟ್ಟಿದ್ದೇವೆ. ನಾವು ತ್ಯಾಗ ಮಾಡಿದ್ದೇವೆ. ಆದರೆ ಇವತ್ತು ನಮಗೆ ಕರೆಂಟ್ ಇಲ್ಲ. ನಂದಿಕೂರಿನಿಂದ ಕರೆಂಟ್ ಬರುವುದು, ಕಾರ್ಕಳಕ್ಕೆ ಪವರ್ ಬಂದು ಅಲ್ಲಿಂದ distribution ಆಗುತ್ತಿದೆ. Distribution ಗೆ ಲೈನ್ ಕೊಟ್ಟಿದ್ದೇವೆ. ನಮಗೆ ವಿದ್ಯುತ್ತೇ ಇಲ್ಲ. ಕಾರ್ಕಳಕ್ಕೆ ಕುಡಿಯುವ ನೀರು ಸರಬರಾಜಿಗೆ ಒಂದು ಗಂಟೆ ಬರುತ್ತಿಲ್ಲ. ನೀರು ಕೊಡುವುದಕ್ಕೆ ವಿದ್ಯುತ್ ಇಲ್ಲ. ದಯವಿಟ್ಟು ಒಂದು ವ್ಯವಸ್ಥೆಯನ್ನು ಮಾಡಬೇಕು. ಬಹುಶ: ಇತ್ತೀಚಿನ ದಿವಸಗಳಲ್ಲಿ ವಿಪರೀತ ವಿದ್ಯುತ್ತಿನ ಕೊರತೆ ಇದೆ. ಇವತ್ತು ವಿದ್ಯುತ್ತು ಬೇಕಾದಷ್ಟು ಇದೆ. ನಾವು ನಿರಂತರ ಜ್ಯೋತಿಯನ್ನು ನೋಡಿಯೇ ಇಲ್ಲ. ನಮ್ಮ ಜಿಲ್ಲೆ ಮತ್ತು ತಾಲ್ಲೂಕಿನ ಬಗ್ಗೆ ತಮಗೆ ಗೊತ್ತಿದೆ. ಈ ವ್ಯವಸ್ಥೆಯನ್ನು ಸರಿಪಡಿಸುವ ಒಂದು ಪ್ರಸ್ತಾಪವೂ ಕೂಡ ಇಲ್ಲ. ನಾವು ಎಲ್ಲಾ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ವಿಷಯ ಪ್ರವಾಸೋದ್ಯಮದ ಬಗ್ಗೆ ಹೇಳಬೇಕೆಂದರೆ, ನಮ್ಮ ಜಿಲ್ಲೆಯ ಜನ ಆತ್ಮಾವಲೋಕನ ಮಾಡಿಕೊಳ್ಳಬೇಕು. ಮಂತ್ರಿಗಳಿಗೆ ಅನೇಕ ಬಾರಿ ಪತ್ರವನ್ನು ಕೊಟ್ಟಿದ್ದೇನೆ. ಪಕ್ಕದ ಗೋವಾ ಪ್ರವಾಸೋದ್ಯಮದಲ್ಲಿ ಅತ್ಯಂತ ಮುಂದೆ ಹೋಗಿದೆ. ಕೇರಳ ಕೂಡ ಅತ್ಯಂತ ಮುಂದೆ ಇದೆ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಅವಕಾಶ ಇದೆ. ನಮ್ಮಲ್ಲಿ ಬೇಕಾದಷ್ಟು ಬೀಚ್‌ಗಳು ಇವೆ. ಏನು ಅಭಿವೃದ್ಧಿ ಆಗಿದೆ? ಏನೂ ಅಭಿವೃದ್ಧಿ ಆಗಿಲ್ಲ, ಒಂದು ಹೋಟೆಲ್ ಮಲ್ಪೆಯಲ್ಲಿ ಮಾಡಿ ಅದನ್ನು ಖಾಸಗಿ ಯವರಿಗೆ ಕೊಟ್ಟಿದ್ದು ಬಿಟ್ಟರೆ ಬೇರೆ ಏನೂ ಕೂಡ ಇಲ್ಲ. ನಮ್ಮಲ್ಲಿ ಪ್ರವಾಸಿಗರು ಬರುತ್ತಾರೆ. ಉಡುಪಿಗೆ ಯಾತ್ರಿಗಳ ಬರುತ್ತಾರೆ. ಕಾರ್ಕಳಕ್ಕೆ ಜೈನ್ ಯಾತ್ರಿಗಳು ಬರುತ್ತಾರೆ. ವರಂಗಕ್ಕೆ ಜೈನ್ ಯಾತ್ರಿಗಳು ಬರುತ್ತಾರೆ. ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಈ ಹಣ ಎಲ್ಲಿ ಹೋಗುತ್ತದೆಂದು ನಮಗೆ ಗೊತ್ತಾಗುವುದಿಲ್ಲ ಒಂದಷ್ಟು ಕೂಡ ನಮ್ಮ ಜಿಲ್ಲೆಯ ಕಡೆಗೆ ಬರಲಿಲ್ಲ. ನಮ್ಮಲ್ಲಿ ಬರೀ ಬೀಚ್ ಮಾತ್ರ ಪ್ರವಾಸೋದ್ಯಮ

ಅವಕಾಶ ಅಲ್ಲ. ನಮ್ಮಲ್ಲಿ ಬಹಳಷ್ಟು ಫಾಲ್ಸ್‌ಗಳು ಇವೆ. ನಮ್ಮ ತಾಲ್ಲೂಕಿನಲ್ಲಿ ತಾವು ಕೇಳಿರಬಹುದು. ಕೂಡ್ಲ ಫಾಲ್ಸ್ ಎಂದು ಇದೆ. 3–4 ಜಿಲ್ಲೆಯಿಂದ ಜನ ಬರುತ್ತಾರೆ. ಹೋಗಲಿಕ್ಕೆ ಒಂದು ದಾರಿ ಕೂಡ ಇಲ್ಲ. ನಡೆದುಕೊಂಡು ಹೋಗಲಿಕ್ಕೆ ಆಗದಂಥ ಒಂದು ವ್ಯವಸ್ಥೆ ಇದೆ. ಇದು ಎಲ್ಲಿಂದ ಸಾಧ್ಯವಾಗುತ್ತದೆ? ನಮ್ಮ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಮಾಡಲಿಕ್ಕೆ ಸಾಧ್ಯವಿದೆಯಾ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದರ ಜೊತೆಗೆ ಎಷ್ಟರಮಟ್ಟಿಗೆ ಅಭಿವೃದ್ಧಿಗೆ ತಡೆ ಆಗುತ್ತಿದೆ ಎಂದರೆ, ನಾನು ಕಳೆದ ಬಾರಿ ಶಾಸಕನಾಗಿರುವಾಗ ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮ ನನ್ನ ಹುಟ್ಟೂರು. ನಾನು ಇದ್ದ ಆ ಊರು ತಮಗೆ ಗೊತ್ತಿರಬಹುದು. ಅಲ್ಲಿ 105 ಸರ್ವೆ ನಂಬರ್ ಎಂದಿದೆ. ಅಲ್ಲಿ 1500 ಎಕರೆ ಸರ್ಕಾರಿ ಜಾಗ ಇದೆ, ಅರಣ್ಯವೇ ಇಲ್ಲ. ಅದರಲ್ಲಿ ಒಂದು ನವೋದಯ ಶಾಲೆ ಇದೆ. ಭಾರತ ಸರ್ಕಾರದ ಎರಡು ಜಿಲ್ಲೆಗಳಿಗೆ ಒಟ್ಟು ಸೇರಿ ಒಂದು ಜವಾಹರ ನವೋದಯ ಶಾಲೆ ಇದೆ. ಆ ನವೋದಯ ಶಾಲೆಗೆ ಹೆಚ್ಚು ಕಡಿಮೆ 50 ಕೋಟಿ ರೂ.ಗಳ ಒಂದು ಅಸೆಟ್ ಅಲ್ಲಿದೆ. ಭಾರತ ಸರ್ಕಾರ ಅಷ್ಟೊಂದು ಕೊಟ್ಟಿದೆ. ಅದು ಒಂದು ಯೂನಿವರ್ಸಿಟಿ ಕ್ಯಾಂಪಸ್ ತರಹ ಇದೆ. ಇಡೀ ನಮ್ಮ ದಕ್ಷಿಣ ಭಾರತದಲ್ಲಿ ಅತ್ಯಂತ ಉತ್ತಮ ಫಲಿತಾಂಶ ಕೊಡತಕ್ಕಂಥ ನವೋದಯ ಶಾಲೆ ಇದೆ. ಇನ್ನು 4 ಶಾಲೆಗಳು ಇವೆ. ಆಸ್ಪತ್ರೆಯ ಕಟ್ಟಡಗಳು ಇವೆ. ಮಾರ್ಕೆಟ್ ಕಟ್ಟಡ ಕೂಡ ಇದೆ. 800 ಕುಟುಂಬಕ್ಕೆ ಹಕ್ಕು ಪತ್ರಗಳನ್ನು ಕೊಟ್ಟು ಅವರು ವಾಸ್ತವ್ಯ ಇದ್ದಾರೆ. ಇನ್ನುಳಿದ 200 ಕುಟುಂಬಗಳಿಗೆ ಹಕ್ಕುಪತ್ರವನ್ನು ಕೊಟ್ಟಾಗ ಕಳೆದ ಬಾರಿ ಯಾರೋ ಒಂದು ಕುತಂತ್ರವನ್ನು ಮಾಡಿ ಇದು ಒಂದು ವನ್ಯಜೀವಿ ಪ್ರದೇಶ ಎಂದು ಪತ್ರವನ್ನು ಬರೆಯಿಸಿ ಕಂದಾಯ ಇಲಾಖೆಯ ಅಧಿಕಾರಿಗಳು 200 ಕುಟುಂಬದ ಹಕ್ಕುಪತ್ರವನ್ನು ರದ್ದು ಪಡಿಸಿದ್ದಾರೆ. ಆ ಫಲಾನುಭವಿಗಳು ಮಾನ್ಯ ಲೋಕಾಯುಕ್ತರ ಗಮನಕ್ಕೆ ತಂದಾಗ ವೆಂಕಟಾಚಲಯ್ಯನವರು ಸ್ಥಳ ಪರಿಶೀಲನೆ ಮಾಡಿ ತನಿಖೆ ಮಾಡಿ ಎಲ್ಲಾ ಇಲಾಖೆಗಳನ್ನು ಕರೆಯಿಸಿ 'ಇದು ಅರಣ್ಯ ಅಲ್ಲ, ವನ್ಯಜೀವಿ ಪ್ರದೇಶ ಅಲ್ಲ. ಇದು ಜನ ವಾಸ್ತವ್ಯ ಇರತಕ್ಕಂಥ ಪ್ರದೇಶ ಇದು ಮಾಡದ್ದು ತಪ್ಪು' ಎಂದು ಹೇಳಿದರೆ, ಸರ್ಕಾರ ಆ ಕಡೆಗೆ ತಲೆ ಕೊಟಿಲ್ಲ. ಅಲ್ಲಿ ಕಾಣದ ಕೈಗಳ ಹಸ್ತಕ್ಷೇಪ ಇದೆ ಎಂದು ನನಗೆ ಸಂಶಯ ಬರುತ್ತಿದೆ. ಅಷ್ಟಾದರೂ ಕೇಳದೇ ಫಲಾನುಭವಿಗಳು ಇಬ್ಬರು ಹೈಕೋರ್ಟಿಗೆ ಹೋದರು. 5 ಸೆಂಟ್ಸ್ ಜಾಗವನ್ನು ಕೊಟ್ಟಂಥ ಫಲಾನುಭವಿಗಳು

ಹೈಕೋರ್ಟಿಗೆ ಹೋದಾಗ ಹೈಕೋರ್ಟ್ ಕೂಡ ಹೇಳಿದೆ. ಇದು ಅರಣ್ಯ ಅಲ್ಲವೆಂದು ಹೇಳಿದೆ. ಇಷ್ಟು ಇರುವಾಗ ಕಳೆದ ಸಲ ನಾನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಅರಣ್ಯ ಮತ್ತು ವನ್ಯಜೀವಿ ಇಲಾಖೆಯವರು ಜಾಗ್ರತರಾಗಿ ಅಲ್ಲಿ ಸ್ಥಳ ಪರಿಶೀಲನೆ ಮಾಡಿ ವಾಸ್ತವಾಂಶವನ್ನು ನೋಡಿ ಅವರು ಒಂದು ಆದೇಶವನ್ನು ಮಾಡಿದ್ದಾರೆ. ತಾವು ನೋಡಿರಬಹುದು ವನ್ಯಜೀವಿ ಇಲಾಖೆಯವರು 2011ರ ಡಿಸೆಂಬರ್ 27 ರಂದು ಒಂದು ಆದೇಶವನ್ನು ಮಾಡಿ ಅದರಲ್ಲಿ ಏನು ಹೇಳಿದ್ದಾರೆಂದರೆ, ಈ ಚಾರಾ ಗ್ರಾಮ ವನ್ಯಜೀವಿ ಗ್ರಾಮ ಅಲ್ಲ, ಅರಣ್ಯ ಪ್ರದೇಶ ಅಲ್ಲವೆಂದು ಹೇಳಿದ್ದಾರೆ. ಕಂದಾಯ ಇಲಾಖೆ ಉಚ್ಛನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದೆ. ಎಷ್ಟು ನಗೆಪಾಟಲಿನ ವಿಚಾರ. ಅರಣ್ಯ ಇಲಾಖೆ ನಮ್ಮದು ಅಲ್ಲವೆಂದು ಹೇಳಿದರೂ ಕೂಡ ಕಂದಾಯ ಇಲಾಖೆ ಉಚ್ಛನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸುತ್ತಿದೆ, ಇದು ಸರ್ಕಾರ ಮಾಡಬೇಕಾದಂಥ ಕೆಲಸವೆ? ಅಥವಾ ಸರ್ಕಾರ ಬಡವರ ವಿರುದ್ಧ ಪ್ರತಿಕಾರಕ್ಕೆ ಹೋಗಿದೆಯಾ ಎನ್ನತಕ್ಕಂಥ ಸಂಶಯ ಬರುತ್ತಿದೆ. ಏಕೆಂದರೆ 2011 ರಿಂದ ಇಲ್ಲಿಯವರೆಗೆ ನಾನು ಕಂದಾಯ ಮಂತ್ರಿಗಳಿಗೆ ಪತ್ರವನ್ನು ಕೊಟ್ಟಿದ್ದೇನೆ. ಇಬ್ಬರು ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರವನ್ನು ಕೊಟ್ಟಿದ್ದೇನೆ. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ನಾಲ್ಕಾರು ಭಾರಿ ಮುಖತ: ಹೋಗಿ ನೋಡಿದ್ದೇನೆ. 2011 ರಲ್ಲಿ ಅರಣ್ಯ ಇಲಾಖೆ ಪ್ರಕಟಣೆಯನ್ನು ಹೊರಡಿಸಿ ಇದು ಅರಣ್ಯ ಅಲ್ಲವೆಂದು ಹೇಳಿದೆ. ಈಗ ಏಕೆ ಮೇಲ್ಮನವಿಯನ್ನು ಸಲ್ಲಿಸುತ್ತಿದ್ದೀರಿ? ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ ಒಂದೂವರೆ ವರ್ಷದಿಂದ ಇದನ್ನು ಸತಾಯಿಸುತ್ತಿದ್ದಾರೆ. ಇಲಾಖೆಯ ಅಧಿಕಾರಿಗಳು ಜವಾಬ್ದಾರರಾ ಅಥವಾ ಇದು ಸರ್ಕಾರದ ಜವಾಬ್ದಾರಿಯೇ ಎಂದು ನೋಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಇದು ಬಹಳ ಗಂಭೀರವಾದಂಥ ವಿಚಾರ. ಬಡವರ ಹೊಟ್ಟೆಗೆ ಹೊಡೆಯತಕ್ಕಂಥ ಕೆಲಸವನ್ನು ಅಧಿಕಾರಿಗಳು ಅಥವಾ ಸರ್ಕಾರವಾಗಲೀ ಮಾಡಬಾರದು. ಒಂದು ನಿವೇಶನ ಕೊಟ್ಟಿಲ್ಲ. 7–8 ವರ್ಷದ ಹಿಂದೆ ಕೊಟ್ಟಿರುವಂಥ ನಿವೇಶನವನ್ನು ಆ ನೂರಾರು ಕುಟುಂಬಗಳನ್ನು ಅತಂತ್ರರನ್ನಾಗಿ ಮಾಡತಕ್ಕಂಥ ಮಟ್ಟದಲ್ಲಿ ಉಚ್ಛನ್ಯಾಯಾಲಯವೇ ಹೇಳಿದರೂ ಕೂಡ ಅರಣ್ಯ ಇಲಾಖೆ ಇದು ನಮ್ಮದು ಅಲ್ಲವೆಂದು ಹೇಳಿದರೂ ಕೂಡ ಕಂದಾಯ ಇಲಾಖೆ ಇನ್ನೂ ಎಚ್ಚರವಾಗುವುದಿಲ್ಲ. ಇನ್ನೂ ನಿದ್ರೆಯಲ್ಲಿದೆಯಾ ಅಥವಾ

ಉದ್ದೇಶಪೂರ್ವಕವಾಗಿ ಮಾಡಿದೆಯಾ ಅಥವಾ ಇದರ ಹಿಂದೆ ಯಾವುದೋ ಒಂದು ಕಾಣದ ಕೈಗಳ ಹಸ್ತಕ್ಷೇಪ ಇದೆಯಾ ಅಥವಾ ಬಡವರಿಗೆ ನಿವೇಶನ ಸಿಗಬಾರದು ಎನ್ನತಕ್ಕಂಥ ಉದ್ದೇಶ ಇದೆಯಾ ಎನ್ನತಕ್ಕಂಥ ಸಂಶಯ ಕೂಡ ಬರುತ್ತಿದೆ. ಇದನ್ನು ಇನ್ನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯಾ ಎನ್ನತಕ್ಕಂಥ ವಿನಂತಿಯನ್ನು ಮಾಡುತ್ತೇನೆ. 2011ರಲ್ಲಿ ಅರಣ್ಯ ಇಲಾಖೆಯ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನವಾಗಿ ಇದು ಅರಣ್ಯ ಅಲ್ಲವೆಂದು ಗೆಜೆಟ್ ನೋಟಿಫಿಕೇಶನ್ ಆಗಿದೆ. ಇನ್ನೂ ಕೂಡ ಭಾರತದ ಸರ್ಕಾರದ ನವೋದಯ ಶಾಲೆ ಇರುವ ಜಾಗವನ್ನೂ ಕೂಡ ವನ್ಯ ಜೀವಿ ಪ್ರದೇಶವೆಂದು ಹೇಳುತ್ತಾರೆಂದರೆ, ಇದಕ್ಕಿಂತ ಇನ್ನೇನಾದರೂ ಕೆಟ್ಟ ಕೆಲಸ ಇದ್ದರೆ ನನಗೆ ಹೇಳಬೇಕು. ಈ ಸರ್ಕಾರ ಇನ್ನೂ ಎಚ್ಚರವಾಗುವುದಿಲ್ಲ. ಎಷ್ಟು ಪತ್ರವನ್ನು ಕೊಟ್ಟಿದ್ದೇನೆ! 4 ಸಲ ಇಲಾಖೆಯ ಅಧಿಕಾರಗಳ ಹತ್ತಿರ ಹೋಗಿದ್ದೇನೆ. ಇದಕ್ಕಿಂತ ಗಂಭೀರವಾದ ಲೋಪ, ಇದಕ್ಕಿಂತ ಜನ ವಿರೋಧ ಕೃತ್ಯ ಇನ್ನೊಂದು ಇಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮಲ್ಲಿರುವ ನೀರಿನ ಸಮಸ್ಯೆ ಬಗ್ಗೆ ಬಹುಗ್ರಾಮ ಯೋಜನೆಯಲ್ಲಿ ಎರಡು ಗ್ರಾಮಗಳು ಸೇರಿವೆ. ಎರಡು ಗ್ರಾಮಗಳಲ್ಲಿ ಒಂದು ದೊಡ್ಡ ಶಿಕ್ಷಣ ಸಂಸ್ಥೆ ನಿಟ್ಟೆ ಕ್ಯಾಂಪಸ್ ಇದೆ. ಅಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಕಲಿಯುತ್ತಿದ್ದಾರೆ. ಅಲ್ಲಿಗೆ ಒಂದು ಯೋಜನೆ ಸೇರಿದರೆ ಇನ್ನೊಂದು ಹೆಬ್ರಿಗೆ ಸೇರಿರುವ ದೊಡ್ಡ ಪಟ್ಟಣ. ಕೈಗಾರಿಕೆ ಇರುವಂಥ ಪ್ರದೇಶ. ಹೆಬ್ರಿಯಲ್ಲಿ ಏನೇನೋ ಮಾಡಿ 70% ಆಯಿತು. ಪಂಚಾಯಿತಿ ರಾಜ್ ಇಂಜಿನಿಯರಿಂಗ್ ವಿಭಾಗದವರು 70% ಮೂರು ವರ್ಷದಲ್ಲಿ ಕಾಮಗಾರಿ ಮುಗಿಸಿದರು. ನಿಟ್ಟೆಯಲ್ಲಿ 30% ಕಾಮಗಾರಿ ಮಾಡಿ ಗುತ್ತಿಗೆದಾರರು ಓಡಿ ಹೋದರು. ಆ ಕಂಟ್ರಾಕ್ಟ್‌ದಾರರನ್ನು ಯಾರು ಕರೆದುಕೊಂಡು ಬಂದಿದ್ದಾರೋ ಅವರು ಎಲ್ಲಿಯವರೋ ಅವರು ಬಂದು ಇಲ್ಲಿ ಕೆಲಸ ಮಾಡುವುದಕ್ಕೆ ಯಾರ ಹಸ್ತಕ್ಷೇಪ ಇದೆಯೋ ಅಥವಾ ಇಲಾಖೆಯ ಅಧಿಕಾರಿಗಳ ಮೇಲೆ ಕಪಿಮುಷ್ಟಿ ಇದೆಯಾ ಏನೆಂದು ಅರ್ಥವಾಗುತ್ತಿಲ್ಲ ಆದರೆ ಅವನು ಓಡಿ ಹೋಗಿದ್ದಾನೆ. ಅವರು ಹೋದ ಕೂಡಲೇ ಈಗ ಅದನ್ನು ಬೇರೆ ಕಂಟ್ರಾಕ್ಟ್‌ದಾರರಿಗೆ ಕೊಡಲಿಕ್ಕೆ ಇರುವ ಬದಲಿ ಪಟ್ಟಿಯನ್ನು ರದ್ದುಮಾಡಿ

ಬೇರೆಯವರಿಗೆ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಿ ಎಂದು ಹೇಳಿದರೆ ಇನ್ನು ಕೂಡ ಆ ಪಟ್ಟಿ ಇರುವ ಕಡತ ಕೊಳೆಯುತ್ತಿದೆ ಕುಡಿಯುವುದಕ್ಕೆ ನೀರು ಇಲ್ಲ. ಇನ್ನು ಹತ್ತು ಬಹು ಗ್ರಾಮ ಯೋಜನೆಗಳನ್ನು ನಾವು ಕೇಳಿದ್ದೆವು. ನಮ್ಮಲ್ಲಿ ಪ್ರಸ್ತಾವನೆ ಇದೆ. Natural sources, Western Ghats ನಿಂದ ನೀರು ಬರುತ್ತಿದೆ ಅದನ್ನು ಕೊಡಿ ಎಂದು ಹೇಳಿದರೆ, ಆ ಪ್ರಸ್ತಾವನೆಗಳಿಗೆ ಅನುಮೋದನೆ ಇಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರು ಗ್ರಾಮೀಣಾಭಿವೃದ್ಧಿ ಖಾತೆಯನ್ನು ಹೊಂದಿದ್ದಾರೆ. ಅವರು ನಮ್ಮ ಜಿಲ್ಲೆಗೆ ಬಂದಾಗ ಸಭೆಯಲ್ಲಿ ಹೇಳಿದೆವು. ಅವರು ಖಂಡಿತವಾಗಿ ಇನ್ನು ಒಂದು ವಾರದೊಳಗೆ ಮಾಡುತ್ತೇನೆ ಎಂದು ಹೇಳಿದರು. ಈಗ 10–15 ವಾರ ಹೋಯಿತು. ನಮ್ಮಲ್ಲಿ ಮಂಜೂರಾತಿ ಆಗಿಲ್ಲ. ಇದ್ದ ಕಾಮಗಾರಿಯನ್ನೂ ಮಾಡುತ್ತಿಲ್ಲ. ಬಹುಶ: ಎಲ್ಲಾ ಇಲಾಖೆಗಳಲ್ಲಿ ಏಕೆ ಹೀಗೆ ಆಗುತ್ತಿದೆ ಎಂದರೆ, ಸರ್ಕಾರಕ್ಕೆ ಇಲಾಖೆಯ ಮೇಲೆ ಹತೋಟಿ ಇಲ್ಲವೇ ಅಥವಾ ಇಲ್ಲಿ ಇಂತಹ ಪ್ರದೇಶಗಳಲ್ಲಿ ಕೆಲಸ ಆಗಬಾರದು ಎಂದು ಸರ್ಕಾರದ ಉದ್ದೇಶವಿದೆಯೇ ಎನ್ನುವ ಒಂದು ಸಂಶಯ ನನಗೆ ಬರುತ್ತಿದೆ. ಏಕೆಂದರೆ ನಮ್ಮ ತಾಲ್ಲೂಕಿನಲ್ಲಿ ಕೆಲಸವೇ ಆಗದಂತಹ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳನ್ನು ಹಿಡಿದಿಡುವಂತಹ ಕೆಟ್ಟ ಸಂಪ್ರದಾಯ ಇದೆ. ಕೆಲಸ ಮಾಡಲಿಕ್ಕೆ ಹೋದರೆ ನೀವು ಮಾಡಬೇಡಿ ಎಂದು ಯಾವುದೋ ರೀತಿಯ ಬೆದರಿಕೆ ಬರುತ್ತಿದೆ. ಇವರ ಕಾಲದಲ್ಲಿ ಕೆಲಸ ಆಗಬಾರದು ಎನ್ನುವ ಕೆಟ್ಟ ಸಂಸ್ಕೃತಿಯನ್ನು ಬಿಂಬಿಸುವಂತಹ ವ್ಯವಸ್ಥೆ ಇವತ್ತು ನಮ್ಮಲ್ಲಿ ಆಗುತ್ತಿದೆ. ಇದರಿಂದ ರಾಜ್ಯದ ಅಭಿವೃದ್ಧಿ ಆಗುವುದಿಲ್ಲ. ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಕಾನೂನು ಮಂತ್ರಿಯವರು 7 ಗಂಟೆಯೊಳಗೆ ಅಧಿವೇಶನ ಮುಗಿಯಬೇಕೆಂದು ಕೈ ಬೆರಳು ತೋರಿಸುತ್ತಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್:– ಇಲ್ಲ ಆ ರೀತಿ ಹೇಳಲ್ಲಿ. ಇನ್ನು 7 ಜನ ಮಾತನಾಡುವವರು ಇದ್ದಾರೆ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಗೋಪಾಲ ಭಂಡಾರಿ:– ಪರವಾಗಿಲ್ಲ 7 ಜನ ಇದ್ದಾರೆ ಎಂದು ಹೇಳಿದ್ದಾರೆ. ಖಂಡಿತವಾಗಿ ನಾನು ತಡ ಮಾಡುವುದಿಲ್ಲ. ಬಹುಶ: ನನಗನಿಸುತ್ತದೆ. ನಮ್ಮ ಪ್ರದೇಶದಲ್ಲಿ ಸರ್ಕಾರವೇ ಇದ್ದ ರೀತಿ ಕಾಣಿಸುತ್ತಿಲ್ಲ. ಇಲಾಖೆಯ ಅಧಿಕಾರಿಗಳನ್ನು ಯಾರೋ ಸರ್ಕಾರಕ್ಕೆ ಸಂಬಂಧಪಡದೇ ಇರುವವರು ನಿಯಂತ್ರಿಸತಕ್ಕಂಥ ವ್ಯವಸ್ಥೆ ಆಗುತ್ತಿದೆ. Protocol ವ್ಯವಸ್ಥೆಯಂತೂ

ಮಾಡುತ್ತಿಲ್ಲ. ಶಾಸಕರಿಗೆ ಗೊತ್ತೇ ಇಲ್ಲ. ಎಲ್ಲಾ ಮಾಜಿ ಶಾಸಕರುಗಳನ್ನು ಕರೆಯುತ್ತಾರೆ. ಬೇರೆ ಕ್ಷೇತ್ರಗಳಲ್ಲಿ ಮಾಜಿ ಶಾಸಕರು ಇದ್ದ ಹಾಗೆ, ಅವರನ್ನೂ ಕರೆದರೆ ಚಿಂತೆ ಇಲ್ಲ. ಎಲ್ಲಾ ಮಾಜಿ ಶಾಸಕರನ್ನು ಕರೆದರೂ ಚಿಂತೆ ಇಲ್ಲ. ನಮ್ಮಲ್ಲಿ Protocol ಇಲ್ಲ. ಅದರ ಜೊತೆಗೆ ನಮ್ಮಲ್ಲಿ ಇನ್ನಷ್ಟು ಗಂಭೀರವಾದಂತಹ ಲೋಪಗಳು ಬರುತ್ತಿವೆ. ನಮ್ಮ ಇಲಾಖೆಯ ಅಧಿಕಾರಿಗಳ ಮೇಲೆ ನಿರಂತರ ಒತ್ತಡಗಳು. ಕೆಲಸ ಮಾಡದೇ ಇರತಕ್ಕಂಥ ನಿಟ್ಟಿನಲ್ಲಿ ಒತ್ತಡಗಳು. ಅಲ್ಲಿ ಒಂದು ರೀತಿಯ ರಾಜಕೀಯ ಹಸ್ತಕ್ಷೇಪಗಳು. ಅದು ಸರ್ಕಾರಿ ಕಛೇರಿಗಳಾ ಅಥವಾ ಒಂದು ಪಕ್ಷದ ಕಛೇರಿಗಳಾ ಎಂದು ಸಂಶಯ ಬರುವಂತಹ ವಾತಾವರಣ ಕೂಡ ನಮ್ಮ ತಾಲ್ಲೂಕಿನಲ್ಲಿದೆ. ಆದ್ದರಿಂದ ಈ ಭಯದ ವಾತಾವರಣದಿಂದ ಒಮ್ಮೆ ಮುಕ್ತವಾಗುವಂತಹ ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆ. ಬಹುಶಃ ಇದರಲ್ಲಿ ಓದಿದಾಗ ನನಗೆ ಒಂದು ರೀತಿಯ ನಗು ಬಂದಿತು. ನಮ್ಮಲ್ಲಿ ಏನೋ ಇದೆ, ಅಲ್ಲಿ ಏನೋ ಆಗುತ್ತಿದೆ. ನಮ್ಮಲ್ಲಿ ನಡೆಯುವುದೇ ಬೇರೆ, ಈ ಪುಸ್ತಕದಲ್ಲಿರುವುದೇ ಬೇರೆ ಎನ್ನುವ ಭಾವನೆ ನನ್ನ ಮನಸ್ಸಿನಲ್ಲಿ ಬರುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಾದಂತಹ ಅವಶ್ಯಕತೆ ಇದೆ. ನಮ್ಮ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗುತ್ತಿವೆ. ಮಾನ್ಯ ಸದಾನಂದಗೌಡರು ಇರುವಾಗ ಒಂದು ವಿಶೇಷ ಅನುದಾನವನ್ನು ನಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಕೊಟ್ಟರು. ಅದನ್ನು ಏಕೆ ಕೊಟ್ಟರೋ, ಚುನಾವಣೆ ಉದ್ದೇಶದಿಂದ ಕೊಟ್ಟರೋ ಗೊತ್ತಿಲ್ಲ. ಲೋಕಸಭಾ ಚುನಾವಣೆಗಿಂತಲೂ ಹಿಂದೆ ಕೊಟ್ಟರು. ಆದೇಶ ಬರುವಾಗ ಶಾಸಕರ ಶಿಫಾರಸ್ಸಿನ ಮೇಲೆ ಈ ಕಾಮಗಾರಿಗಳನ್ನು ಅನುಮೋದನೆ ಮಾಡಲಾಗಿದೆ ಎಂದು ಹೇಳಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಆದೇಶದಲ್ಲಿದೆ. ನಮ್ಮ ಎಲ್ಲಾ 224 ಶಾಸಕರಿಗೂ ಹಾಗೆಯೇ ಬಂದಿದೆ ಎಂದು ನನ್ನ ಭಾವನೆ. ಆ ರೀತಿ ಆದೇಶ ಬಂದಿದೆ. ಆದೇಶದ ಪ್ರತಿ ನನ್ನ ಹತ್ತಿರ ಇದೆ. ಸ್ವಲ್ಪ ದಿನ ಹೋದ ನಂತರ ಆ ಆದೇಶದಲ್ಲಿ ಪರಿವರ್ತನೆ, ಇದು ವಿಚಿತ್ರ. ಈ ರೀತಿ ಯಾವ ರಾಜ್ಯದಲ್ಲಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಆದೇಶದಲ್ಲಿ 'ಶಾಸಕರ' ಬದಲಿಗೆ ಇದು 'ಮಾಜಿ ಶಾಸಕರ' ಶಿಫಾರಸ್ಸಿನ ಮೇಲೆ ಕಾಮಗಾರಿಗಳನ್ನು ಮಾಡಿದ್ದೇವೆ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಇದು Protocol ಸ್ವಾಮಿ! ಇಲ್ಲಿ ಹಕ್ಕುಚ್ಯುತಿ ಆಗಲಿಲ್ಲವೇ? ತಾವು ಅಧ್ಯಕ್ಷರು, ನಾವು ಶಾಸಕರು,

ನಮ್ಮ ಹಕ್ಕನ್ನು ರಕ್ಷಣೆ ಮಾಡತಕ್ಕಂಥ ಕೆಲಸ ತಾವು ಮಾಡಬೇಕು. ಇದನ್ನು ವಿಚಾರಣೆ ಮಾಡಬೇಕಾಗುತ್ತದೆ ಮಾನ್ಯ ಅಧ್ಯಕ್ಷರೆ. ಈ ರೀತಿಯ ಪತ್ರಗಳನ್ನು ಸರ್ಕಾರದ ಇಲಾಖೆಯ ಅಧಿಕಾರಿಗಳ ಮುಖೇನ ಕಳುಹಿಸುತ್ತಾರೆಂದರೆ ಇದಕ್ಕಿಂತ ಗಂಭೀರ ಲೋಪಗಳನ್ನು ಇನ್ನೊಮ್ಮೆ ಕಾಣಲಿಕ್ಕೆ ಸಾಧ್ಯವಿಲ್ಲ. ಇದು ಸರ್ಕಾರವೇ ಅಥವಾ ಜನಪ್ರತಿನಿಧಿಗಳನ್ನು ನಡೆಸಿಕೊಳ್ಳುವ ರೀತಿಯೇ ಇದು ಎನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಇಡಬೇಕಾಗುತ್ತದೆ ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರೆ, ನಾನು ಅಗಲೇ ಚಹರಾ ಗ್ರಾಮದ ಪ್ರಕರಣ ಹೇಳಿದೆ. ಒಂದೂವರೆ ವರ್ಷ ಆಗಿದೆ. ಏಳು ವರ್ಷಗಳಿಂದ ಬಡ ಫಲಾನುಭವಿಗಳು ಕಾಯುತ್ತಿದ್ದಾರೆ. 800 ಕುಟುಂಬಗಳಿಗೆ ಹಕ್ಕು ಪತ್ರ ಸಿಕ್ಕಿ ವಾಸ್ತವ್ಯ ಇರುವವರಿಗೆ mutation ಆಗುತ್ತಿಲ್ಲ. ಪಾಲುಪಟ್ಟಿ ಆಗುತ್ತಿಲ್ಲ, ಏನೂ ಕೂಡ ಆಗುತ್ತಿಲ್ಲ. ಆದ್ದರಿಂದ ಇಂತಹ ಗಂಭೀರವಾದಂತಹ ಪ್ರಕರಣಗಳನ್ನು ನೋಡತಕ್ಕಂಥ ಕೆಲಸ ತಮ್ಮಿಂದ ಆಗಬೇಕು. ಈ ರೀತಿಯ ರಾಜಕೀಯ ಹಸ್ತಕ್ಷೇಪಗಳು ಖಂಡಿತ ನಡೆಯಬಾರದು, ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಶೋಭೆ ತರುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನಾನು ಇನ್ನಷ್ಟು ಮಾತನಾಡಲಿಕ್ಕೆ ಹೋಗುವುದಿಲ್ಲ. ದಯವಿಟ್ಟು ಈ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರದಲ್ಲಿ ಮಾನ್ಯ ಸುರೇಶ್ ಕುಮಾರ್‌ರವರಂತಹ ಮಂತ್ರಿಗಳು ಎದುರುಗಡೆ ಇದ್ದಾರೆ. ಇದು ಸರಿಯೇ, ತಪ್ಪೇ ಎಂದು ಆತ್ಮಾವಲೋಕನ ಮಾಡಿ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಶಾಸಕರ ಬದಲಿಗೆ ಮಾಜಿ ಶಾಸಕರು ಎಂದು ಆದೇಶ ಮಾಡಿರುವಂತಹ ಸರ್ಕಾರದ ಇಲಾಖೆ, ಅಧಿಕಾರಿಗಳು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಇಚ್ಛಾಶಕ್ತಿಯನ್ನು ತಾವು ವ್ಯಕ್ತಪಡಿಸಬೇಕು, ಅದನ್ನು ತೋರ್ಪಡಿಸಬೇಕೆಂದು ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಗಮನ ಸೆಳೆಯುವ ಸೂಚನೆ.

7. <u>ಗಮನ ಸೆಳೆಯುವ ಸೂಚನೆಗಳು</u>

ಅಧ್ಯಕ್ಷರು:- ಮಾನ್ಯ ರೇವಣ್ಣನವರು ಗಮನ ಸೆಳೆಯುವುದು. ಉತ್ತರ ಬಂದಿದೆಯಲ್ಲವೇ direct ಆಗಿ clarification ಕೇಳಿ.